ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ
ಸಂಚಾಲಕರು: ಕೆನರಾ ಬ್ಯಾಂಕ್

---

# ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ

# ಕರ್ನಾಟಕ

## 27.02.2025ರಂದು ನಡೆದ 168ನೇ ಎಸ್‌ಎಲ್‌ಬಿಸಿ ಸಭೆಯ ನಡಾವಳಿಗಳು

**ಸ್ಥಳ**

**ಕೊಠಡಿ ಸಂಖ್ಯೆ 313, ವಿಧಾನಸೌಧ, ಬೆಂಗಳೂರು**

**(ಹೈಬ್ರಿಡ್ ಮೋಡ್ ಮೂಲಕ)**

**ಸಂಚಾಲಕರು(ಸಂಯೋಜಕರು)**

**ಪ್ರಧಾನ ಕಚೇರಿ: ಅನೆಕ್ಸ್, ಬೆಂಗಳೂರು**

**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**
**ಸಂಚಾಲಕರು: ಕೆನರಾ ಬ್ಯಾಂಕ್**

---

# 2024 ಡಿಸೆಂಬರ್ 31ರ ವರೆಗೆ ಅನ್ವಯವಾಗುವಂತೆ, 27.02.2025 ರಂದು ನಡೆದ 168 ನೇ ಎಸ್‌ಎಲ್‌ಬಿಸಿ ಸಭೆ ಮತ್ತು ಬ್ಯಾಂಕಿಂಗ್ ಅಂಕಿಅಂಶಗಳ ನಡಾವಳಿಗಳು

ಕರ್ನಾಟದ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತ(ಎಸಿಎಸ್&ಡಿಸಿ)ರಾದ ಶ್ರೀಮತಿ ಉಮಾ ಮಹಾದೇವನ್ ಅವರ ಅಧ್ಯಕ್ಷತೆಯಲ್ಲಿ 27.02.2025ರಂದು ಮಧ್ಯಾಹ್ನ 3.00 ಗಂಟೆಗೆ ಬೆಂಗಳೂರಿನ ವಿಧಾನಸೌಧದ ಕೊಠಡಿ ಸಂಖ್ಯೆ 313ರಲ್ಲಿ ಕರ್ನಾಟಕ ರಾಜ್ಯದ 168ನೇ ಎಸ್‌ಎಲ್‌ಬಿಸಿ ತ್ರೈಮಾಸಿಕ ಸಭೆ ಜರುಗಿತು. ಕೆನರಾ ಬ್ಯಾಂಕ್ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಭವೇಂದ್ರ ಕುಮಾರ್, ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ವಿತ್ತೀಯ(ಹಣಕಾಸು) ಸುಧಾರಣೆಗಳು ವಿಭಾಗದ ಸರ್ಕಾರದ ಕಾರ್ಯದರ್ಶಿ ಡಾ. ವಿಶಾಲ್. ಆರ್, ಕರ್ನಾಟಕ ಸರ್ಕಾರದ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್,ಮಿಷನ್ ನಿರ್ದೇಶಕಿ ಶ್ರೀಮತಿ ಶ್ರೀವಿದ್ಯಾ. ಪಿ, ನಬಾರ್ಡ್ ಮುಖ್ಯ ಮಹಾಪ್ರಬಂಧಕರು ಶ್ರೀ ಕೆವಿಎಸ್‌ಎಸ್‌ಎಲ್ ವಿ ಪ್ರಸಾದರಾವ್, ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಉಪ ಮಹಾಪ್ರಬಂಧಕರು ಶ್ರೀ ವಿ. ಹರಿಪ್ರಸಾದ್, ಎಸ್‌ಎಲ್‌ಬಿಸಿ ಕರ್ನಾಟಕದ ಸಂಚಾಲಕರು ಮತ್ತು ಕೆನರಾ ಬ್ಯಾಂಕ್ ಮಹಾಪ್ರಬಂಧಕರು ಶ್ರೀ ಎಂ. ಭಾಸ್ಕರ ಚಕ್ರವರ್ತಿ, ಸರ್ಕಾರಿ ಇಲಾಖೆಗಳು ಮತ್ತು ನಿಗಮಗಳ ಇತರೆ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಆಯುಕ್ತರು ಮತ್ತು ನಿರ್ದೇಶಕರು, ಆರ್‌ಬಿಐ, ನಬಾರ್ಡ್ ಮತ್ತು ವಿವಿಧ ಬ್ಯಾಂಕುಗಳ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿಗಳು ವೀಡಿಯೊ ಕಾನ್ಫರೆನ್ಸ್ ಮೂಲಕ ಸಭೆಯಲ್ಲಿ ಭಾಗವಹಿಸಿದ್ದರು.

ಎಸ್‌ಎಲ್‌ಬಿಸಿ ಕರ್ನಾಟಕದ ಸಂಚಾಲಕ(ಸಂಯೋಜಕ)ರಾದ ಶ್ರೀ ಎಂ. ಭಾಸ್ಕರ ಚಕ್ರವರ್ತಿ ಅವರು ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತ(ಎಸಿಎಸ್&ಡಿಸಿ)ರಾದ ಶ್ರೀಮತಿ ಉಮಾ ಮಹಾದೇವನ್, ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ವಿತ್ತೀಯ ಸುಧಾರಣೆಗಳು ವಿಭಾಗದ ಸರ್ಕಾರದ ಕಾರ್ಯದರ್ಶಿ ಡಾ. ವಿಶಾಲ್ ಆರ್, ನಬಾರ್ಡ್ ಮುಖ್ಯ ಮಹಾಪ್ರಬಂಧಕರು ಶ್ರೀ ಕೆವಿಎಸ್‌ಎಸ್‌ಎಲ್ ವಿ ಪ್ರಸಾದರಾವ್, ಆರ್‌ಬಿಐ ಉಪ ಮಹಾಪ್ರಬಂಧಕರು ಶ್ರೀ ಹರಿಪ್ರಸಾದ್ ಅವರನ್ನು ಸಭೆಗೆ ಸ್ವಾಗತಿಸಿದರು.

ಕೆನರಾ ಬ್ಯಾಂಕ್ ಕಾರ್ಯನಿರ್ವಾಹಕ ನಿರ್ದೇಶಕರು 2024 ಡಿಸೆಂಬರ್ ತನಕ ಕೊನೆಗೊಂಡ ತ್ರೈಮಾಸಿಕ ಅವಧಿಯ ವಿವಿಧ ಬ್ಯಾಂಕಿಂಗ್ ಯೋಜನೆಗಳ ಕಾರ್ಯಕ್ಷಮತೆಯ ಪರಿಷ್ಕೃತ ವಿವರ ಒದಗಿಸಿದರು.

**ಸಭೆಯಲ್ಲಿ ಹಂಚಿಕೊಂಡ ಪ್ರಮುಖಾಂಶಗಳು :**

**1. ವಿವಿಧ ಯೋಜನೆಗಳಲ್ಲಿ ಸ್ಥಾನ ಶ್ರೇಯಾಂಕಗಳು(2024 ಡಿಸೆಂಬರ್ ತನಕ ಅನ್ವಯವಾಗುವಂತೆ):**

* ಮುದ್ರಾ ಯೋಜನೆಯಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿದೆ.

* ಪ್ರಧಾನ ಮಂತ್ರಿ ಸ್ವನಿಧಿ ಯೋಜನೆಯಲ್ಲಿ ಕರ್ನಾಟಕ 4ನೇ ಸ್ಥಾನದಲ್ಲಿದೆ.

* ಕೃಷಿ ಮೂಲಸೌಕರ್ಯ ನಿಧಿ(ಎಐಎಫ್)ಯಲ್ಲಿ ಕರ್ನಾಟಕ 6ನೇ ಸ್ಥಾನದಲ್ಲಿದೆ.

* ಪಿಎಂಎಫ್‌ಎಂಇ(ಪ್ರಧಾನ ಮಂತ್ರಿಗಳ ಸೂಕ್ಷ್ಮ ಆಹಾರ ಉದ್ಯಮಗಳ ಔಪಚಾರೀಕರಣ) ಯೋಜನೆಯಲ್ಲಿ ಕರ್ನಾಟಕ 7ನೇ ಸ್ಥಾನದಲ್ಲಿದೆ.

**2. ಆದ್ಯತಾ ವಲಯದ ಸಾಲ ನೀಡಿಕೆಯಲ್ಲಿ ಸಾಧನೆ(2024 ಡಿಸೆಂಬರ್ ತನಕ ಅನ್ವಯವಾಗುವಂತೆ):**

*** ಕೃಷಿ:** ಗುರಿಯ 78% ಸಾಧಿಸಲಾಗಿದೆ.

*** ಎಂಎಸ್‌ಎಂಇ(ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು):** ಗುರಿಯ 77% ಸಾಧಿಸಲಾಗಿದೆ.

*** ಒಟ್ಟು ಆದ್ಯತಾ ವಲಯ:** ಗುರಿಯ 76% ಸಾಧಿಸಲಾಗಿದೆ.

**3. ದತ್ತಾಂಶ(ಡೇಟಾ) ಸಲ್ಲಿಕೆಯ ಅಗತ್ಯತೆ:**

* ಎಲ್ಲಾ ಸದಸ್ಯ ಬ್ಯಾಂಕ್‌ಗಳು ಎಸ್‌ಎಲ್‌ಬಿಸಿ ರಿವ್ಯಾಂಪ್ ಪೋರ್ಟಲ್‌ನಲ್ಲಿ ನಿಗದಿತ ಗಡುವಿನೊಳಗೆ ಸಮರ್ಪಕವಾದ ಮತ್ತು ನಿಖರವಾದ ಡೇಟಾ(ದತ್ತಾಂಶ) ಸಲ್ಲಿಸಬೇಕಾಗುತ್ತದೆ.

**4. ಸಾಮಾಜಿಕ ಭದ್ರತಾ ಯೋಜನೆಗಳು:**

* ರಾಜ್ಯದ ಪ್ರತಿಯೊಂದು ಬ್ಯಾಂಕ್ ಶಾಖೆಯು ಈ ಕೆಳಗಿನ ಪ್ರತಿಯೊಂದು ಸಾಮಾಜಿಕ ಭದ್ರತಾ ಯೋಜನೆಗಳಿಗೆ ದಿನಕ್ಕೆ ಕನಿಷ್ಠ 1 ಖಾತೆ ತೆರೆಯಬೇಕು:

* ಪಿಎಂಜೆಜೆಬಿವೈ(ಪ್ರಧಾನ ಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ)

* ಪಿಎಂಎಸ್ ಬಿವೈ(ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ)

* ಎಪಿವೈ(ಅಟಲ್ ಪಿಂಚಣಿ ಯೋಜನೆ)

* ಪಿಎಂಜೆಡಿವೈ(ಪ್ರಧಾನ ಮಂತ್ರಿ ಜನ್ ಧನ್ ಯೋಜನೆ)

ಈ ಉಪಕ್ರಮಗಳು ವಿವಿಧ ಬ್ಯಾಂಕಿಂಗ್ ಕಾರ್ಯಕ್ರಮಗಳ ಒಟ್ಟಾರೆ ಕಾರ್ಯಕ್ಷಮತೆ ಮತ್ತು ವ್ಯಾಪ್ತಿ ಹೆಚ್ಚಿಸುವ ಗುರಿ ಹೊಂದಿವೆ, ಹೆಚ್ಚಿನ ಜನರು ಸಾಮಾಜಿಕ ಭದ್ರತಾ ಯೋಜನೆಗಳ ಪ್ರಯೋಜನ ಪಡೆಯುವುದನ್ನು ಇವು ಖಚಿತಪಡಿಸುತ್ತವೆ.

**ಆರ್‌ಬಿಐ ಉಪ ಪ್ರಧಾನ ವ್ಯವಸ್ಥಾಪಕರು ಈ ಕೆಳಗಿನ ಪ್ರಮುಖ ಪರಿಷ್ಕೃತ ವಿವರಗಳನ್ನು ಒದಗಿಸಿದ್ದಾರೆ:**

## 1. ವಿಶಿಷ್ಟ ಮೇಲ್ವಿಚಾರಣಾ ಪೋರ್ಟಲ್ ಅಭಿವೃದ್ಧಿ:

* ಆರ್‌ಬಿಐ ಬೆಂಗಳೂರು, ಎಸ್‌ಎಲ್‌ಬಿಸಿ ಕರ್ನಾಟಕದ ಸಹಯೋಗದೊಂದಿಗೆ ವಿವಿಧ ನಿಯತಾಂಕಗಳ ಅಡಿ, ಜಿಲ್ಲೆಗಳ ಪ್ರಗತಿ ಮೇಲ್ವಿಚಾರಣೆ ಮಾಡಲು ಒಂದು ವಿಶಿಷ್ಟ ಪೋರ್ಟಲ್ ಅಭಿವೃದ್ಧಿಪಡಿಸಿದೆ. ಜಿಲ್ಲಾ ಮಟ್ಟದಲ್ಲಿ ವಿವಿಧ ಬ್ಯಾಂಕಿಂಗ್ ಯೋಜನೆಗಳು ಮತ್ತು ಉಪಕ್ರಮಗಳ ಕಾರ್ಯಕ್ಷಮತೆಯನ್ನು ಪತ್ತೆ(ಗುರುತಿಸು) ಹಚ್ಚುವ ಮತ್ತು ನಿರ್ಣಯಿಸುವ ಗುರಿಯನ್ನು ಈ ಪೋರ್ಟಲ್ ಹೊಂದಿದೆ.

## 2. ದತ್ತಾಂಶ(ಡೇಟಾ) ಸಲ್ಲಿಕೆಯ ಅಗತ್ಯತೆ:

* ಚಾಲನೆಯಲ್ಲಿರುವ ಮೇಲ್ವಿಚಾರಣಾ ಪ್ರಕ್ರಿಯೆಗೆ ಸಕಾಲಿಕವಾದ ಮತ್ತು ನಿಖರವಾದ ವರದಿ ಖಚಿತಪಡಿಸಲು ಅಗತ್ಯವಿರುವ ದತ್ತಾಂಶವನ್ನು ವಿಳಂಬ ಮಾಡದೆ ಸಲ್ಲಿಸಬೇಕು ಎಂದು ಆರ್‌ಬಿಐ ಎಲ್ಲಾ ಬ್ಯಾಂಕುಗಳಿಗೆ ಸೂಚನೆ ನೀಡಿದೆ.

## 3. ಸರ್ಕಾರಿ ಪ್ರಾಯೋಜಿತ ಯೋಜನೆಗಳಿಗೆ ಕುಂದುಕೊರತೆ ಪರಿಹಾರ:

* ಸರ್ಕಾರಿ ಪ್ರಾಯೋಜಿತ ಯೋಜನೆಗಳಿಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಪರಿಹರಿಸುವಲ್ಲಿ ಬ್ಯಾಂಕುಗಳು ಪೂರ್ವಭಾವಿಯಾಗಿರಬೇಕು ಎಂದು ಸೂಚಿಸಲಾಗಿದೆ. ಈ ಪೂರ್ವಭಾವಿ ವಿಧಾನವು ದೂರುಗಳನ್ನು ತ್ವರಿತವಾಗಿ ಪರಿಹರಿಸುವುದನ್ನು ಖಚಿತಪಡಿಸುತ್ತದೆ, ಗ್ರಾಹಕರ ತೃಪ್ತಿ ಮತ್ತು ಈ ಯೋಜನೆಗಳ ಪರಿಣಾಮಕಾರಿತ್ವವನ್ನು ಸಹ ಸುಧಾರಿಸುತ್ತದೆ.

## ನಬಾರ್ಡ್ ಸಿಜಿಎಂ(ಮುಖ್ಯ ಮಹಾಪ್ರಬಂಧಕರು) ಈ ಕೆಳಗಿನ ಪರಿಷ್ಕೃತ ವಿವರಗಳನ್ನು ಒದಗಿಸಿದ್ದಾರೆ:

## 1. ವಿಂಗಡಣೆ ಮಾಡಿದ ದತ್ತಾಂಶಕ್ಕಾಗಿ ವಿನಂತಿ:

* ಎಸ್‌ಎಲ್‌ಬಿಸಿ ಸಭೆಗಳಲ್ಲಿ ಹೆಚ್ಚು ಅರ್ಥಪೂರ್ಣ ಪರಾಮರ್ಶೆ ನಡೆಸಲು ಕೃಷಿಗಾಗಿ ವಿಂಗಡಣೆ ಮಾಡಿದ ದತ್ತಾಂಶ ಒದಗಿಸುವಂತೆ ನಬಾರ್ಡ್, ಎಸ್‌ಎಲ್‌ಬಿಸಿಗೆ ಮನವಿ ಮಾಡಿತು.

* ಇದಕ್ಕೆ ಸ್ಪಂದನೆಯಾಗಿ ಆರ್‌ಬಿಐ ಅಧಿಕಾರಿಗಳು, ಲಿಂಗವಾರು ವಿಂಗಡಣೆ ಮಾಡಿದ ದತ್ತಾಂಶವನ್ನು ವರದಿಗಳಲ್ಲಿ ಸೇರಿಸಬೇಕೆಂದು ಸೂಚಿಸಿದರು.

* ಎಲ್ಲಾ ಎಸ್‌ಎಲ್‌ಬಿಸಿಗಳಿಗೆ ಆರ್‌ಬಿಐ ವಿನ್ಯಾಸಗೊಳಿಸಿದ 33 ಕಡ್ಡಾಯ ಹಾಳೆ(ಶೀಟ್)ಗಳಿವೆ ಎಂದು ಎಸ್‌ಎಲ್‌ಬಿಸಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು, ಇವುಗಳಲ್ಲಿ ಪ್ರಸ್ತುತ ವಿವಿಧ ನಿಯತಾಂಕಗಳಿಗೆ ವಿಂಗಡಣೆ ಮಾಡಿದ ದತ್ತಾಂಶ ಒಳಗೊಂಡಿಲ್ಲ. ಎಲ್ಲಾ ಅಗತ್ಯ ದತ್ತಾಂಶವನ್ನು ಎಲ್ಲಾ ಬ್ಯಾಂಕುಗಳ ಕೋರ್ ಬ್ಯಾಂಕಿಂಗ್ ಪರಿಹಾರ(ಸಿಬಿಎಸ್)ಗಳಿಂದ ನೇರವಾಗಿ ಸೆರೆಹಿಡಿಯಬಹುದು ಎಂಬುದನ್ನು ಖಚಿತಪಡಿಸಲು ಈ ಶೀಟುಗಳನ್ನು ಮರುವಿನ್ಯಾಸಗೊಳಿಸುವಂತೆ ಅಧ್ಯಕ್ಷರು ಆರ್‌ಬಿಐಗೆ ಮನವಿ ಮಾಡಿದರು.

## 2. ಕರ್ನಾಟಕಕ್ಕಾಗಿ ರಾಜ್ಯ ವಾರ್ಷಿಕ ವರದಿ(ಫೋಕಸ್) ಪತ್ರ ಅಥವಾ ದಾಖಲೆ:

* ಕರ್ನಾಟಕಕ್ಕಾಗಿ ರಾಜ್ಯ ವಾರ್ಷಿಕ ವರದಿಯ ಪತ್ರ(ಫೋಕಸ್ ಪೇಪರ್) ಬಿಡುಗಡೆ ಮಾಡಲಾಗಿದೆ. ರಾಜ್ಯದಲ್ಲಿ ಸಂಭಾವ್ಯ ಸಾಲ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಮಾರ್ಗದರ್ಶನ ನೀಡುವಂತೆ ಮುಖ್ಯ ಮಹಾಪ್ರಬಂಧಕರು ಎಸ್‌ಎಲ್‌ಬಿಸಿಗೆ ಮನವಿ ಮಾಡಿದರು.

## <u>ಕಾರ್ಯಸೂಚಿ ವಿಷಯಗಳ ಚರ್ಚೆ</u>

ಎಸ್‌ಎಲ್‌ಬಿಸಿ ಕರ್ನಾಟಕದ ಸಂಚಾಲಕರಾದ ಶ್ರೀ. ಎಂ. ಭಾಸ್ಕರ ಚಕ್ರವರ್ತಿ ಅವರು, ಕಾರ್ಯಸೂಚಿ ಪತ್ರಗಳನ್ನು ಎಲ್ಲಾ ಪಾಲುದಾರರ ಮುಂದೆ ಇಡಲಾಗಿದ್ದು, ಅಂಶವಾರು ಕಾರ್ಯಸೂಚಿ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ಸಭೆಯ ನಡಾವಳಿಗಳನ್ನು ದಾಖಲೆಗಾಗಿ ಮತ್ತು ಪಾಲುದಾರರ ಮುಂದಿನ ಅಗತ್ಯ ಕ್ರಮಗಳಿಗಾಗಿ ಇಲ್ಲಿ ನೀಡಲಾಗಿದೆ ಎಂದರು.

## <u>ಕಾರ್ಯಸೂಚಿ ವಿಷಯ ಸಂಖ್ಯೆ – 1</u>

### <u>1.1 26.11.2024ರಂದು ನಡೆದ 167ನೇ ಎಸ್‌ಎಲ್‌ಬಿಸಿ ಸಭೆಯ ನಡಾವಳಿಗಳ ದೃಢೀಕರಣ:</u>

26.11.2024 ರಂದು ನಡೆದ 167ನೇ ಎಸ್‌ಎಲ್‌ಬಿಸಿ ಸಭೆಯ ನಡಾವಳಿಗಳನ್ನು ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಸರ್ಕಾರಿ ಇಲಾಖೆಗಳಿಗೆ ತಲುಪಿಸಲಾಗಿದೆ, ಆದರೆ ಅವರಿಂದ ಯಾವುದೇ ಸಲಹೆ ಸೂಚನೆಗಳನ್ನು ಸ್ವೀಕರಿಸಿಲ್ಲ ಎಂದು ಹೇಳಿ, ಸಭೆಯು ನಡಾವಳಿಗಳನ್ನು ದೃಢಪಡಿಸಿತು.

## <u>ಕಾರ್ಯಸೂಚಿ ವಿಷಯ ಸಂಖ್ಯೆ – 2</u>

### <u>2. 2024 ಡಿಸೆಂಬರ್ 31ರ ವರೆಗೆ ಅನ್ವಯವಾಗುವಂತೆ ಬ್ಯಾಂಕಿಂಗ್ ಅಂಕಿಅಂಶಗಳು:</u>

2024 ಡಿಸೆಂಬರ್ ತನಕ ಕರ್ನಾಟಕ ರಾಜ್ಯದಲ್ಲಿ ಠೇವಣಿಗಳು, ಮುಂಗಡಗಳು, ಸಾಲ-ಠೇವಣಿ(ಸಿಡಿ) ಅನುಪಾತ, ಒಟ್ಟು ಆದ್ಯತಾ ವಲಯದ ಸಾಲ(ಪಿಎಸ್ಎ), ಎಂಎಸ್ಎಂಇ/ಕೃಷಿ/ದುರ್ಬಲ ವರ್ಗಗಳಿಗೆ ನೀಡಿರುವ ಸಾಲ(ಮುಂಗಡ)ಗಳ ಬ್ಯಾಂಕಿಂಗ್ ಅಂಕಿಅಂಶಗಳನ್ನು ಎಸ್‌ಎಲ್‌ಬಿಸಿ ಸಂಚಾಲಕರು ಮಂಡಿಸಿದರು.

ವರ್ಷದಿಂದ ವರ್ಷಕ್ಕೆ ಠೇವಣಿಗಳಲ್ಲಿ ಶೇ.10.91 ಮತ್ತು ಮುಂಗಡಗಳಲ್ಲಿ ಶೇ.11.30ರಷ್ಟು ಬೆಳವಣಿಗೆ ಕಂಡುಬಂದಿದೆ. 31.12.2024ರ ವರೆಗೆ ಅನ್ವಯವಾಗುವಂತೆ, ರಾಜ್ಯದ ಸಾಲ-ಠೇವಣಿ(ಸಿಡಿ) ಅನುಪಾತ ಶೇ.80ರಷ್ಟಿದೆ.

2023 ಡಿಸೆಂಬರ್ ಗೆ ಹೋಲಿಸಿದರೆ ಆದ್ಯತಾ ವಲಯದ ಸಾಲ(ಪಿಎಸ್ಎ) ನೀಡಿಕೆಯಲ್ಲಿ 42,677 ಕೋಟಿ ರೂ.ಗೆ ಏರಿಕೆಯಾಗಿ, ಸಂಪೂರ್ಣ ಬೆಳವಣಿಗೆ ಕಂಡುಬಂದಿದೆ. ವರ್ಷದಿಂದ ವರ್ಷಕ್ಕೆ ಶೇ.9.95ರಷ್ಟು ಶೇಕಡಾವಾರು ಬೆಳವಣಿಗೆ ತೋರಿಸುತ್ತಿದೆ.

---

2023 ಡಿಸೆಂಬರ್ ತನಕ 2,08,584 ಕೋಟಿ ರೂ.ಗಳಿದ್ದ ಕೃಷಿ ಮುಂಗಡ(ಸಾಲ)ಗಳು 2024 ಡಿಸೆಂಬರ್ ಹೊತ್ತಿಗೆ 2,33,456 ಕೋಟಿ ರೂ.ಗಳಿಗೆ ಏರಿಕೆ ಕಂಡಿದ್ದು, ವರ್ಷದಿಂದ ವರ್ಷಕ್ಕೆ ಆಧಾರದ ಮೇಲೆ 24,872 ಕೋಟಿ ರೂ.(11.92%) ಹೆಚ್ಚಳ ತೋರಿಸುತ್ತಿದೆ.

2023 ಡಿಸೆಂಬರ್ ವರೆಗೆ ಎಂಎಸ್‌ಎಂಇ ವಲಯಕ್ಕೆ ನೀಡಿದ್ದ 1,62,654 ಕೋಟಿ ರೂ. ಸಾಲ ಪ್ರಮಾಣವು 2024 ಡಿಸೆಂಬರ್ ಹೊತ್ತಿಗೆ 1,82,029 ಕೋಟಿ ರೂ.ಗಳಿಗೆ ಏರಿಕೆ ಕಂಡಿದೆ. ವರ್ಷದಿಂದ ವರ್ಷಕ್ಕೆ ಆಧಾರದ ಮೇಲೆ 19,375 ಕೋಟಿ ರೂ. ಗಳ ಸಂಪೂರ್ಣ ಬೆಳವಣಿಗೆ ಕಂಡಿದೆ. ಅಂದರೆ ವರ್ಷದಿಂದ ವರ್ಷಕ್ಕೆ ಶೇ. 11.91ರಷ್ಟು ಬೆಳವಣಿಗೆಯಾಗಿದೆ.

ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆ ಕಾರ್ಯದರ್ಶಿ ಅವರು ಸಭೆಯಲ್ಲಿ ಮಾತನಾಡಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(ಎಸ್‌ಬಿಐ)ವು ರಾಜ್ಯದ ಕೃಷಿ ಮತ್ತು ಒಟ್ಟು ಆದ್ಯತಾ ವಲಯಕ್ಕೆ ಸಾಲ ನೀಡಿಕೆಯಲ್ಲಿ ಕಡ್ಡಾಯ ಗುರಿ ಸಾಧಿಸಿಲ್ಲ. ಈ ಕೊರತೆಗೆ ಸಂಬಂಧಿಸಿದ ವಿವರಣೆ ನೀಡುವಂತೆ ಅವರು ಎಸ್‌ಬಿಐಗೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(ಎಸ್‌ಬಿಐ), ಕೃಷಿ ಸಾಲ ನೀಡಿಕೆಯ ಜವಾಬ್ದಾರಿಯನ್ನು ಹೊರಗುತ್ತಿಗೆ ನೀಡಲಾಗಿದೆ. ಈ ಕಾರ್ಯವಿಧಾನವು ಪ್ರಗತಿಯಲ್ಲಿ ಇರುವುದರಿಂದ, ಮುಂಬರುವ ತ್ರೈಮಾಸಿಕಗಳಲ್ಲಿ ಕೃಷಿ ವಲಯದ ಸಾಲ ನೀಡಿಕೆಯ ಕಾರ್ಯಕ್ಷಮತೆ ಸುಧಾರಿಸಲು ಸಾಧ್ಯವಾಗುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿತು.

ಹೆಚ್ಚುವರಿಯಾಗಿ, ಕೃಷಿ ಸಾಲ ಮತ್ತು ಒಟ್ಟು ಆದ್ಯತಾ ವಲಯದ ಸಾಲ ನೀಡಿಕೆ ಎರಡನ್ನೂ ಸುಧಾರಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡದ ಕಾರಣ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಮತ್ತು ಎಕ್ಸಿಸ್ ಬ್ಯಾಂಕ್‌ಗಳ ಕಾರ್ಯಕ್ಷಮತೆ ತೃಪ್ತಿಕರವಾಗಿಲ್ಲ ಎಂದು ಕಾರ್ಯದರ್ಶಿ ಅವರು ಸಭೆಗೆ ತಿಳಿಸಿದರು.

ರಾಜ್ಯದಲ್ಲಿ ಕೃಷಿ ಸಾಲ ನೀಡಿಕೆ ಹೆಚ್ಚಿಸಲು ಇರುವ ಮಾರ್ಗೋಪಾಯಗಳನ್ನು ಚರ್ಚಿಸಲು ಪ್ರಮುಖ ಬ್ಯಾಂಕುಗಳು ಮತ್ತು ಕೃಷಿ ತಜ್ಞರೊಂದಿಗೆ ಒಂದು ದಿನದ ಕಾರ್ಯಾಗಾರ ಆಯೋಜಿಸುವಂತೆ ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು(ಎಸಿಎಸ್&ಡಿಸಿ) ಕೃಷಿ ಆಯುಕ್ತರಿಗೆ ಮನವಿ ಮಾಡಿದರು. ಇದಲ್ಲದೆ, ಎಸ್‌ಎಲ್‌ಬಿಸಿ ಸಭೆಗಳಿಗೆ ಬ್ಯಾಂಕುಗಳಿಂದ ಒಬ್ಬ ನಿಯೋಜಿತ ನೋಡಲ್ ಅಧಿಕಾರಿ ಹಾಜರಾಗಬೇಕು ಎಂದು ಅವರು ಸೂಚಿಸಿದರು.

**(ಕ್ರಮ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಿಎನ್ ಬಿ, ಎಚ್‌ಡಿಎಫ್‌ಸಿ, ಐಸಿಐಸಿಐ ಮತ್ತು ಎಕ್ಸಿಸ್ ಬ್ಯಾಂಕ್)**

## ಕಾರ್ಯಸೂಚಿ ವಿಷಯ ಸಂಖ್ಯೆ – 3

ಕೆನರಾ ಬ್ಯಾಂಕ್ केनरा बैंक Canara Bank

ಸಿಂಡಿಕೇಟ್ सिंडिकेट Syndicate

**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**
**ಸಂಚಾಲಕರು: ಕೆನರಾ ಬ್ಯಾಂಕ್**

---

## 3.1 ವಾರ್ಷಿಕ ಸಾಲ ಯೋಜನೆ(ಎಸಿಪಿ) ಮತ್ತು ಆದ್ಯತಾ ವಲಯದ ಸಾಲ ನೀಡಿಕೆಯಲ್ಲಿ ಸಾಧನೆ

ಎಸ್‌ಎಲ್‌ಬಿಸಿ ಸಂಚಾಲಕರು 2024-25ನೇ ಹಣಕಾಸು ವರ್ಷದ ಡಿಸೆಂಬರ್ 2024ರ ತ್ರೈಮಾಸಿಕದಲ್ಲಿ ಆಗಿರುವ ಸಾಲ ವಿತರಣೆಯ ತುಲನಾತ್ಮಕ ವಿಶ್ಲೇಷಣೆ ಪ್ರಸ್ತುತಪಡಿಸಿದರು.

- ಅಲ್ಪಾವಧಿ ಕೃಷಿ ಸಾಲಗಳ ಅಡಿ, ಬ್ಯಾಂಕುಗಳು 92,252 ಕೋಟಿ ರೂ. ಕೋಟಿ ರೂ.ಗಳನ್ನು ವಿತರಿಸಿದ್ದು, 31.12.2024ರ ವರೆಗೆ ಅನ್ವಯವಾಗುವಂತೆ ವಾರ್ಷಿಕ ಗುರಿಯ 80% ಸಾಧನೆ ದಾಖಲಿಸಿವೆ.
- 2024 ಡಿಸೆಂಬರ್ ತನಕ ಬ್ಯಾಂಕುಗಳು ಕೃಷಿ ಅವಧಿ ಸಾಲಗಳ ಅಡಿ, 57,048 ಕೋಟಿ ಕೋಟಿ ರೂ. ಸಾಲ ವಿತರಿಸಿದ್ದು, ವಾರ್ಷಿಕ ಗುರಿಯ 74% ಸಾಧನೆ ದಾಖಲಿಸಿವೆ.
- 31.12.2024ರ ವರೆಗೆ ಅನ್ವಯವಾಗುವಂತೆ, ಒಟ್ಟು ಕೃಷಿ ಸಾಲ ನೀಡಿಕೆಯ ವಾರ್ಷಿಕ ಗುರಿಗೆ ಪ್ರತಿಯಾಗಿ 77% ಸಾಧನೆ ದಾಖಲಿಸಿದೆ.
- ಬ್ಯಾಂಕುಗಳು ಎಂಎಸ್‌ಎಂಇ ವಲಯಕ್ಕೆ 1,34,699 ಕೋಟಿ ರೂ. ಸಾಲ ವಿತರಿಸಿವೆ. ವಾರ್ಷಿಕ ಗುರಿಗೆ ಪ್ರತಿಯಾಗಿ 76% ಸಾಧನೆ ಮಾಡಿವೆ.
- ಬ್ಯಾಂಕುಗಳು ಒಟ್ಟು ಆದ್ಯತಾ ವಲಯಕ್ಕೆ 2,96,856 ಕೋಟಿ ರೂ. ಸಾಲ ವಿತರಿಸಿದ್ದು, ವಾರ್ಷಿಕ ಗುರಿಗೆ ಪ್ರತಿಯಾಗಿ 76% ಸಾಧನೆ ದಾಖಲಿಸಿವೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಎಂಎಸ್‌ಎಂಇ ವಲಯಕ್ಕೆ ಸಾಲ ನೀಡಿಕೆ ಸಾಧನೆಯಲ್ಲಿ ಶೇ. 12ರಷ್ಟು ಇಳಿಕೆಯಾಗಿದೆ ಎಂದು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯ ಕಾರ್ಯದರ್ಶಿ ತಿಳಿಸಿದರು. ಇದಕ್ಕೆ ಉತ್ತರ ನೀಡಿದ ಎಂಎಸ್‌ಎಂಇ ನಿರ್ದೇಶಕರು, ಕಾರ್ಯಕ್ಷಮತೆ ಹೆಚ್ಚಿಸಲು ಮತ್ತು ಈ ವಲಯದ ಬೆಳವಣಿಗೆ ಬೆಂಬಲಿಸಲು ಎಲ್ಲಾ ಬ್ಯಾಂಕುಗಳು ಕೈಗಾರಿಕಾ ಕ್ಲಸ್ಟರ್ ಗಳಲ್ಲಿ ಎಂಎಸ್‌ಎಂಇ ಅಭಿಯಾನಗಳನ್ನು ಆಯೋಜಿಸಬೇಕು ಎಂದು ಸಭೆಗೆ ಮಾಹಿತಿ ನೀಡಿದರು.
ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು(ಎಸಿಎಸ್&ಡಿಸಿ) ಮಾತನಾಡಿ, ಸಾಮಾಜಿಕ ಮೂಲಸೌಕರ್ಯ ವಲಯದ ಸಾಲ ನೀಡಿಕೆ ಗುರಿಯು ಕಳೆದ ವರ್ಷಕ್ಕೆ ಹೋಲಿಸಿದರೆ ಕಡಿಮೆಯಾಗಿದೆ, ಇದು ಕಳವಳಕಾರಿ ವಿಷಯ. ಆಂಧ್ರಪ್ರದೇಶ, ತೆಲಂಗಾಣ ಮತ್ತು ತಮಿಳುನಾಡಿನಂತಹ ರಾಜ್ಯಗಳ ಗುರಿ ಸಾಧನೆ ಮತ್ತು ಕಾರ್ಯಕ್ಷಮತೆ ನೋಡುವಂತೆ ಮತ್ತು ಅಲ್ಲಿನ ಸುಧಾರಣೆಗಳ ಹೋಲಿಕೆ ಮಾಡುವಂತೆ ಆರ್‌ಬಿಐ ಮತ್ತು ಹಣಕಾಸು ಇಲಾಖೆಗೆ ಸೂಚನೆ ನೀಡಿದರು.
ಬ್ಯಾಂಕ್ ಆಫ್ ಇಂಡಿಯಾ, ಪಂಜಾಬ್ ಮತ್ತು ಸಿಂಧ್ ಬ್ಯಾಂಕ್ ಯಾವುದೇ ಪ್ರತಿಕ್ರಿಯೆ ನೀಡದ ಕಾರಣ, ಈ ಬ್ಯಾಂಕುಗಳ ರಾಜ್ಯ ನಿಯಂತ್ರಣ ಮುಖ್ಯಸ್ಥರು ಮುಂದಿನ ಎಸ್‌ಎಲ್‌ಬಿಸಿ ಸಭೆಗೆ ಭೌತಿಕವಾಗಿ ಹಾಜರಾಗಬೇಕು ಎಂದು ಅಧ್ಯಕ್ಷರು ಸೂಚನೆ ನೀಡಿದರು.

**(ಕ್ರಮ: ಎಲ್ಲಾ ಬ್ಯಾಂಕುಗಳು)**

## 3.2 2024 ಡಿಸೆಂಬರ್ ವರೆಗೆ ಅನ್ವಯವಾಗುವಂತೆ, ಪ್ರಮುಖ ಬ್ಯಾಂಕ್‌ವಾರು ಕಾರ್ಯಕ್ಷಮತೆ / ವಾರ್ಷಿಕ ಸಾಲ ಯೋಜನೆ(ಎಸಿಪಿ)ಯ ಸಾಧನೆ:

31.12.2024 ರ ವರೆಗೆ ಅನ್ವಯವಾಗುವಂತೆ ಎಸಿಪಿ ಅಡಿ, ಎಲ್ಲಾ ಬ್ಯಾಂಕುಗಳ ಕಾರ್ಯಕ್ಷಮತೆಯನ್ನು ಸಭೆ ಗಮನಿಸಿತು.

ಇಂಡಿಯನ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಇಂಡಿಯಾ ಮತ್ತು ಕರ್ನಾಟಕ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಎಕ್ಸಿಸ್ ಬ್ಯಾಂಕ್ ಮತ್ತು ಕೋಟಕ್ ಮಹೀಂದ್ರಾ ಬ್ಯಾಂಕ್‌ನಂತಹ ಇತರೆ ಪ್ರಮುಖ ಖಾಸಗಿ ವಲಯದ ಬ್ಯಾಂಕುಗಳು ಕಡ್ಡಾಯ ಆದ್ಯತಾ ವಲಯದ ಗುರಿಗಳನ್ನು ಸಾಧಿಸುವಲ್ಲಿ ಹಿಂದುಳಿದಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು.

ವಿಶೇಷವಾಗಿ ಇಂಡಿಯನ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ, ಕರ್ನಾಟಕ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಎಕ್ಸಿಸ್ ಬ್ಯಾಂಕ್ ಮತ್ತು ಕೋಟಕ್ ಮಹೀಂದ್ರಾ ಬ್ಯಾಂಕ್ ಮತ್ತಿತರ ಬ್ಯಾಂಕುಗಳು ಆದ್ಯತೆಯ ವಲಯದ ಅಡಿ, ಕಡ್ಡಾಯ ಗುರಿಗಳನ್ನು ಸಾಧಿಸಲು ಕೆಲಸ ಮಾಡಬೇಕು ಎಂದು ಅಧ್ಯಕ್ಷರು ಸಲಹೆ ನೀಡಿದರು.

**(ಕ್ರಮ: ಇಂಡಿಯನ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ, ಕರ್ನಾಟಕ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಎಕ್ಸಿಸ್ ಬ್ಯಾಂಕ್ ಮತ್ತು ಕೋಟಕ್ ಮಹೀಂದ್ರಾ ಬ್ಯಾಂಕ್)**

## ಕಾರ್ಯಸೂಚಿ ವಿಷಯ ಸಂಖ್ಯೆ – 4

### 4: ಜಿಲ್ಲಾವಾರು ವಾರ್ಷಿಕ ಸಾಲ ಯೋಜನೆ(ಎಸಿಪಿ)ಯ ಕಾರ್ಯಕ್ಷಮತೆ:

ಬೆಂಗಳೂರು ಗ್ರಾಮಾಂತರ(92%), ಕೋಲಾರ(88%), ಚಿಕ್ಕಬಳ್ಳಾಪುರ(87%), ತುಮಕೂರು(86) ಮತ್ತು ಹಾಸನ(86%) ಜಿಲ್ಲೆಗಳು ಅಗ್ರ 5 ಜಿಲ್ಲೆಗಳಾಗಿದ್ದು, 2024-25ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಆದ್ಯತಾ ವಲಯದ ಸಾಲ ನೀಡಿಕೆಯಲ್ಲಿ ಇವು ಅತ್ಯುತ್ತಮ ಪ್ರದರ್ಶನ ನೀಡಿವೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

2024-25ನೇ ಹಣಕಾಸು ವರ್ಷದ ಆದ್ಯತಾ ವಲಯದ ಸಾಲ ನೀಡಿಕೆ ಸಾಧನೆ ವಿಷಯದಲ್ಲಿ ದಕ್ಷಿಣ ಕನ್ನಡ(58%), ಕೊಪ್ಪಳ(67%), ಉಡುಪಿ (69%), ಚಾಮರಾಜನಗರ (70%) ಮತ್ತು ದಾವಣಗೆರೆ(71%) ಕೊನೆಯ 5 ಜಿಲ್ಲೆಗಳಾಗಿವೆ ಎಂದು ಸಂಚಾಲಕರು ತಿಳಿಸಿದರು.

ವಾರ್ಷಿಕ ಸಾಲ ಯೋಜನೆ(ಎಸಿಪಿ) ಗುರಿ ಸಾಧಿಸದಿರಲು ಮೂಲ ಕಾರಣ ಮತ್ತು ಅದನ್ನು ಸಾಧಿಸಲು ಅಗತ್ಯವಾದ ಕಾರ್ಯತಂತ್ರಗಳನ್ನು ವಿಶ್ಲೇಷಿಸುವಂತೆ ಎಸಿಎಸ್ & ಡಿಸಿ ಅವರು ಮೇಲಿನ ಜಿಲ್ಲೆಗಳ ಲೀಡ್ ಜಿಲ್ಲಾ ಮ್ಯಾನೇಜರ್(ಎಲ್‌ಡಿಎಂ)ಗಳಿಗೆ ತಿಳಿಸಿದರಲ್ಲದೆ, ಇದನ್ನು ಮುಂದಿನ ಡಿಸಿಸಿ ಮತ್ತು ಡಿಎಲ್‌ಆರ್‌ಸಿ ಸಭೆಗಳಲ್ಲಿ ಚರ್ಚಿಸಲಾಗುವುದು ಎಂದರು.

**(ಕ್ರಮ: ಕೊಪ್ಪಳ, ಚಾಮರಾಜನಗರ ಮತ್ತು ದಾವಣಗೆರೆಯ ಎಲ್‌ಡಿಎಂಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ – 5**

**ಸಾಲ-ಠೇವಣಿ(ಸಿಡಿ) ಅನುಪಾತ 60%ಗಿಂತ ಕಡಿಮೆ ಇರುವ ಜಿಲ್ಲೆಗಳ ಪರಾಮರ್ಶೆ.**

31.12.2024ರ ವರೆಗೆ ಅನ್ವಯವಾಗುವಂತೆ, ರಾಜ್ಯದ ಸಾಲ-ಠೇವಣಿ(ಸಿಡಿ) ಅನುಪಾತವು 80% ಇದೆ. ಉತ್ತರ ಕನ್ನಡ ಮತ್ತು ಉಡುಪಿ ಕ್ರಮವಾಗಿ 47% ಮತ್ತು 48% ಸಿಡಿ ಅನುಪಾತ ಹೊಂದಿವೆ, ಈ ಜಿಲ್ಲೆಗಳಲ್ಲಿ ಸುಧಾರಣೆ ಕಂಡುಬಂದಿದೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ – 6**

**ಎಸಿಪಿ ಗುರಿ ನಿಗದಿಪಡಿಸಲು ಸಮಿತಿ ರಚನೆ:**

ಕಳೆದ ಎಸ್‌ಎಲ್‌ಬಿಸಿ ಸಭೆಯಲ್ಲಿ ಎಸಿಪಿ ಗುರಿ ನಿಗದಿಪಡಿಸಲು ಒಂದು ಸಮಿತಿ ರಚಿಸಬೇಕೆಂದು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆ ಕಾರ್ಯದರ್ಶಿಗಳು ಸೂಚಿಸಿದ್ದರು, ಅದರಂತೆ, ಸಮಿತಿ ರಚಿಸಲಾಗಿದೆ ಎಂದು ಸಂಚಾಲಕರು ತಿಳಿಸಿದರು, ಎಸ್‌ಎಲ್‌ಬಿಸಿಯ ಎಲ್ಲಾ ಸದಸ್ಯರಿಗೆ 2025-26ನೇ ಹಣಕಾಸು ವರ್ಷಕ್ಕೆ ಎಸಿಪಿ ಗುರಿ ನಿಗದಿಪಡಿಸಲು ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ. ನವೀಕರಿಸಬಹುದಾದ ಇಂಧನ, ಸಾಮಾಜಿಕ ಮೂಲಸೌಕರ್ಯ, ರಫ್ತು ಸಾಲ ಮತ್ತು ವಸತಿ ವಲಯಗಳಿಗೆ ಸಾಮರ್ಥ್ಯ ಸಂಪರ್ಕಿತ ಸಾಲ ಯೋಜನೆ(ಪಿಎಲ್‌ಪಿ) ನಿಗದಿಪಡಿಸುವಾಗ, ಗುರಿಯ ಮೇಲಿನ ಗುರಿಗೆ ಬದಲಾಗಿ ಕಳೆದ 3 ವರ್ಷಗಳ ಸಾಧನೆ ಪರಿಗಣಿಸಲು ಸೂಚಿಸಲಾಗಿದೆ. 2025-26ನೇ ಹಣಕಾಸು ವರ್ಷಕ್ಕೆ ಗುರಿ ನಿಗದಿಪಡಿಸಲು ಎಸ್‌ಎಲ್‌ಬಿಸಿ, ಮಾರ್ಗಸೂಚಿ ಸಿದ್ಧಪಡಿಸಿದೆ ಎಂದರು.

**ಕಾರ್ಯಸೂಚಿ ವಿಷಯ ಸಂಖ್ಯೆ – 6.1**

**ಆಸ್ತಿಗಳ SARFAESI ಹರಾಜಿನಲ್ಲಿ ಇ-ಖಾತೆಗಳ ವರ್ಗಾವಣೆ:**

ಬ್ಯಾಂಕುಗಳು ನಡೆಸುವ SARFAESI(ಹಣಕಾಸು ಸ್ವತ್ತುಗಳ ಭದ್ರತೆ ಮತ್ತು ಪುನಾರಚನೆ ಹಾಗೂ ಭದ್ರತಾ ಹಿತಾಸಕ್ತಿ ಕಾಯ್ದೆ ಜಾರಿ) ಹರಾಜಿನ ಆಸ್ತಿಗಳಿಗೆ ಸಂಬಂಧಿಸಿದಂತೆ, ಹಕ್ಕುಪತ್ರಗಳ ವರ್ಗಾವಣೆ ವಿಷಯದಲ್ಲಿ ಬ್ಯಾಂಕುಗಳು ಎದುರಿಸುತ್ತಿರುವ ಕೆಲವು ಸಮಸ್ಯೆಗಳು ಇಂತಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು:

- SARFEASI ಅಡಿ, ಬ್ಯಾಂಕ್ ಅಡಮಾನ ಇಟ್ಟ ಆಸ್ತಿಗಳ ಮಾರಾಟದ ಅಡಿ, ಕಡ್ಡಾಯ ಇ-ಖಾತೆ ಮನ್ನಾ.
- ಆಸ್ತಿಗಳನ್ನು ಮಾರಾಟ ಮಾಡುವಾಗ ನೋಂದಣಿಗೆ ಮೊದಲು ಯಶಸ್ವಿ ಬಿಡ್ಡರ್‌ನಿಂದ ತೆರಿಗೆ ಬಾಕಿಗಳನ್ನು ಸಂಗ್ರಹಿಸಬೇಕಾಗಿದೆ.
- ಬ್ಯಾಂಕಿಂಗ್ ವಹಿವಾಟುಗಳಿಗೆ ಅಡ್ಡಿಯಾಗುತ್ತಿರುವುದರಿಂದ ಶಾಖಾ ವ್ಯವಸ್ಥಾಪಕರ ವೈಯಕ್ತಿಕ ಹಾಜರಾತಿ ಮತ್ತು ವೈಯಕ್ತಿಕ ಕೆವೈಸಿ ದಾಖಲೆಗಳಿಂದ ವಿನಾಯಿತಿ ಬೇಕಿದೆ .

ಈ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸಲು ಎಸ್‌ಎಲ್‌ಬಿಸಿ ಮತ್ತು ಕೆನರಾ ಬ್ಯಾಂಕ್ ಜತೆಗೂಡಿ ಇ-ಆಡಳಿತದ ಸಿಇಒ ಅವರೊಂದಿಗೆ ಸಂಪರ್ಕದಲ್ಲಿರುವಂತೆ ಕರ್ನಾಟಕ ಸರ್ಕಾರದ ಎಸಿಎಸ್&ಡಿಸಿ ಸಲಹೆ ನೀಡಿದರು..

**<u>ಕಾರ್ಯಸೂಚಿ ವಿಷಯ ಸಂಖ್ಯೆ – 7</u>**

**<u>ಸಮಸ್ಯೆಗಳು - ತರಬೇತಿ ವೆಚ್ಚಗಳ ಬಾಕಿ ಇರುವ ಬಿಪಿಎಲ್ ಕ್ಲೇಮುಗಳ ಮರುಪಾವತಿ:</u>**

ಬಾಕಿ ಇರುವ 37.08 ಕೋಟಿ ರೂ. ಮೊತ್ತದ ಬ್ಯಾಂಕರ್‌ಗಳ ವೃತ್ತಿಪರ ಹೊಣೆಗಾರಿಕೆ ವಿಮೆ(ಬಿಪಿಎಲ್) ಕ್ಲೇಮ್‌ಗಳನ್ನು ಆದಷ್ಟು ಬೇಗ ಪಾವತಿಸುವಂತೆ ಸಂಚಾಲಕರು ರಾಜ್ಯ ಸರ್ಕಾರವನ್ನು ಕೋರಿದರು.

ಬಾಕಿ ಇರುವ ಬಿಪಿಎಲ್ ಕ್ಲೇಮುಗಳನ್ನು ತ್ವರಿತವಾಗಿ ಪಾವತಿಸಲು ರಾಷ್ಟ್ರೀಯ ಜೀವನೋಪಾಯ ಮಿಷನ್(ಎನ್‌ಎಲ್‌ಎಂ) ಇಲಾಖೆಗೆ ಸಹಾಯ ಮಾಡುವಂತೆ ಹಣಕಾಸು ಇಲಾಖೆ ಕಾರ್ಯದರ್ಶಿಗೆ ಅಧ್ಯಕ್ಷರು ಸಲಹೆ ನೀಡಿದರು.

**(ಕ್ರಮ: ಕರ್ನಾಟಕ ಸರ್ಕಾರದ ಕೌಶಲ್ಯ ಅಭಿವೃದ್ಧಿ ಇಲಾಖೆ ಮತ್ತು ಹಣಕಾಸು ಇಲಾಖೆ)**

**<u>ಕಾರ್ಯಸೂಚಿ ವಿಷಯ ಸಂಖ್ಯೆ – 7.1</u>**

**<u>1. ವಿಜಯನಗರ ಜಿಲ್ಲೆಯಲ್ಲಿ ಹೊಸ ಆರ್ ಎಸ್ ಇಟಿಐ ತೆರೆಯುವುದು:</u>**

ವಿಜಯನಗರ ಜಿಲ್ಲಾಡಳಿತವು ಭಾರತೀಯ ಸ್ಟೇಟ್ ಬ್ಯಾಂಕಿಗೆ ವಿಜಯನಗರದಲ್ಲಿ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ(ಆರ್ ಎಸ್‌ಇಟಿಐ)ಯ ಕಟ್ಟಡ ನಿರ್ಮಾಣಕ್ಕಾಗಿ ಒಂದು ಖಾಲಿ ನಿವೇಶನ ನೀಡಿದೆ. ಅಲ್ಲದೆ, ತಕ್ಷಣವೇ ಆರ್ ಎಸ್‌ಇಟಿಐ ಆರಂಭಿಸಲು ಬಳಕೆಯಾಗದ ಒಂದು ಕಾಲೇಜು ಕಟ್ಟಡವನ್ನು ಎಸ್‌ಬಿಐಗೆ ನೀಡಿದೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು. ಬ್ಯಾಂಕ್ ಅಧಿಕಾರಿಗಳು ಎರಡೂ ಸ್ಥಳಗಳಿಗೆ ಭೇಟಿ ನೀಡಿದ್ದಾರೆ. ಖಾಲಿ ಭೂಮಿಗೆ ಸಂಬಂಧಿಸಿದಂತೆ ಹೆದ್ದಾರಿಗೆ ಹೊಂದಿಕೊಂಡಿರುವ ಸೇವಾ ರಸ್ತೆಯಿಂದ ಖಾಲಿ ಭೂಮಿಗೆ ನೇರ ಪ್ರವೇಶ ಅವಕಾಶವಿಲ್ಲ, ಏಕೆಂದರೆ ಖಾಸಗಿ ಭೂಮಿಯು ಸೇವಾ ರಸ್ತೆಯಿಂದ ನೀಡಲಾದ ಖಾಲಿ ಭೂಮಿಗೆ ಬೇರ್ಪಡಿಸುತ್ತದೆ.

ಈ ವಿಷಯದಲ್ಲಿ ಮುಂದುವರಿಯಲು ಪ್ರಸ್ತಾವಿತ ಖಾಲಿ ಭೂಮಿಗೆ ಸ್ಪಷ್ಟ ಪ್ರವೇಶ ಒದಗಿಸುವಂತೆ ಕೋರಿ ಎಸ್‌ಬಿಐ, 13.09.2024ರಂದು ವಿಜಯನಗರ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದು, ಉತ್ತರಕ್ಕಾಗಿ ಇನ್ನೂ ಕಾಯುತ್ತಿದೆ.

ಆರ್ ಎಸ್‌ಇಟಿಐ ಅನ್ನು ತಕ್ಷಣವೇ ಆರಂಭಿಸಲು ಬಳಕೆಯಾಗದ ಕಾಲೇಜು ಕಟ್ಟಡ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ, ಎಸ್‌ಬಿಐ ಕೋರಿಕೆ ಮೇರೆಗೆ ವಿಜಯನಗರ ಜಿಲ್ಲಾಧಿಕಾರಿ ಅವರು

ಆರ್ ಎಸ್‌ಇಟಿಐಗಾಗಿ ಕಾಲೇಜು ಕಟ್ಟಡ ಹಸ್ತಾಂತರಿಸುವಂತೆ ಕೋರಿ 05.11.2024ರಂದು ವಿಜಯನಗರದ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಪತ್ರ ರವಾನಿಸಿದ್ದಾರೆ. ಮತ್ತೊಮ್ಮೆ, ಕಾಲೇಜು ಕಟ್ಟಡ ಹಸ್ತಾಂತರಿಸುವ ಬಗ್ಗೆ 18.12.2024ರಂದು ಪ್ರತ್ಯುತ್ತರ ಪತ್ರ ಸಂಖ್ಯೆ GGPUCH/BULDG/ TRG/2024-25ರಲ್ಲಿ ಮಾಸಿಕ ಬಾಡಿಗೆ ಮತ್ತು ತೆರಿಗೆಗಳನ್ನು ಪಾವತಿಸುವ ಷರತ್ತಿನೊಂದಿಗೆ ಪತ್ರ ರವಾನಿಸಿದ್ದಾರೆ. ಇದಾದ ನಂತರ ವಿಜಯನಗರ ಲೀಡ್ ಜಿಲ್ಲಾ ಮ್ಯಾನೇಜರ್ ಮತ್ತು ಆರ್ ಎಸ್‌ಇಟಿಐ ನಿರ್ದೇಶಕರು ಜಿಲ್ಲಾಧಿಕಾರಿ ಕಚೇರಿಗೆ ಭೇಟಿ ನೀಡಿ, ಆರ್ ಎಸ್‌ಇಟಿಐ ಶಾಶ್ವತ ಕಟ್ಟಡ ನಿರ್ಮಾಣ ಪೂರ್ಣಗೊಳ್ಳುವವರೆಗೆ ಮಾಸಿಕ ಬಾಡಿಗೆ ಮನ್ನಾ ಮಾಡಬೇಕು ಮತ್ತು ಕಾಲೇಜು ಕಟ್ಟಡವನ್ನು ಅನುಭೋಗಕ್ಕೆ ನೀಡಬೇಕು ಎಂದು 02.01.2025ರಂದು ಮನವಿ ಮಾಡಿ(ಪತ್ರ ಸಂಖ್ಯೆ RSETI/2024-25-03) ಪತ್ರ ಸಲ್ಲಿಸಿದ್ದಾರೆ.

ಈ ಯೋಜನೆಗೆ ಬಾಡಿಗೆ ಪಾವತಿಸಲು ಅವಕಾಶಗಳಿವೆಯೇ ಮತ್ತು ಅದನ್ನು ಬ್ಯಾಂಕಿಗೆ ಮರುಪಾವತಿಸಬಹುದೇ ಎಂಬುದನ್ನು ಪರಿಶೀಲಿಸುವಂತೆ ಕರ್ನಾಟಕ ಸರ್ಕಾರದ ಎಸಿಎಸ್&ಡಿಸಿ ಅವರು ರಾಷ್ಟ್ರೀಯ ಜೀವನೋಪಾಯ ಮಿಷನ್ ಇಲಾಖೆಗೆ ಸಲಹೆ ನೀಡಿದರು. ಇದಲ್ಲದೆ, ಆರ್ ಎಸ್‌ಇಟಿಐ ನಿರ್ಮಾಣಕ್ಕಾಗಿ ಪರ್ಯಾಯ ನಿವೇಶನ ಗುರುತಿಸುವಂತೆ ಅವರು ವಿಜಯನಗರದ ಜಿಲ್ಲಾಧಿಕಾರಿಗೆ ಸೂಚಿಸಿದರು. ಹೆಚ್ಚುವರಿಯಾಗಿ, ಅಸ್ತಿತ್ವದಲ್ಲಿರುವ ಖಾಲಿ ಭೂಮಿಗೆ ರಸ್ತೆ ಪ್ರವೇಶ ಒದಗಿಸಿದರೆ, ಆರ್ ಎಸ್‌ಇಟಿಐ ನಿರ್ಮಾಣಕ್ಕೆ ಸೂಕ್ತವಾಗಿದೆಯೇ ಎಂಬುದನ್ನು ನಿರ್ಣಯಿಸುವಂತೆ ಅವರು ಎಸ್‌ಬಿಐ ಅಧಿಕಾರಿಗಳಿಗೆ ಸಲಹೆ ನೀಡಿದರು.

ಬಳಕೆಯಾಗದ ಕಾಲೇಜು ಕಟ್ಟಡವನ್ನು ವಾಣಿಜ್ಯೇತರ ಬಾಡಿಗೆ ದರದಲ್ಲಿ ಬ್ಯಾಂಕಿಗೆ ಒದಗಿಸುವಂತೆ ಎಸ್‌ಬಿಐ ಅಧಿಕಾರಿಗಳು, ಸರ್ಕಾರವನ್ನು ಕೋರಿದರು. ಇದಕ್ಕೆ ಪ್ರತಿಕ್ರಿಯೆಯಾಗಿ, ಈ ವಿಷಯವನ್ನು ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಜತೆ ಚರ್ಚಿಸಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು.

**(ಕ್ರಮ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೌಶಲ್ಯ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ)**

## 7.2. ಅಸ್ತಿತ್ವದಲ್ಲಿರುವ ಚಾಮರಾಜನಗರ ಆರ್ ಎಸ್‌ಇಟಿಐ ಕಾರ್ಯ ನಿರ್ವಹಣೆ ಕ್ರಮಬದ್ಧಗೊಳಿಸುವಿಕೆ:

ಜಿಲ್ಲಾಡಳಿತವು ಆರ್ ಎಸ್‌ಇಟಿಐ ಕಟ್ಟಡ ನಿರ್ಮಾಣಕ್ಕಾಗಿ ಎಸ್‌ಬಿಐಗೆ ಭೂಮಿ ಮಂಜೂರು ಮಾಡಿದೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು. ಇದಕ್ಕಾಗಿ ಗ್ರಾಮೀಣಾಭಿವೃದ್ಧಿ ಸಚಿವಾಲಯದ ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಮೂಲಕ ಅನುದಾನ ಪಡೆಯಲಾಗುತ್ತಿದೆ. ಸಹಾಯಧನಕ್ಕಾಗಿ ಎಸ್‌ಬಿಐ ಮನವಿ ಮಾಡಿದಾಗ, ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಇ-ಮೇಲ್ ಸಂವಹನ ನಡೆಸಿದ್ದು,

ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಆಡಳಿತಾತ್ಮಕ ಅನುಮೋದನೆ ಪಡೆಯಬೇಕಾದರೆ, ಎಸ್‌ಎಲ್‌ಬಿಸಿ ಅನುಮೋದನೆ ನೀಡಿರುವ ಪತ್ರ ಸಲ್ಲಿಸುವಂತೆ ಎಸ್‌ಬಿಐಗೆ ಸೂಚಿಸಿದೆ.

ಸಭೆಯು ಇದಕ್ಕೆ ಅನುಮೋದನೆ ನೀಡಿತು.

**<u>ಕಾರ್ಯಸೂಚಿ ವಿಷಯ ಸಂಖ್ಯೆ – 8</u>**

**<u>ಕಿಸಾನ್ ಕ್ರೆಡಿಟ್ ಕಾರ್ಡ್(ಕೆಸಿಸಿ) ಸಾಲಗಳಿಗೆ 1% ಬಡ್ಡಿ ಸಹಾಯಧನ:</u>**

ಕರ್ನಾಟಕ ಸರ್ಕಾರವು ಕೆಸಿಸಿ ಸಾಲಗಳನ್ನು ತ್ವರಿತವಾಗಿ ಮರುಪಾವತಿಸುವ ರೈತರಿಗೆ 1 ಲಕ್ಷ ರೂ.ವರೆಗಿನ ಬೆಳೆ ಸಾಲಗಳ(ಕೆಸಿಸಿ) ಮೇಲೆ 1% ಬಡ್ಡಿ ಸಹಾಯಧನ ಒದಗಿಸುತ್ತದೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು. ಆದಾಗ್ಯೂ, ಕಳೆದ 3 ವರ್ಷಗಳಿಂದ ಕೃಷಿಇಲಾಖೆಯಿಂದ 24.22 ಕೋಟಿ ರೂ. ಬಡ್ಡಿ ಸಹಾಯಧನ ಬಂದಿಲ್ಲ. ಬಾಕಿ ಇರುವ ಕ್ಲೇಮ್‌ಗಳನ್ನು ಬಿಡುಗಡೆ ಮಾಡಲು ಅನುಕೂಲ ಮಾಡಿಕೊಡುವಂತೆ ಅವರು ಅಧ್ಯಕ್ಷರಿಗೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯೆಯಾಗಿ ಕೃಷಿ ಆಯುಕ್ತರು, ಹಣವನ್ನು ಶೀಘ್ರವೇ ಬಿಡುಗಡೆ ಮಾಡುವಂತೆ ಕೋರಿ, ಈ ವಿಷಯವನ್ನು ಈಗಾಗಲೇ ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆ ಜತೆ ಮಾತುಕತೆ ನಡೆಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

**(ಕ್ರಮ: ಕೃಷಿ ಇಲಾಖೆ, ಕರ್ನಾಟಕ ಸರ್ಕಾರ)**

**<u>ಕಾರ್ಯಸೂಚಿ ವಿಷಯ ಸಂಖ್ಯೆ – 9</u>**

**<u>ಸರ್ಕಾರಿ ಕ್ಲೈಮ್ ಮಾಡದ ಠೇವಣಿಗಳು(DEAF-ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿ):</u>**

ಸಕ್ರಿಯಗೊಳಿಸಲು ಅಥವಾ ಮುಕ್ತಾಯ ಮಾಡಲು ಕೇವಲ 63 DEAF ಖಾತೆಗಳು ಬಾಕಿ ಉಳಿದಿವೆ. ಅದರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅತಿ ಹೆಚ್ಚಿನ ಅಂದರೆ 47 ಖಾತೆಗಳನ್ನು ಬಾಕಿ ಉಳಿಸಿಕೊಂಡಿದೆ.

ಕೆವೈಸಿ ಸಲ್ಲಿಸದ ಖಾತೆಗಳ ಸೌಹಾರ್ದಯುತ ಪರಿಹಾರಕ್ಕಾಗಿ ಪ್ರಮುಖ ಜಿಲ್ಲಾ ವ್ಯವಸ್ಥಾಪಕರು ಜಿಲ್ಲೆಗಳ ಮುಖ್ಯ ಲೆಕ್ಕಾಧಿಕಾರಿಗಳ ಗಮನಕ್ಕೆ ತರಬೇಕೆಂದು ಸರ್ಕಾರದ ಹಣಕಾಸು ಇಲಾಖೆ ಕಾರ್ಯದರ್ಶಿ ಸೂಚಿಸಿದರು.

**(ಕ್ರಮ: ಜಿಲ್ಲೆಗಳ ಮುಖ್ಯ ಲೆಕ್ಕಾಧಿಕಾರಿಗಳು ಮತ್ತು ಎಲ್‌ಡಿಎಂಗಳು)**

**<u>ಕಾರ್ಯಸೂಚಿ ವಿಷಯ ಸಂಖ್ಯೆ – 10</u>**

**<u>10.1 ಗೃಹಲಕ್ಷ್ಮಿ (ಜಿಎಲ್) ಫಲಾನುಭವಿಗಳಿಗೆ ರುಪೇ ಕಾರ್ಡ್‌ಗಳ ವಿತರಣೆ:</u>**

ಪಿಎಂಜೆಡಿವೈ ಅಲ್ಲದ ಗೃಹಲಕ್ಷ್ಮಿ ಖಾತೆಗಳನ್ನು ಪಿಎಂಜೆಡಿವೈ ಖಾತೆಗಳಾಗಿ ಪರಿವರ್ತಿಸಲು ಮತ್ತು ಈ ಖಾತೆಗಳಿಗೆ ರುಪೇ ಕಾರ್ಡ್‌ಗಳನ್ನು ನೀಡಲು ಎಸ್‌ಎಲ್‌ಬಿಸಿ ಡಿಸೆಂಬರ್‌ನಲ್ಲಿ ಅಭಿಯಾನ ಪ್ರಾರಂಭಿಸಿದೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು. ಸದಸ್ಯ ಬ್ಯಾಂಕುಗಳು ಒಟ್ಟು ಗೃಹ ಲಕ್ಷ್ಮಿ ಫಲಾನುಭವಿಗಳಲ್ಲಿ 14.49% ಜನರಿಗೆ ರುಪೇ ಕಾರ್ಡ್‌ಗಳನ್ನು ನೀಡಿವೆ.

ಇ-ಆಡಳಿತ ಇಲಾಖೆಯ ಅಧಿಕಾರಿಯೊಬ್ಬರು ಮಾತನಾಡಿ, ನಾವು ಪ್ರಮುಖ ಬ್ಯಾಂಕುಗಳ ಜತೆ ಸಂಪರ್ಕದಲ್ಲಿದ್ದೇವೆ, ಪಿಎಂಜೆಡಿವೈ ರುಪೇ ಕಾರ್ಡ್‌ಗಳನ್ನು ನೀಡುವಲ್ಲಿ ಕೆನರಾ ಬ್ಯಾಂಕ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಪೂರ್ವಭಾವಿ ಪ್ರಯತ್ನಗಳನ್ನು ಶ್ಲಾಘಿಸಿದ್ದೇವೆ ಎಂದು ಸಭೆಗೆ ತಿಳಿಸಿದರು.

ಗೃಹಲಕ್ಷ್ಮಿ ರುಪೇ ಕಾರ್ಡ್ ವಿತರಣಾ ದತ್ತಾಂಶ ಸಲ್ಲಿಸದ ಬ್ಯಾಂಕುಗಳು ತಕ್ಷಣವೇ ಸಲ್ಲಿಸಬೇಕು ಎಂದು ಕರ್ನಾಟಕ ಸರ್ಕಾರದ ಎಸಿಎಸ್&ಡಿಸಿ ಸೂಚನೆ ನೀಡಿದರು.

**(ಕ್ರಮ: ಬಿಒಎಂ, ಬಂಧನ್, ಸಿಟಿ ಯೂನಿಯನ್ ಬ್ಯಾಂಕ್, ಡಿಬಿಎಸ್, ಡಿಸಿಬಿ, ಫಿನೋ ಪೇಮೆಂಟ್ಸ್ ಬ್ಯಾಂಕ್, ಐಡಿಬಿಐ, ಐಒಬಿ, ಐಪಿಪಿಬಿ, ಇಂಡಸ್ ಇಂಡ್, ಪಂಜಾಬ್ ಮತ್ತು ಸಿಂಧ್, ಟಿಎಂಬಿ, ಫೆಡರಲ್, ಕೆವಿಬಿ, ಯೆಸ್ ಬ್ಯಾಂಕ್)**

## 10.2 ವಿವಿಧ ಸರ್ಕಾರಿ ಪ್ರಾಯೋಜಿತ ಯೋಜನೆಗಳ ಅಡಿ, ಸಾಲದ ಅರ್ಜಿಗಳಿಗಾಗಿ ಏಕೀಕೃತ ಪೋರ್ಟಲ್ ಅಭಿವೃದ್ಧಿ

ಸಾರ್ವಜನಿಕರು ಸರ್ಕಾರಿ ಪ್ರಾಯೋಜಿತ ಯೋಜನೆಗಳ ಸಾಲ ಪ್ರಸ್ತಾವನೆಗಳನ್ನು ಆನ್‌ಲೈನ್ ವೇದಿಕೆ ಮೂಲಕ ಅಪ್‌ಲೋಡ್ ಮಾಡಲು ರಾಷ್ಟ್ರೀಯ ಮಾಹಿತಿ ಕೇಂದ್ರ(ಎನ್‌ಐಸಿ)ವು ಒಂದು ಪೋರ್ಟಲ್ ಅಭಿವೃದ್ಧಿಪಡಿಸಿದೆ. ಇದು ಬಿಹಾರ, ಮಧ್ಯಪ್ರದೇಶ ಮತ್ತು ಗುಜರಾತ್ ರಾಜ್ಯಗಳ ಎಲ್ಲಾ ಹಣಕಾಸು ಸಂಸ್ಥೆಗಳು, ಅರ್ಜಿದಾರರು ಮತ್ತು ವಿವಿಧ ಸರ್ಕಾರಿ ಇಲಾಖೆಗಳಿಗೆ ರಾಜ್ಯ ಸರ್ಕಾರಿ ಇಲಾಖೆಗಳ ಸಹಾಯದಿಂದ ಲಭ್ಯವಿದೆ. ಅರ್ಜಿದಾರರು, ಇಲಾಖೆಗಳು ಪೋರ್ಟಲ್‌ನಲ್ಲಿ ಸಾಲ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುತ್ತಾರೆ, ಬ್ಯಾಂಕ್ ಶಾಖೆಯನ್ನು ಆಯ್ಕೆ ಮಾಡಿದ ನಂತರ ಅದು ಶಾಖೆಯ ಲಾಗಿನ್‌ನಲ್ಲಿ ಪ್ರತಿಫಲಿಸುತ್ತದೆ. ಶಾಖಾ ವ್ಯವಸ್ಥಾಪಕರು ಟರ್ನ್ ಅರೌಂಡ್ ಟೈಮ್(ಟಿಎಟಿ) ಒಳಗೆ ಸಾಲ ಪ್ರಸ್ತಾವನೆಯನ್ನು ಅನುಮೋದಿಸಬೇಕು ಅಥವಾ ತಿರಸ್ಕರಿಸಬೇಕು. ಅರ್ಜಿದಾರರು, ಇಲಾಖೆಗಳು, ಹಣಕಾಸು ಸಂಸ್ಥೆಗಳು ಯಾವುದೇ ಸಮಯದಲ್ಲಿ ಅರ್ಜಿಯ ಸ್ಥಿತಿಗತಿ ಪತ್ತೆ(ಟ್ರ್ಯಾಕ್ ಮಾಡಬಹುದು. ಇದನ್ನು ಈಗಾಗಲೇ ಬಿಹಾರ, ಮಧ್ಯಪ್ರದೇಶ ಮತ್ತು ಗುಜರಾತ್ ರಾಜ್ಯದಲ್ಲಿ ಎನ್‌ಐಸಿ ಬೆಂಬಲದೊಂದಿಗೆ ಜಾರಿಗೆ ತರಲಾಗಿದೆ.

ವಿವಿಧ ಸರ್ಕಾರಿ ಪ್ರಾಯೋಜಿತ ಯೋಜನೆಗಳ ಫಲಾನುಭವಿಗಳು ಪಾರದರ್ಶಕತೆ, ಸಕಾಲಿಕ ಮೌಲ್ಯಮಾಪನ ಮತ್ತು ಸಾಲ ಪ್ರಸ್ತಾವನೆಗಳ ಮಂಜೂರಾತಿಯ ಪ್ರಯೋಜನ ಪಡೆಯುವಂತೆ ನಮ್ಮ ರಾಜ್ಯದಲ್ಲಿ ಈ ಉಪಕ್ರಮ ಕಾರ್ಯಗತಗೊಳಿಸಲು ನಮಗೆ ಸಹಾಯ ಮಾಡುವಂತೆ ನಾವು ಅಧ್ಯಕ್ಷರಿಗೆ ಮನವಿ ಮಾಡುತ್ತೇವೆ. ಇದು ವಿವಿಧ ರಾಜ್ಯ ಸರ್ಕಾರಿ ಇಲಾಖೆಗಳು,

ಬ್ಯಾಂಕುಗಳು ಮತ್ತು ನಿಯಂತ್ರಕ ಸಂಸ್ಥೆಗಳಿಗೆ ದತ್ತಾಂಶ ಸುಲಭವಾಗಿ ಲಭ್ಯವಾಗುವಂತೆ ಮಾಡುತ್ತದೆ.

**<u>ಕಾರ್ಯಸೂಚಿ ವಿಷಯ ಸಂಖ್ಯೆ – 11</u>**

ಆರಂಭದಲ್ಲೇ ಆರ್‌ಬಿಐ ಡಿಜಿಎಂ ಮಾತನಾಡಿ, ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ, ಜೀವನ್ ಜ್ಯೋತಿ ಯೋಜನೆ ಮತ್ತು ಪಿಎಂ ಸ್ವನಿಧಿಯಂತಹ ಸರ್ಕಾರಿ ಪ್ರಾಯೋಜಿತ ಯೋಜನೆಗಳು ಸಾಮಾನ್ಯ ಪ್ರಜೆಗಳಿಗೆ ನೇರವಾಗಿ ಪ್ರಯೋಜನ ನೀಡುವ ಪ್ರಮುಖ ಯೋಜನೆಗಳಾಗಿವೆ. ಹಾಗಾಗಿ, ಎಲ್ಲಾ ಸದಸ್ಯ ಬ್ಯಾಂಕ್‌ಗಳು ಸರ್ಕಾರಿ ಪ್ರಾಯೋಜಿತ ಯೋಜನೆಗಳಿಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಆದ್ಯತೆಯ ಮೇರೆಗೆ ಪರಿಹರಿಸಬೇಕು ಎಂದು ಸಲಹೆ ನೀಡಿದರು. ಹೆಚ್ಚುವರಿಯಾಗಿ, ಮುಂಬರುವ ಎಲ್ಲಾ ಡಿಸಿಸಿ ಸಭೆಗಳಲ್ಲಿ ಸಮಸ್ಯೆಯನ್ನು ಚರ್ಚಿಸಲಾಗಿದೆಯೆ ಎಂಬುದನ್ನು ಖಚಿತಪಡಿಸಬೇಕು ಎಂದು ಡಿಜಿಎಂ, ಎಸ್‌ಎಲ್‌ಬಿಸಿಗೆ ಸಲಹೆ ನೀಡಿದರು. ಸರ್ಕಾರಿ ಪ್ರಾಯೋಜಿತ ಯೋಜನೆಗಳಿಗೆ ಎದುರಾಗುವ ಎಲ್ಲಾ ಕುಂದುಕೊರತೆ ಪರಿಹಾರ ಕಾರ್ಯವಿಧಾನಗಳ ಲಭ್ಯತೆಯ ಬಗ್ಗೆ ಎಲ್‌ಡಿಎಂಗಳು, ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು ಎಂದು ಅವರು ಸೂಚಿಸಿದರು.

**(ಕ್ರಮ: ಎಸ್‌ಎಲ್‌ಬಿಸಿ ಮತ್ತು ಎಲ್ಲಾ ಎಲ್‌ಡಿಎಂಗಳು)**

**<u>11.1: ಹಿಂದಿನ ಸಭೆಯಲ್ಲಿ ಪರಿಹಾರವಾಗದ ಕಾರ್ಯಸೂಚಿ:</u>**

**<u>(ಎ) ಎಂಎಸ್‌ಎಂಇ, ಸ್ವಸಹಾಯ ಗುಂಪುಗಳಿಗೆ ಸಾಲ ನೀಡಿಕೆಯಲ್ಲಿನ ಕಂದಕ ನಿವಾರಿಸುವುದು ಮತ್ತು ಲಿಂಗ ತಾರತಮ್ಯ ಕಡಿಮೆ ಮಾಡುವುದು:</u>**

(ಎ) ಎಂಎಸ್‌ಎಂಇ, ಸ್ವಸಹಾಯ ಗುಂಪುಗಳು ಮತ್ತು ಸಾಮರ್ಥ್ಯ ಸಂಪರ್ಕಿತ ಸಾಲ ಯೋಜನೆಗಳಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರ ಸಾಲದ ಅವಶ್ಯಕತೆಗಳನ್ನು, ಬ್ಲಾಕ್ ಮತ್ತು ಜಿಲ್ಲಾ ಮಟ್ಟದ ಸಾಲ ಕಾರ್ಯತಂತ್ರಗಳನ್ನು ಪರಿಗಣಿಸುವಂತೆ ಜಿಲ್ಲಾ ಅಭಿವೃದ್ಧಿ ಮ್ಯಾನೇಜರ್ ಗಳಿಗೆ ಸೂಚಿಸಲಾಗಿದೆ ಎಂದು ಆರ್‌ಬಿಐ ಡಿಜಿಎಂ ತಿಳಿಸಿದರು. ಇದಲ್ಲದೆ, ರಾಜ್ಯದಲ್ಲಿ ಸ್ವಸಹಾಯ ಗುಂಪುಗಳನ್ನು ಔಪಚಾರಿಕ ಸಾಲ ಯೋಜನೆಗಳಿಗೆ ಸಂಪರ್ಕಿಸುವಲ್ಲಿ ಅಂತರ(ಕಂದಕ)ಗಳೇನಾದರೂ ಇದ್ದಲ್ಲಿ, ಅದನ್ನು ಪರಿಶೀಲಿಸುವಂತೆ ಎಸ್‌ಎಲ್‌ಬಿಸಿಗೆ ಸೂಚನೆ ನೀಡಲಾಗಿದೆ ಎಂದರು.

**<u>(ಬಿ) ಜಿಲ್ಲಾ ಮಟ್ಟದಲ್ಲಿ ಮಹಿಳಾ ಒಡೆತನದ ಉದ್ಯಮ ವ್ಯವಹಾರಗಳಿಗೆ ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳು ಮತ್ತು ಸೂಕ್ತ ಬ್ಯಾಂಕಿಂಗ್ ಯೋಜನೆಗಳ ಮೂಲಕ ಮಹಿಳಾ ನೇತೃತ್ವದ ಉದ್ಯಮಗಳಿಗೆ ಬೆಂಬಲ ನೀಡುವುದು:</u>**

ಎಂಎಸ್‌ಎಂಇ ಗ್ರಾಹಕರಿಗೆ ಗ್ರಾಮೀಣ ಶಿಬಿರ ನಡೆಸಲು ಗ್ರಾಮೀಣ ಶಾಖೆಗಳನ್ನು(ಗರಿಷ್ಠ ಸಂಖ್ಯೆಯ ಎಂಎಸ್‌ಎಂಇಗಳು ಇರುವಲ್ಲಿ) ಸಂವೇದನಾಶೀಲಗೊಳಿಸುವಂತೆ ಎಸ್‌ಎಲ್‌ಬಿಸಿಗೆ

ಸೂಚಿಸಲಾಯಿತು. ಇದಲ್ಲದೆ, ಮಹಿಳಾ ಉದ್ಯಮಿಗಳಿಗೆ ಸಂಬಂಧಿಸಿದ ಮಾಹಿತಿ ಒಟ್ಟುಗೂಡಿಸಲು ಮತ್ತು ಪ್ರಗತಿಯ ಮೇಲ್ವಿಚಾರಣೆ ಮಾಡಲು ಲಿಂಗವಾರು ಮತ್ತು ಜಿಲ್ಲಾವಾರು ಸೇರಿದಂತೆ ಹೆಚ್ಚಿನ ಸೂಕ್ಷ್ಮ ದತ್ತಾಂಶ ಪಡೆಯಲು ಎಸ್‌ಎಲ್‌ಬಿಸಿಗೆ ಸೂಚಿಸಲಾಯಿತು.

(ಸಿ) ನಿಗದಿತ ಸಮಯ(ಕಾಲಮಿತಿ)ದಲ್ಲಿ ಡಿಸಿಸಿ, ಡಿಎಲ್‌ಆರ್‌ಸಿ ಸಭೆಗಳನ್ನು ನಡೆಸದಿರುವ ಬಗ್ಗೆ ಆರ್‌ಬಿಐ ಡಿಜಿಎಂ ಕಳವಳ ವ್ಯಕ್ತಪಡಿಸಿದರು. ಹಿಂದಿನ ಎಸ್‌ಎಲ್‌ಬಿಸಿ ಸಭೆಗಳಲ್ಲಿ ಈ ವಿಷಯ ಚರ್ಚಿಸಲಾಗಿದ್ದರೂ, ಅಂತಹ ಅತಿಯಾದ ವಿಳಂಬ ತಪ್ಪಿಸಲು ಲೀಡ್ ಬ್ಯಾಂಕ್‌ಗಳು ಯಾವುದೇ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿಲ್ಲ. ಅಂತಹ ವಿಳಂಬ ತಪ್ಪಿಸಲು ಮತ್ತು ಸಭೆಗಳ ಸಕಾಲಿಕ ನಡವಳಿಕೆ ಮೇಲ್ವಿಚಾರಣೆ ಮಾಡಲು ಲೀಡ್ ಬ್ಯಾಂಕ್‌ಗಳ ನಿಯಂತ್ರಣ ಮುಖ್ಯಸ್ಥರಿಗೆ ಸೂಚಿಸಲಾಗಿದೆ.

**(ಕ್ರಮ: ಎಸ್‌ಎಲ್‌ಬಿಸಿ ಮತ್ತು ಲೀಡ್ ಬ್ಯಾಂಕ್‌ಗಳು)**

## **11.2: ಹಿಂದಿನ ವರ್ಷಗಳ ಸಾಧನೆ ಅಪವರ್ತನಗೊಳಿಸಿದ ನಂತರ ಪಿಎಲ್‌ಪಿಗಳೊಂದಿಗೆ ಎಸಿಪಿ ಗುರಿಯ ಜೋಡಣೆ:**

ಹಿಂದಿನ ವರ್ಷಗಳ ಎಸಿಪಿ ದತ್ತಾಂಶ ಕುರಿತು ಆರ್‌ಬಿಐ ಕಚೇರಿ ಮಾಡಿದ ವಿಶ್ಲೇಷಣೆಯ ಬಗ್ಗೆ ಡಿಜಿಎಂ ಮಾಹಿತಿ ನೀಡಿದರು. ಕೆಲವು ಜಿಲ್ಲೆಗಳಲ್ಲಿ, ಹಿಂದಿನ ಹಣಕಾಸು ವರ್ಷದ ಸಾಧನೆಗೆ ಹೋಲಿಸಿದರೆ ಕಡಿಮೆ ಮಟ್ಟದಲ್ಲಿ ಎಸಿಪಿ ಗುರಿಗಳನ್ನು ನಿಗದಿಪಡಿಸಲಾಗಿದೆ ಎಂದು ಬಹಿರಂಗಪಡಿಸಿದೆ. ಈ ಸಮಸ್ಯೆ ಪರಿಹರಿಸಲು, ಎಸ್‌ಎಲ್‌ಬಿಸಿ 2025-26ನೇ ಹಣಕಾಸು ವರ್ಷಕ್ಕೆ ನಬಾರ್ಡ್ ನಿಗದಿಪಡಿಸಿದ ಪಿಎಲ್‌ಪಿ ಜತೆಗೆ, ಹಿಂದಿನ ವರ್ಷದ ಕ್ರೆಡಿಟ್ ಯೋಜನೆಗಳ ಸಾಧನೆಯ ದಾಖಲೆಯನ್ನು ಅಂಶೀಕರಿಸಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಅಂತಹ 4 ಜಿಲ್ಲೆಗಳನ್ನು ಗುರುತಿಸಲಾಗಿದೆ, ಅಲ್ಲಿ 2023-24ನೇ ಹಣಕಾಸು ವರ್ಷದ ಕೃಷಿ ಕ್ಷೇತ್ರದ ಸಾಧನೆಗೆ ಹೋಲಿಸಿದರೆ ಗುರಿಯಲ್ಲಿ ಯಾವುದೇ ಹೆಚ್ಚಳ ಕಂಡುಬಂದಿಲ್ಲ. [ರಾಮನಗರ(-9.28%), ತುಮಕೂರು(-2.20%), ಬೆಂಗಳೂರು ಗ್ರಾಮಾಂತರ(-5.82%), ಕೋಲಾರ(0.15%)]. 2023-24ನೇ ಹಣಕಾಸು ವರ್ಷದಲ್ಲಿ ಕೃಷಿ ಕ್ಷೇತ್ರದ ಸಾಧನೆಗೆ ಹೋಲಿಸಿದರೆ ಗುರಿಯಲ್ಲಿ ಯಾವುದೇ ಹೆಚ್ಚಳ/ಇಳಿಕೆ ಇಲ್ಲದ 7 ಬ್ಯಾಂಕ್‌ಗಳನ್ನು ಗುರುತಿಸಲಾಗಿದೆ. ಕಳಪೆ ಸಾಧನೆ ತೋರುವ ಬ್ಯಾಂಕ್‌ಗಳಿಗೆ ಕಡಿಮೆ ಗುರಿ ನಿಗದಿಪಡಿಸುವುದರಿಂದ ಕಳಪೆ ಕಾರ್ಯಕ್ಷಮತೆಯ ಪ್ರತಿಫಲ ದೊರೆಯಬಹುದು, ಇದನ್ನು ತಪ್ಪಿಸಬೇಕು. 2025ನೇ ಹಣಕಾಸು ವರ್ಷದಲ್ಲಿ ಪಿಎಲ್‌ಪಿ ಪ್ರಕ್ಷೇಪಣಗಳು ಮತ್ತು ಕೆಲವು ಜಿಲ್ಲೆಗಳಲ್ಲಿನ ನೈಜ ಎಸಿಪಿ ಗುರಿಗಳು ಮತ್ತು ಸಾಧನೆಗಳ ನಡುವಿನ ಗಮನಾರ್ಹ ವ್ಯತ್ಯಾಸದ ಬಗ್ಗೆ ಆರ್‌ಬಿಐ ಡಿಜಿಎಂ ಮತ್ತಷ್ಟು ಸಲಹೆ ನೀಡಿದರು. ಸಾಲದ ಸಾಮರ್ಥ್ಯವನ್ನು ನಿಖರವಾಗಿ ಪ್ರತಿಬಿಂಬಿಸುತ್ತದೆ ಎಂದು ಖಚಿತಪಡಿಸಿಕೊಳ್ಳಲು ಆ ಜಿಲ್ಲೆಗಳಲ್ಲಿ ಪಿಎಲ್‌ಪಿ ಮರುಮೌಲ್ಯಮಾಪನ ಮಾಡಬೇಕು ಎಂದು ನಬಾರ್ಡ್‌ಗೆ ಸೂಚಿಸಿದರು. 2025-26ನೇ ಹಣಕಾಸು ವರ್ಷದಲ್ಲಿ ಎಸಿಪಿಯನ್ನು ನಬಾರ್ಡ್‌ನ ಪಿಎಲ್‌ಪಿಯೊಂದಿಗೆ

ಅಭಿವೃದ್ಧಿಪಡಿಸಬೇಕು, ಆದರೆ ಅದು ಮಹತ್ವಾಕಾಂಕ್ಷೆಯಿಂದ ಇರಬೇಕು, ವಾಸ್ತವಿಕವಾಗಿಯೂ ಇರಬೇಕು ಎಂದು ಡಿಜಿಎಂ ಸಲಹೆ ನೀಡಿದರು.

**(ಕ್ರಮ: ಎಸ್‌ಎಲ್‌ಬಿಸಿ ಮತ್ತು ನಬಾರ್ಡ್).**

## 11.3: ಬ್ಯಾಂಕ್ ಸೌಲಭ್ಯವಿಲ್ಲದ ಗ್ರಾಮೀಣ ಕೇಂದ್ರಗಳು:

ಎಸ್‌ಎಲ್‌ಬಿಸಿ ಗುರುತಿಸಿರುವಂತೆ, ಶ್ರೇಣಿ 5/6 ಕೇಂದ್ರಗಳಲ್ಲಿನ ಬ್ಯಾಂಕ್ ಸೌಲಭ್ಯಗಳಿಲ್ಲದ ಗ್ರಾಮೀಣ ಕೇಂದ್ರಗಳಲ್ಲಿ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಆರ್‌ಬಿಐ ಡಿಜಿಎಂ ಅವರು ಎಸ್‌ಎಲ್‌ಬಿಸಿ ಮತ್ತು ಬ್ಯಾಂಕುಗಳ ಎಲ್ಲಾ ನಿಯಂತ್ರಣ ಮುಖ್ಯಸ್ಥರಿಗೆ ಸಲಹೆ ನೀಡಿದರು. ಇದಲ್ಲದೆ, ಲೀಡ್ ಜಿಲ್ಲಾ ಮ್ಯಾನೇಜರ್ ಗಳು ಆಯಾ ಜಿಲ್ಲೆಗಳ ಡಿಸಿಸಿ/ಡಿಎಲ್‌ಆರ್ ಸಿ ಸಭೆಯ ಸಮಯದಲ್ಲಿ ಒದಗಿಸಿದ ಮಾಹಿತಿ ಆಧಾರದ ಮೇಲೆ 'ಶ್ರೇಣಿ-6 ಕೇಂದ್ರಗಳ ವ್ಯಾಪ್ತಿಯಲ್ಲಿ ಪ್ರಗತಿಯ ಪರಾಮರ್ಶೆ'ಯನ್ನು ಎಸ್‌ಎಲ್‌ಬಿಸಿ, ಕಾರ್ಯಸೂಚಿ ಅಂಶವಾಗಿ ಪರಿಗಣಿಸಬೇಕು ಎಂದು ಸೂಚಿಸಿದರು.

"ಬ್ಯಾಂಕ್ ಶಾಖೆಯ ಅಧಿಕಾರ ನೀತಿಯ ತರ್ಕಬದ್ಧಗೊಳಿಸುವಿಕೆ- ಮಾರ್ಗಸೂಚಿಗಳ ಪರಿಷ್ಕರಣೆ" ಕುರಿತು ಆರ್‌ಬಿಐ 2017 ಮೇ 17ರಂದು ಹೊರಡಿಸಿದ ಸುತ್ತೋಲೆಯ ಉಪ-ಪ್ಯಾರಾ 4.2 ಎ). ಡಿ) ಮತ್ತು ಇ)ನಲ್ಲಿ ಉಲ್ಲೇಖ ಮಾಡಿದೆ. ಇದು 5ನೇ ಶ್ರೇಣಿಯ ಕೇಂದ್ರಗಳಲ್ಲಿ 'ಬ್ರಿಕ್ ಅಂಡ್ ಮಾರ್ಟರ್(ಅಂದರೆ ಭೌತಿಕ ಬ್ಯಾಂಕ್ ಶಾಖೆಗಳಲ್ಲಿ ಸಾಂಪ್ರದಾಯಿಕ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವುದು ಎಂದರ್ಥ)' ಶಾಖೆಗಳನ್ನು ತೆರೆಯುವ ಪ್ರಯೋಜನಗಳ ಕುರಿತು ವಿವರ ನೀಡಿದೆ. ಇಂತಹ ಪಾವತಿ ಬ್ಯಾಂಕಿನಲ್ಲಿ ಸ್ಥಿರ ವ್ಯವಹಾರ ಪ್ರತಿನಿಧಿ ಅಥವಾ ಬ್ಯಾಂಕಿಂಗ್ ಶಾಖೆ ಮಾತ್ರ ಇರುತ್ತದೆ. ಬ್ಯಾಂಕಿಂಗ್ ಸೌಲಭ್ಯಗಳಿಲ್ಲದ 5 ಗ್ರಾಮೀಣ ಕೇಂದ್ರಗಳಲ್ಲಿ 'ಬ್ರಿಕ್ ಅಂಡ್ ಮಾರ್ಟರ್' ಶಾಖೆಗಳನ್ನು ತೆರೆಯುವ ಕಾರ್ಯವನ್ನು 2025 ಮಾರ್ಚ್ 31ರೊಳಗೆ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

**(ಕ್ರಮ: ಎಸ್‌ಎಲ್‌ಬಿಸಿ ಮತ್ತು ಎಲ್ಲಾ ಬ್ಯಾಂಕುಗಳು)**

## 11.4: ಮೈಕ್ರೋ-ಎಟಿಎಂಗಳ ಕಾರ್ಯಕ್ಷಮತೆ:

ಆರ್‌ಬಿಐ ಡಿಜಿಎಂ ಅವರು ಮೈಕ್ರೋ-ಎಟಿಎಂಗಳ ಕಾರ್ಯಕ್ಷಮತೆ ಸುಧಾರಿಸುವ ಕ್ರಮಗಳ ಬಗ್ಗೆ ಸದಸ್ಯ ಬ್ಯಾಂಕುಗಳ ಗಮನ ಸೆಳೆದರು, ಮೈಕ್ರೋ-ಎಟಿಎಂಗಳು ಪರಸ್ಪರ ಕಾರ್ಯ ನಿರ್ವಹಿಸುವಂತಾಗಬೇಕು ಎಂದರು. ವ್ಯವಹಾರ ಪ್ರತಿನಿಧಿ (ಬಿಸಿ)ಗಳ ಕಾರ್ಯ ನಿರ್ವಹಣೆಯಲ್ಲಿ

ಎದುರಾಗಿರುವ ಸಮಸ್ಯೆಗಳನ್ನು ಮತ್ತಷ್ಟು ಎತ್ತಿ ತೋರಿಸಿದರು, ಸದಸ್ಯ ಬ್ಯಾಂಕುಗಳು ಅವುಗಳನ್ನು ಆದಷ್ಟು ಬೇಗ ಪರಿಹರಿಸಬೇಕೆಂದು ಒತ್ತಾಯಿಸಿದರು:

ಎ) ಕಾರ್ಪೊರೇಟ್ ಏಜೆನ್ಸಿಗಳು ತಮ್ಮ ವ್ಯವಹಾರ ಪ್ರತಿನಿಧಿಗಳಿಗೆ ಕಮಿಷನ್ ಪಾವತಿಸುವಲ್ಲಿ ವಿಳಂಬ ಮಾಡುತ್ತಿವೆ.

ಬಿ) ವ್ಯವಹಾರ ಪ್ರತಿನಿಧಿಗಳ ಸಂಭಾವನೆಯ ನಿಶ್ಚಿತ ಗಳಿಕೆಯ ಭಾಗ ಕೈತಪ್ಪಿಹೋಗುತ್ತಿದೆ. ಇದು ಬಹುತೇಕ ಹೆಚ್ಚಿನ ಸಂದರ್ಭಗಳಲ್ಲಿ ಬಿಸಿಗಳ ಸ್ಥಿರ ವೇತನದ ಆದಾಯ ಭಾಗದ ಅನುಪಸ್ಥಿತಿಯು ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳಿಗೆ ವಿರುದ್ಧವಾಗಿದೆ.

ಸಿ) ಎಲ್ಲಾ ಬಿಸಿಗಳು ಐಐಬಿಎಫ್ ಪ್ರಮಾಣೀಕರಣಗಳನ್ನು ಹೊಂದಿಲ್ಲ. ಹಾಗಾಗಿ, ಗ್ರಾಹಕರಿಗೆ ಪೂರ್ಣ ಶ್ರೇಣಿಯ ಹಣಕಾಸು ಸೇವೆಗಳನ್ನು ನೀಡುವುದನ್ನು ಇದು ತಡೆಯುತ್ತಿದೆ.

ಡಿ) ಮೈಕ್ರೊ-ಎಟಿಎಂಗಳ ಕಾರ್ಯಾಚರಣೆ ನಿರ್ಬಂಧಗಳಿಂದಾಗಿ ಪರಸ್ಪರ ಆಂತರಿಕ ಕಾರ್ಯಾಚರಣೆ ವಿನಿಮಯ ವ್ಯವಸ್ಥೆಯ ಅನುಪಸ್ಥಿತಿಯಿಂದಾಗಿ ಬ್ಯಾಂಕುಗಳಲ್ಲಿ ಗ್ರಾಹಕ ಸೇವೆಯ ಮೇಲೆ ಪರಿಣಾಮ ಬೀರುತ್ತಿದೆ.

**(ಕ್ರಮ: ಎಲ್ಲಾ ಬ್ಯಾಂಕ್‌ಗಳು)**

## 11.5: ಬ್ಯಾಂಕುಗಳಿಂದ ದತ್ತಾಂಶ ಸಲ್ಲಿಕೆಯಲ್ಲಿ ವಿಳಂಬ:

ಎಫ್ಐ ಡ್ಯಾಶ್‌ಬೋರ್ಡ್, ಎಂಐಎಸ್ ದತ್ತಾಂಶ, ಸ್ಥಳೀಯ ಬೋರ್ಡ್ ದತ್ತಾಂಶ, ಅಲ್ಪಸಂಖ್ಯಾತರಿಗೆ ಸಾಲ ಮತ್ತು ಕಾಲಕಾಲಕ್ಕೆ ಎಸ್‌ಎಲ್‌ಬಿಸಿ ಕೋರಿರುವ ಇತರ ಮಾಹಿತಿಯಲ್ಲಿ ದತ್ತಾಂಶ/ಮಾಹಿತಿ ಸಲ್ಲಿಕೆಯಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಆರ್‌ಬಿಐ ಡಿಜಿಎಂ ಕಳವಳ ವ್ಯಕ್ತಪಡಿಸಿದರು. ವರದಿ ಮಾಡುವಾಗ ಅಂತಹ ವಿಳಂಬ ತಪ್ಪಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ನಿಯಂತ್ರಣ ಮುಖ್ಯಸ್ಥರಿಗೆ ಅವರು ಸೂಚಿಸಿದರು. ಇದರ ಮೇಲ್ವಿಚಾರಣೆಗಾಗಿ ಎಸ್‌ಎಲ್‌ಬಿಸಿ ಸಭೆಗಳಲ್ಲಿ ಕಾರ್ಯಸೂಚಿ ಅಂಶವಾಗಿ ಸೇರಿಸಲು ಎಸ್‌ಎಲ್‌ಬಿಸಿಗೆ ಸೂಚನೆ ನೀಡಿದರು.

**(ಕ್ರಮ: ಎಲ್ಲಾ ಬ್ಯಾಂಕುಗಳು)**

## 11.6: ಡಿಸಿಸಿ/ ಡಿಎಲ್‌ಆರ್‌ಸಿ ಸಭೆಯ ಕಾರ್ಯಸೂಚಿಯ ವಿವರಣಾತ್ಮಕ ಪಟ್ಟಿ ಮತ್ತು ಅಗತ್ಯ ಕ್ರಮಕ್ಕಾಗಿ ಸಭೆಯ ನಡಾವಳಿಗಳ ಮೇಲ್ವಿಚಾರಣೆ, ಯಾವುದಾದರೂ ಇದ್ದರೆ:

ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳ ಪ್ರಕಾರ, ಡಿಸಿಸಿ/ಡಿಎಲ್‌ಆರ್‌ಸಿ ಸಭೆಯ ವಿವರಣಾತ್ಮಕ ಕಾರ್ಯಸೂಚಿ ವಿಷಯಗಳನ್ನು ಎಸ್‌ಎಲ್‌ಬಿಸಿಯೊಂದಿಗೆ ಹಂಚಿಕೊಳ್ಳಲಾಗಿದೆ ಎಂದು ಆರ್‌ಬಿಐ ಡಿಜಿಎಂ ತಿಳಿಸಿದ್ದರು. ಎಲ್ಲಾ ಜಿಲ್ಲೆಗಳಲ್ಲಿ ರಚನಾತ್ಮಕ ಸಭೆಗಳನ್ನು

ಸುಗಮಗೊಳಿಸುವಂತೆ ಮತ್ತು ಅನುಷ್ಠಾನಕ್ಕೆ ತರುವಂತೆ ಎಲ್ಲಾ ಲೀಡ್ ಜಿಲ್ಲಾ ವ್ಯವಸ್ಥಾಪಕರಿಗೆ ಸೂಚನೆ ನೀಡಬೇಕೆಂದು ಎಸ್‌ಎಲ್‌ಬಿಸಿಗೆ ಸೂಚಿಸಿದ್ದರು.

**(ಕ್ರಮ: ಎಸ್‌ಎಲ್‌ಬಿಸಿ ಮತ್ತು ಎಲ್‌ಡಿಎಂಗಳು)**

**11.7: ಟೌನ್ ಹಾಲ್ ಸಭೆಗಳು:**

ಎಂಎಸ್‌ಎಂಇಗಳ ಪ್ರಯೋಜನಕ್ಕಾಗಿ ಆರ್‌ಬಿಐ ನಡೆಸಿದ ಟೌನ್ ಹಾಲ್ ಸಭೆಗಳಲ್ಲಿ, ಸರ್ಕಾರಿ ಪ್ರಾಯೋಜಿತ ಯೋಜನೆಗಳ ಬಗ್ಗೆ ಮಾಹಿತಿ ಪ್ರಸಾರ(ಪ್ರಚಾರ) ಮಾಡದಿರುವುದು, ಬ್ಯಾಂಕುಗಳಿಂದ ಮಾಹಿತಿ ಮತ್ತು ಬೆಂಬಲದ ಕೊರತೆ, ಬ್ಯಾಂಕುಗಳಲ್ಲಿ ಬಡ್ಡಿದರದಲ್ಲಿನ ವ್ಯತ್ಯಾಸ ಮತ್ತು ಸಾಕಷ್ಟು ಮೇಲಾಧಾರ ಭದ್ರತೆ / ಖಾತರಿ ಇಲ್ಲದೆ ಸಾಲಗಳನ್ನು ಮಂಜೂರು ಮಾಡದಿರುವುದು ಮತ್ತು ಉದ್ಯಮಿಗಳಿಗೆ ಸಾಲ ಸೌಲಭ್ಯ ನಿರಾಕರಣೆ ಮುಂತಾದ ಸಾಮಾನ್ಯ ಸಮಸ್ಯೆಗಳನ್ನು ಆರ್‌ಬಿಐ ಡಿಜಿಎಂ ತಿಳಿಸಿದರು. ಎಂಎಸ್‌ಎಂಇಗಳನ್ನು ಬೆಂಬಲಿಸಲು ಈ ಮೇಲಿನ ಸಮಸ್ಯೆಗಳನ್ನು ಪರಿಹರಿಸುವಂತೆ ಎಲ್ಲಾ ಸದಸ್ಯ ಬ್ಯಾಂಕುಗಳನ್ನು ಒತ್ತಾಯಿಸಲಾಯಿತು.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**11.8: ನೇರ ನಗದು ವರ್ಗಾವಣೆ(ಡಿಬಿಟಿ) ಒಳಗೊಂಡ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳ ಅನುಷ್ಠಾನ**

ನೇರ ನಗದು ವರ್ಗಾವಣೆ(ಡಿಬಿಟಿ) ಒಳಗೊಂಡ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ದತ್ತಾಂಶ ಒದಗಿಸುವಲ್ಲಿ ಕೆಲವು ಬ್ಯಾಂಕುಗಳು ವಿಳಂಬ ಮಾಡುತ್ತಿರುವ ಬಗ್ಗೆ ಆರ್‌ಬಿಐ ಡಿಜಿಎಂ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಕೆವೈಸಿ/ಆರ್ ಇಕೆವೈಸಿ ಪ್ರಕ್ರಿಯೆಗಳು ಮತ್ತು ನಿಷ್ಕ್ರಿಯ/ಕಾರ್ಯಾಚರಣೆಯಲ್ಲಿಲ್ಲದ/ಸ್ಥಗಿತಗೊಂಡ ಖಾತೆಗಳ ಮರು ಸಕ್ರಿಯಗೊಳಿಸುವಿಕೆ ಪ್ರಕ್ರಿಯೆಯಿಂದ ಡಿಬಿಟಿ ಫಲಾನುಭವಿಗಳ ಮೇಲೆ ಪರಿಣಾಮ ಬೀರುತ್ತಿದೆ. ಹಾಗಾಗಿ, ಮಾಸಿಕ ಆಧಾರದಲ್ಲಿ ಇವುಗಳ ದತ್ತಾಂಶ ಸಲ್ಲಿಸುವಂತೆ ಅವರು ಸದಸ್ಯ ಬ್ಯಾಂಕ್‌ಗಳನ್ನು ಒತ್ತಾಯಿಸಿದರು.

**(ಕ್ರಮ: ಎಲ್ಲಾ ಬ್ಯಾಂಕ್‌ಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ – 12**

**ಕಾರ್ಯಸೂಚಿ 12.1 ಸಾಮರ್ಥ್ಯ ಸಂಪರ್ಕಿತ ಸಾಲ ಯೋಜನೆ 2025-26**

- ಪ್ರತಿ ಜಿಲ್ಲೆಗೆ ಪ್ರತಿ ವರ್ಷ ಸಿದ್ಧಪಡಿಸಲಾಗುತ್ತಿರುವ ಸಾಮರ್ಥ್ಯ ಸಂಪರ್ಕಿತ ಸಾಲ ಯೋಜನೆ(ಪಿಎಲ್‌ಪಿ)ಯನ್ನು ಡಿಜಿಟಲೀಕರಣಗೊಳಿಸಲು ನಬಾರ್ಡ್ ಒಂದು ಉಪಕ್ರಮ ಜಾರಿಗೆ ತಂದಿದೆ ಮತ್ತು ಪಿಎಲ್‌ಪಿ 2025-26ಕ್ಕಾಗಿ ನಿರ್ಧರಿಸಿದ ಕೆಲಸ ಪೂರ್ಣಗೊಂಡಿದೆ. ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಹೊರತುಪಡಿಸಿ, 29 ಜಿಲ್ಲೆಗಳಲ್ಲಿ ಪಿಎಲ್‌ಪಿ ಪ್ರಾರಂಭಿಸಲಾಗಿದೆ, ಈ ಎರಡು ಜಿಲ್ಲೆಗಳಿಗೆ 2025 ಮಾರ್ಚ್ 11 ಮತ್ತು 12ಕ್ಕೆ ಯೋಜಿಸಲಾಗಿದೆ. ಡಿಸಿಸಿ(ಜಿಲ್ಲಾ ಸಮಾಲೋಚನಾ ಸಭೆ)/ಡಿಎಲ್‌ಆರ್ ಸಿ(ಜಿಲ್ಲಾ ಮಟ್ಟದ ಪರಾಮರ್ಶೆ ಸಮಿತಿ) ಸಭೆಗಳಲ್ಲಿ ಪಿಎಲ್‌ಪಿ 2025-26 ಪ್ರಾರಂಭಿಸಲು ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕ(ಡಿಡಿಎಂ)ರಿಗೆ ಬೆಂಬಲ ನೀಡುವಂತೆ ನಾವು ಈ 2 ಜಿಲ್ಲೆಗಳ ಲೀಡ್ ಜಿಲ್ಲಾ ವ್ಯವಸ್ಥಾಪಕ(ಎಲ್ಡಿಎಂ)ರಿಗೆ ಮನವಿ ಮಾಡುತ್ತೇವೆ.
- ಡಿಜಿಟಲೀಕರಿಸಿದ ಪಿಎಲ್‌ಪಿ ಎಲ್ಲಾ ಪಾಲುದಾರರಿಗೆ ಜಿಲ್ಲೆಗೆ ಸಂಬಂಧಿಸಿದ ಸಾಲ ಸಾಮರ್ಥ್ಯ, ಹಣಕಾಸು ಅಥವಾ ನಿಧಿ ಪ್ರಮಾಣ(ಎಸ್‌ಒಎಫ್), ಯುನಿಟ್ ವೆಚ್ಚ, ಮೂಲಸೌಕರ್ಯಗಳ ಲಭ್ಯತೆ ಇತ್ಯಾದಿಗಳ ಬಗ್ಗೆ ಡಿಜಿಟಲ್ ರೂಪದಲ್ಲಿ ನಿರ್ಣಾಯಕ ದತ್ತಾಂಶ ನೀಡುತ್ತದೆ, ಇದನ್ನು ಪಾಲುದಾರರು ವಿವಿಧ ಉದ್ದೇಶಗಳಿಗಾಗಿ ಬಳಸಬಹುದು. ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ, ಎಸಿಪಿ ಗುರಿಗಳನ್ನು ಪಿಎಲ್‌ಪಿ ಪ್ರಕ್ಷೇಪಗಳೊಂದಿಗೆ ಸಂಯೋಜಿಸುವುದು ಅಪೇಕ್ಷಣೀಯವಾಗಿದೆ, ಇದರಿಂದಾಗಿ ಸಾಲದ ಹರಿವಿಗಾಗಿ ರಾಜ್ಯ ಮಟ್ಟದ ಪ್ರಕ್ಷೇಪಗಳು 2025 ಫೆಬ್ರುವರಿ 25ರಂದು ಬಿಡುಗಡೆಯಾದ ರಾಜ್ಯ ವಾರ್ಷಿಕ ಸಾಲ ಯೋಜನೆ ಪತ್ರ(ಸ್ಟೇಟ್ ಫೋಕಸ್ ಪೇಪರ್)ಕ್ಕೆ ಅನುಗುಣವಾಗಿರುತ್ತವೆ.

  2025 ಫೆಬ್ರುವರಿ 25ರಂದು ರಾಜ್ಯ ವಾರ್ಷಿಕ ಸಾಲ ಯೋಜನೆಯ ಪತ್ರ(ಫೋಕಸ್ ಪೇಪರ್)ವನ್ನು ಕರ್ನಾಟಕ ಸರ್ಕಾರದ ಎಸಿಎಸ್ ಮತ್ತು ಡಿಸಿ ಶ್ರೀಮತಿ ಉಮಾ ಮಹಾದೇವನ್, ಐಎಎಸ್ ಅವರು ಬಿಡುಗಡೆ ಮಾಡಿದ್ದಾರೆ. ಸ್ಟೇಟ್ ಫೋಕಸ್ ಪೇಪರ್ ನ ಅಂದಾಜು ಮುನ್ಸೂಚನೆಗಳಿಗೆ ಅನುಗುಣವಾಗಿ 2025-26ನೇ ಹಣಕಾಸು ವರ್ಷದ ವಾರ್ಷಿಕ ಸಾಲ ಯೋಜನೆ(ಎಸಿಪಿ)ಯನ್ನು ಅಂತಿಮಗೊಳಿಸುವಂತೆ ಎಸ್‌ಎಲ್‌ಬಿಸಿಗೆ ಮನವಿ ಮಾಡಿದ್ದಾರೆ ಎಂದು ನಬಾರ್ಡ್ ಸಿಜಿಎಂ ತಿಳಿಸಿದರು.

**(ಕ್ರಮ: ಎಸ್‌ಎಲ್‌ಬಿಸಿ)**

## <u>ಕಾರ್ಯಸೂಚಿ 12.2 ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಸಾಲ ವಿತರಣೆ</u>

- "ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಸಾಲ ವಿತರಣೆಯ ಸ್ಥಿತಿಗತಿ" ವಿಷಯ ಕುರಿತು ಕರ್ನಾಟಕ ಸರ್ಕಾರದ ಹಣಕಾಸು ಸೇವೆಗಳ ಇಲಾಖೆ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ 2024 ನವೆಂಬರ್ 5ರಂದು ಸಭೆ ನಡೆಯಿತು .ಸಭೆಯಲ್ಲಿ ಹಣಕಾಸು ಸೇವೆಗಳ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಅವರು, 2024-25ನೇ ಹಣಕಾಸು ವರ್ಷದ "ಸಾಮಾನ್ಯ ಸಾಲ ಯೋಜನೆ(ಜಿಎಲ್‌ಸಿ)" ಅಡಿ, 27.5 ಲಕ್ಷ ಕೋಟಿ ರೂ. ಸಾಲ ವಿತರಣೆ ಗುರಿ ನೀಡಲಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಬ್ಯಾಂಕುಗಳು 2024-25ನೇ ಹಣಕಾಸು ವರ್ಷದ ಆಯಾ ಜಿಎಲ್‌ಸಿ

ಗುರಿಯ ಜತೆಗೆ, ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ನೀಡಿರುವ ಉಪ-ಗುರಿಗಳನ್ನು ಸಾಧಿಸಬೇಕು ಎಂದು ಒತ್ತಾಯಿಸಿದರು .ಎಲ್ಲಾ ಬ್ಯಾಂಕುಗಳು ಗುರಿಗಳನ್ನು ಸಾಧಿಸಬೇಕು, ವಿಶೇಷವಾಗಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸೇರಿದಂತೆ ಉಪ-ವಲಯವಾರು ಗುರಿಗಳನ್ನು ಸಾಧಿಸಬೇಕು ಎಂದು ಮನವಿ ಮಾಡಿದರು. ಎಸ್‌ಎಲ್‌ಬಿಸಿ ತ್ರೈಮಾಸಿಕ ಆಧಾರದ ಮೇಲೆ ಮೀನುಗಾರಿಕೆ ವಲಯಕ್ಕೆ ನೀಡಿರುವ ಗುರಿಗಳ ಸಾಧನೆ ಪರಿಶೀಲಿಸಬೇಕು ಎಂದು ಸೂಚಿಸಿದರು.

- ಇದಲ್ಲದೆ, ವಾರ್ಷಿಕ ಸಾಲ ಯೋಜನೆ(ಎಸಿಪಿ) ಅಂತಿಮಗೊಳಿಸುವಾಗ, ಪಶುಸಂಗೋಪನೆ, ಮೀನುಗಾರಿಕೆ, ತೋಟಗಾರಿಕೆ ಮುಂತಾದ ಸಂಬಂಧಿತ ಚಟುವಟಿಕೆಗಳನ್ನು ಒಳಗೊಂಡಂತೆ ಕೃಷಿ ಅವಧಿ ಸಾಲದ ಅಡಿ, ಉಪ-ಗುರಿಗಳನ್ನು ಹಂಚಿಕೆ ಮಾಡಬೇಕು, ಈ ಉಪ-ಗುರಿಗಳಿಗೆ ಪ್ರತಿಯಾಗಿ ಆಗಿರುವ ಸಾಧನೆಯನ್ನು ಡಿಸಿಸಿ/ಡಿಎಲ್‌ಆರ್‌ಸಿ ಮತ್ತು ಎಸ್‌ಎಲ್‌ಬಿಸಿ ಸಭೆಗಳಲ್ಲಿ ಪರಿಶೀಲಿಸಬೇಕು.
- ಪಶುಸಂಗೋಪನೆ ಮೂಲಸೌಕರ್ಯ ಅಭಿವೃದ್ಧಿ ನಿಧಿ(ಎಎಚ್‌ಐಡಿಎಫ್) ಮತ್ತು ಅದರ ಅಡಿ ಸಿಗುವ 3% ಬಡ್ಡಿ ಸಹಾಯಧನದ ಬಗ್ಗೆ ಬ್ಯಾಂಕುಗಳು ಜಾಗೃತಿ ಮೂಡಿಸಬೇಕು ಪಶುಸಂಗೋಪನಾ ಇಲಾಖೆ ಮನವಿ ಮಾಡಿತು. ಇದಲ್ಲದೆ, ರಾಷ್ಟ್ರೀಯ ಜೀವನೋಪಾಯ ಮಿಷನ್(ಎನ್‌ಎಲ್‌ಎಂ) ಯೋಜನೆಯಡಿ ಅರ್ಜಿಗಳು ಹೆಚ್ಚಿನ ಪ್ರಮಾಣದಲ್ಲಿ ಬಾಕಿ ಇರುವ ವಿಷಯ ಪ್ರಸ್ತಾಪಿಸಿ, ಇದಕ್ಕೆ ಆದ್ಯತೆ ನೀಡಬೇಕಾಗಿದೆ ಎಂದು ತಿಳಿಸಿತು.
- ಕೃಷಿ ಸಂಬಂಧಿತ ಚಟುವಟಿಕೆಗಳ ಅಡಿ, ಸಾಲ ವಿತರಣೆ ಖಚಿತಪಡಿಸಿಕೊಳ್ಳಲು ಮತ್ತು ಕೆಸಿಸಿ ಸಾಲ ವಿತರಣೆ ಸುಧಾರಿಸಲು ಬ್ಯಾಂಕುಗಳಿಗೆ ಸೂಚಿಸಲಾಗಿದೆ.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**<u>ಕಾರ್ಯಸೂಚಿ 12.3 ಮೀನುಗಾರಿಕೆಗೆ ಸಾಲ ವಿತರಣೆ</u>**

ಮೀನುಗಾರಿಕೆ ವಲಯಕ್ಕೆ ಸಾಲ ವಿತರಣೆ ಸಂಬಂಧಿತ ಸಮಸ್ಯೆಗಳ ಕುರಿತು 2024 ಅಕ್ಟೋಬರ್ 9ರಂದು ವೀಡಿಯೊ ಕಾನ್ಫರೆನ್ಸ್ ಮೂಲಕ ಭಾರತ ಸರ್ಕಾರದ ಮೀನುಗಾರಿಕೆ ಇಲಾಖೆಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು. ಈ ನಿಟ್ಟಿನಲ್ಲಿ, ನಬಾರ್ಡ್ ಕರ್ನಾಟಕವು, 2024 ನವೆಂಬರ್ 7ರಂದು ಬರೆದ ಪತ್ರದ ಮೂಲಕ ಮೀನುಗಾರಿಕೆ ವಲಯದ ಸಾಧನೆಯನ್ನು ತ್ರೈಮಾಸಿಕ ಆಧಾರದ ಮೇಲೆ ಪರಿಶೀಲಿಸಿ ವರದಿ ಸಲ್ಲಿಸುವಂತೆ ಎಸ್‌ಎಲ್‌ಬಿಸಿಗೆ ಮನವಿ ಮಾಡಿದೆ.

**(ಕ್ರಮ: ಎಸ್‌ಎಲ್‌ಬಿಸಿ ಮತ್ತು ಬ್ಯಾಂಕ್‌ಗಳು)**

## ಕಾರ್ಯಸೂಚಿ 12.4 ಆರ್‌ಐಡಿಎಫ್(ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ) ಅಡಿ ಕರ್ನಾಟಕ ಸರ್ಕಾರಕ್ಕೆ ಬೆಂಬಲ

ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು, ಗ್ರಾಮೀಣ ಸಂಪರ್ಕ ಮತ್ತು ಸಾಮಾಜಿಕ ವಲಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ನಬಾರ್ಡ್, ಕರ್ನಾಟಕ ಸರ್ಕಾರಕ್ಕೆ ಸಕ್ರಿಯ ಬೆಂಬಲ ನೀಡುತ್ತಿದೆ, ಕುಡಿಯುವ ನೀರು ಸರಬರಾಜು ಮುಂತಾದ ಯೋಜನೆಗಳ ಮೇಲೆ ವಿಶೇಷವಾಗಿ ಗಮನ ಕೇಂದ್ರೀಕರಿಸಿದೆ. ಈ ಉಪಕ್ರಮಗಳು ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಗಮನಾರ್ಹವಾಗಿ ಕೊಡುಗೆ ನೀಡಿವೆ. ಮಂಜೂರಾದ ಎಲ್ಲಾ ಯೋಜನೆಗಳ ಸಮಗ್ರ ಪಟ್ಟಿಯನ್ನು ನಮ್ಮ ವೆಬ್‌ಸೈಟ್: www.nabard.org ನಲ್ಲಿ ನೋಡಬಹುದು.

ನಬಾರ್ಡ್ ಒಟ್ಟು 44,432 ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಇದರ ಒಟ್ಟು ವೆಚ್ಚದ ಗಾತ್ರ 31,522.26 ಕೋಟಿ ರೂ. ಆಗಿದೆ. ಇದರಲ್ಲಿ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ(ಆರ್‌ಐಡಿಎಫ್)ಯ ನೆರವು 23,028 ಕೋಟಿ ರೂ.ಗಳಾಗಿದ್ದು, ಮಂಜೂರಾದ ಯೋಜನೆಗಳಿಗೆ ಪ್ರತಿಯಾಗಿ 18,095.85 ಕೋಟಿ ರೂ. ವಿತರಿಸಲಾಗಿದೆ.

2025 ಜನವರಿ 17ರ ಹೊತ್ತಿಗೆ, ಪ್ರಸ್ತುತ ಹಣಕಾಸು ವರ್ಷದಲ್ಲಿ ಕರ್ನಾಟಕ ಸರ್ಕಾರಕ್ಕೆ ಇದುವರೆಗೆ 2,056 ಕೋಟಿ ರೂ. ಮೌಲ್ಯದ ಗ್ರಾಮೀಣ ಮೂಲಸೌಕರ್ಯ ಪ್ರಸ್ತಾವನೆಗಳನ್ನು ಮಂಜೂರು ಮಾಡಲಾಗಿದೆ. ಮೇಲಿನ ಗ್ರಾಮೀಣ ಮೂಲಸೌಕರ್ಯ ಯೋಜನೆಗಳೊಂದಿಗೆ, ಗ್ರಾಮೀಣ ಸಂಪರ್ಕದಲ್ಲಿ ಗಮನಾರ್ಹ ಸುಧಾರಣೆ, ಸುಧಾರಿತ ನೀರಾವರಿ ಸೌಲಭ್ಯಗಳು, ಗ್ರಾಮೀಣ ಜನರಿಗೆ ಉತ್ತಮ ಉದ್ಯೋಗಾವಕಾಶಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ಪರಿಸ್ಥಿತಿಗಳಲ್ಲಿ ಸುಧಾರಣೆ ಕಂಡುಬಂದಿದೆ. ಇದು ಗ್ರಾಮೀಣ ಪ್ರದೇಶಗಳಲ್ಲಿ ಸಾಲ ಮರುಪಾವತಿಯಲ್ಲಿ ಸುಧಾರಣೆ ಮತ್ತು ಸಾಲ ಪಡೆಯುವ ಸಾಮರ್ಥ್ಯ ಸುಧಾರಣೆಗೆ ಅನುಕೂಲಕರ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸಲು ಅನುವು ಮಾಡಿಕೊಟ್ಟಿದೆ. ಅಂತಹ ಪ್ರದೇಶಗಳಲ್ಲಿ ಬ್ಯಾಂಕುಗಳು ಕೆಳಮಟ್ಟದಲ್ಲಿ ಹೆಚ್ಚಿನ ಸಾಲ ನೀಡಿಕೆಗೆ ತಮ್ಮ ಪ್ರಯತ್ನಗಳನ್ನು ಹೆಚ್ಚಿಸಬಹುದು.

## ಕಾರ್ಯಸೂಚಿ 12.5 ರೈತ ಉತ್ಪಾದಕ ಸಂಸ್ಥೆ(ಎಫ್‌ಪಿಒ)ಗಳಿಗೆ ಅಗತ್ಯವಾದ ಆರ್ಥಿಕ ಮತ್ತು ತಾಂತ್ರಿಕ ಬೆಂಬಲ ಒದಗಿಸುವ ಮೂಲಕ ಆಹಾರ ಸಂಸ್ಕರಣಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವುದು.

- ರೈತ ಉತ್ಪಾದಕ ಸಂಸ್ಥೆಗಳು(ಎಫ್‌ಪಿಒಗಳು) ಆಹಾರ ಸಂಸ್ಕರಣಾ ವಲಯದಲ್ಲಿ ಹಲವಾರು ಸವಾಲುಗಳನ್ನು ಎದುರಿಸುತ್ತಿವೆ. ಆಹಾರ ಸಂಸ್ಕರಣೆಗೆ ಇರುವ ಅವಕಾಶಗಳ ಬಗ್ಗೆ ಅರಿವಿನ ಕೊರತೆ, ಮೌಲ್ಯವರ್ಧನೆಯಿಂದ ಅನ್ವೇಷಿಸುವ ಮತ್ತು ಪ್ರಯೋಜನ ಪಡೆಯುವ ಸಾಮರ್ಥ್ಯ ಸೀಮಿತವಾಗಿರುವುದು ಪ್ರಮುಖ ಸಮಸ್ಯೆಯಾಗಿದೆ. ರೈತ

ಉತ್ಪಾದಕ ಸಂಸ್ಥೆಗಳು ಆಹಾರ ಸಂಸ್ಕರಣೆಯಲ್ಲಿ ತೊಡಗಿಸಿಕೊಳ್ಳುವುದನ್ನು ಪ್ರೋತ್ಸಾಹಿಸಲು ಭಾರತ ಸರ್ಕಾರವು ಹಲವಾರು ಮಾರ್ಗಸೂಚಿಗಳು, ಯೋಜನೆಗಳು ಮತ್ತು ಸಬ್ಸಿಡಿಗಳನ್ನು ಪರಿಚಯಿಸಿದೆ. ಆಹಾರ ಸಂಸ್ಕರಣೆಗಾಗಿ ಸರ್ಕಾರಿ ಯೋಜನೆಗಳನ್ನು ಬೆಂಬಲಿಸುವಲ್ಲಿ ಬ್ಯಾಂಕುಗಳು ನಿರ್ಣಾಯಕ ಪಾತ್ರ ವಹಿಸುತ್ತಿವೆ. ಉದಾಹರಣೆಗೆ ಪ್ರಧಾನ ಮಂತ್ರಿಗಳ ಸೂಕ್ಷ್ಮ ಸಂಸ್ಕರಣಾ ಉದ್ಯಮಗಳ ಔಪಚಾರೀಕರಣ(ಪಿಎಂ-ಎಫ್‌ಎಂಇ) ಯೋಜನೆ, ಕೃಷಿ ಮೂಲಸೌಕರ್ಯ ನಿಧಿ(ಎಐಎಫ್) ಮತ್ತು ಪ್ರಧಾನ ಮಂತ್ರಿ ಕಿಸಾನ್ ಸಂಪದ ಯೋಜನೆ(ಪಿಎಂಕೆಎಸ್‌ವೈ) ಇವು ಉದ್ಯಮಶೀಲರು ಮತ್ತು ರೈತರು ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಮತ್ತು ವಿಸ್ತರಿಸಲು ಅಗತ್ಯವಾದ ಹಣ ಬೆಂಬಲ ಪಡೆಯಲು ಅನುವು ಮಾಡಿಕೊಡುತ್ತದೆ.

- ಎಫ್‌ಪಿಒಗಳು ಇತರೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿದ್ದರೂ ಸಹ, ಅವುಗಳಿಗೆ ಓವರ್‌ಡ್ರಾಫ್ಟ್ ಸೌಲಭ್ಯಗಳನ್ನು ಒದಗಿಸುವ ಸಾಧ್ಯತೆಯನ್ನು ಬ್ಯಾಂಕುಗಳು ಅನ್ವೇಷಿಸಬಹುದು.
- ನಬಾರ್ಡ್‌ನ ಅಂಗಸಂಸ್ಥೆಗಳಲ್ಲಿ ಒಂದಾದ ನಬ್ ಸಂರಕ್ಷಣ್(**NABSanraction**) ನಿಂದ ಜಾರಿಗೆ ತರಲಾದ ಎಫ್‌ಪಿಒಗಳಿಗೆ ಕ್ರೆಡಿಟ್ ಗ್ಯಾರಂಟಿ ಯೋಜನೆಯಡಿ, ಎಫ್‌ಪಿಒಗಳಿಗೆ ಮೇಲಾಧಾರ ರಹಿತ ಸಾಲ ಒದಗಿಸುವ ಸಾಧ್ಯತೆಗಳನ್ನು ಬ್ಯಾಂಕುಗಳು ಅನ್ವೇಷಿಸಬಹುದು.

ಎಫ್‌ಪಿಒ ಹಣಕಾಸು ಕುರಿತು ಬ್ಯಾಂಕರ್‌ಗಳಿಗೆ ಒಂದು ದಿನದ ಕಾರ್ಯಾಗಾರ ಆಯೋಜಿಸುವಂತೆ ಕರ್ನಾಟಕ ಸರ್ಕಾರದ ಎಸಿಎಸ್&ಡಿಸಿ ಅವರು ನಬಾರ್ಡ್ ಗೆ ಮನವಿ ಮಾಡಿದರು.

ಕೃಷಿ ಮತ್ತು ಇತರೆ ಸಂಬಂಧಿತ ವಲಯಗಳಿಗೆ ಸಾಲದ ಹರಿವಿನಲ್ಲಿನ ಸಮಸ್ಯೆಗಳನ್ನು ಚರ್ಚಿಸಲು ಎಸ್‌ಎಲ್‌ಬಿಸಿ, ಬ್ಯಾಂಕುಗಳು, ಸರ್ಕಾರಿ ಇಲಾಖೆಗಳ ಸಭೆ ನಡೆಸುವಂತೆ ಕರ್ನಾಟಕ ಸರ್ಕಾರದ ಎಸಿಎಸ್&ಡಿಸಿ ಅವರು ಕೃಷಿ ಇಲಾಖೆಗೆ ಸಲಹೆ ನೀಡಿದರು. ನಬಾರ್ಡ್ ಸಿಜಿಎಂ ಅವರು ಈ ಸಲಹೆಯನ್ನು ಸ್ವಾಗತಿಸಿದರಲ್ಲದೆ, ಕೃಷಿ ಇಲಾಖೆ ಆಯೋಜಿಸುವ ಈ ಸಭೆಯನ್ನು ನಬಾರ್ಡ್ ನಲ್ಲಿ ನಡೆಸುವುದಾಗಿ ಪ್ರಸ್ತಾಪಿಸಿದರು.

ರಾಜ್ಯದ ಎಫ್‌ಪಿಒಗಳಿಗೆ ಹಣಕಾಸು ಒದಗಿಸುವಲ್ಲಿ ಎಲ್ಲಾ ಬ್ಯಾಂಕುಗಳು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಬಾರ್ಡ್ ಸಿಜಿಎಂ ಸಲಹೆ ನೀಡಿದರು.

**(ಕ್ರಮ: ಎಲ್ಲಾ ಬ್ಯಾಂಕುಗಳು, ಕೃಷಿ ಇಲಾಖೆ)**

**ಕಾರ್ಯಸೂಚಿ 12.6 ದಿನಾಂಕ 11.09.2024 ರ ಸುತ್ತೋಲೆ ಸಂಖ್ಯೆ 181 ಮತ್ತು ದಿನಾಂಕ 20.12.2024 ರ ಸುತ್ತೋಲೆ ಸಂಖ್ಯೆ 314 ರ ಮೂಲಕ ಕೃಷಿ ಮಾರುಕಟ್ಟೆ**

**ಮೂಲಸೌಕರ್ಯ(ಎಐಎಫ್) ಯೋಜನೆಯ ಮಾರ್ಗಸೂಚಿಗಳ ಪರಿಷ್ಕರಣೆಯನ್ನು ಕ್ರಮವಾಗಿ 01.10.2024 ಮತ್ತು 10.11.2024 ರಿಂದ ಜಾರಿಗೆ ಬರುವಂತೆ ಮಾಡಲಾಗಿದೆ.**

ಸುತ್ತೋಲೆಯ ಪ್ರಮುಖ ಬದಲಾವಣೆಗಳನ್ನು ಅನುಬಂಧ "ಎ"ಯಲ್ಲಿ ಲಗತ್ತಿಸಲಾಗಿದೆ.

**ಕಾರ್ಯಸೂಚಿ 12.7 ಮೊದಲ ವಿತರಣೆಯ 90 ದಿನಗಳ ಕಾಲಮಿತಿಯೊಳಗೆ ಎಐಎಫ್ ಯೋಜನೆಯ ಪ್ರಸ್ತಾವನೆಗಳನ್ನು ಸಲ್ಲಿಸದ ಬ್ಯಾಂಕುಗಳ ಕುರಿತು ಸುತ್ತೋಲೆ ಸಂಖ್ಯೆ: 18 /ಡಿಒಆರ್೦3 /2೦25 ದಿನಾಂಕ 22.01.2025.**

ಕ್ಲೇಮ್‌ಗಳನ್ನು ಸಲ್ಲಿಸಲು ಕಾಲಮಿತಿ ಹೆಚ್ಚಳವಾಗಿದ್ದರೂ, ಗಡುವಿನ ನಂತರವೂ ಕ್ಲೇಮ್‌ಗಳನ್ನು ಸಲ್ಲಿಸಲು ಅವಕಾಶ ನೀಡುವಂತೆ ನಬಾರ್ಡ್‌ಗೆ ಆಗಾಗ್ಗೆ ಮನವಿಗಳು ಬರುತ್ತಿವೆ. ಭಾರತ ಸರ್ಕಾರದ ಹಣಕಾಸು ಸಚಿವಾಲಯದ ಹಣಕಾಸು ಸೇವೆಗಳ ಇಲಾಖೆಯು ದಿನಾಂಕ 09.01.2025 (ಪ್ರತಿ ಲಗತ್ತಿಸಲಾಗಿದೆ) ದಿನಾಂಕದ ಪತ್ರ ಸಂಖ್ಯೆ ಎಫ್ ನಂ.3/45/2೦24-ಎಸಿ ಮೂಲಕ ಕೃಷಿ ಮಾರುಕಟ್ಟೆ ಮೂಲಸೌಕರ್ಯ(ಎಐಎಫ್) ಮುಂಗಡ ಸಬ್ಸಿಡಿ ಕ್ಲೇಮ್‌ಗಳನ್ನು ನಿಗದಿತ ಸಮಯದೊಳಗೆ ಸಲ್ಲಿಸುವಂತೆ ಸೂಚಿಸಿದೆ. ಎಲ್ಲಾ ಬ್ಯಾಂಕುಗಳು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಮತ್ತು ಮುಂಗಡ ಸಬ್ಸಿಡಿ ಕ್ಲೇಮ್‌ಗಳನ್ನು ಸಕಾಲಿಕವಾಗಿ ಸಲ್ಲಿಸುವುದನ್ನು ಖಚಿತಪಡಿಸಿಕೊಳ್ಳುವಂತೆ ಮನವಿ ಮಾಡಲಾಗಿದೆ.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 12.8 ನಬಾರ್ಡ್ ಬಿಡುಗಡೆ ಮಾಡಿದ ಸಬ್ಸಿಡಿಗಳಿಗೆ ಸಂಬಂಧಿಸಿದಂತೆ ಬಳಕೆಯ ಪ್ರಮಾಣಪತ್ರಗಳನ್ನು ತಕ್ಷಣವೇ ಸಲ್ಲಿಸುವುದು**

ಎಲ್ಲಾ ಬ್ಯಾಂಕುಗಳು ನಬಾರ್ಡ್‌ನಿಂದ ಪಡೆದ ಸಬ್ಸಿಡಿಗಳಿಗೆ ಸಂಬಂಧಿಸಿದಂತೆ ಬಳಕೆ ಪ್ರಮಾಣಪತ್ರವನ್ನು ಸಬ್ಸಿಡಿ ಸ್ವೀಕರಿಸಿದ ಮತ್ತು ಸಬ್ಸಿಡಿಯನ್ನು ಸಬ್ಸಿಡಿ ಮೀಸಲು ನಿಧಿ ಖಾತೆಯಲ್ಲಿ ಇರಿಸಿದ ನಂತರ 15 ದಿನಗಳ ಒಳಗೆ ಸಲ್ಲಿಸಬೇಕು.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 12.9 ರಾಷ್ಟ್ರವ್ಯಾಪಿ ಕೆಸಿಸಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಪರಿಪೂರ್ಣತೆ ಅಭಿಯಾನ**

ಜಿಲ್ಲಾ ಮಟ್ಟದಲ್ಲಿ ನಡೆದ ಸಪ್ತಾಹ(ವಾರದ) ಶಿಬಿರಗಳಲ್ಲಿ ಬ್ಯಾಂಕುಗಳು ಸ್ವೀಕರಿಸಿದ ಕೆಸಿಸಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಅರ್ಜಿಗಳನ್ನು ಜಿಲ್ಲೆಯ ಸಂಬಂಧಪಟ್ಟ ಲೀಡ್ ಜಿಲ್ಲಾ ವ್ಯವಸ್ಥಾಪಕರು ಭಾರತ ಸರ್ಕಾರದ ಹಣಕಾಸು ಸೇವೆಗಳ ಇಲಾಖೆಯ ಜನ ಸುರಕ್ಷಾ

ಪೋರ್ಟಲ್‌ನಲ್ಲಿ ಪರಿಷ್ಕರಿಸಿದ್ದಾರೆ, ಆದರೆ ಇತರೆ ಬ್ಯಾಂಕುಗಳ ಬಾಕಿ ಅರ್ಜಿಗಳು ಸಹಕಾರಿ ಬ್ಯಾಂಕುಗಳ ಅಡಿ ಕಾಣಿಸಿಕೊಳ್ಳುತ್ತಿರುವುವುದನ್ನು ಗಮನಿಸಲಾಗಿದೆ, ಇದು ದತ್ತಾಂಶ ವ್ಯತ್ಯಾಸಕ್ಕೆ ಕಾರಣವಾಗುತ್ತಿದೆ. ಹಾಗಾಗಿ, ಎಲ್‌ಡಿಎಂಗಳು ಅಂತಹ ವರದಿ ಮಾಡದಂತೆ ಸೂಚಿಸಬಹುದು.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 12.10 ಎಲೆಕ್ಟ್ರಾನಿಕ್ ನೆಗೋಷಿಯೇಬಲ್ ವೇರ್‌ಹೌಸ್ ರಶೀದಿ(ಇ-ಎನ್‌ಡಬ್ಲ್ಯುಆರ್) ಮೂಲಕ ಕೃಷಿ ಸರಕುಗಳಿಗೆ ಅಡಮಾನ ಹಣಕಾಸು**

- ಗೋದಾಮು ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ)ಡಬ್ಲ್ಯುಡಿಆರ್ ಎ)ವನ್ನು ಗೋದಾಮು ಅಭಿವೃದ್ಧಿ ಮತ್ತು ನಿಯಂತ್ರಣ ಕಾಯ್ದೆ-2007ರ ಅಡಿ ಸ್ಥಾಪಿಸಲಾಯಿತು, ಇದು ದೇಶದಲ್ಲಿ ನೆಗೋಷಿಯೇಬಲ್ ಗೋದಾಮು ರಶೀದಿ )ಎನ್‌ಡಬ್ಲ್ಯುಆರ್) ವ್ಯವಸ್ಥೆ ರೂಪಿಸುವ ಪ್ರಾಥಮಿಕ ಗುರಿ ಹೊಂದಿದೆ-ಇ . ಎನ್‌ಡಬ್ಲ್ಯುಆರ್‌ಗಳು ಪಾರದರ್ಶಕ, ಪರಿಣಾಮಕಾರಿ ಮತ್ತು ಸುರಕ್ಷಿತ ವ್ಯವಸ್ಥೆ ಒದಗಿಸುವ ಮೂಲಕ ಕೃಷಿ ಗೋದಾಮು ಮತ್ತು ವ್ಯಾಪಾರ ವಲಯವನ್ನು ಪರಿವರ್ತಿಸಿವೆ.
- ಇದನ್ನು ಗಮನದಲ್ಲಿಟ್ಟುಕೊಂಡು, ಬ್ಯಾಂಕುಗಳು ಇ- ಎನ್‌ಡಬ್ಲ್ಯುಆರ್‌ಗಳ ಮೂಲಕ ಅಡಮಾನ ಹಣಕಾಸು ಸಾಲ ವಿಸ್ತರಣೆಯನ್ನು ಪ್ರೋತ್ಸಾಹಿಸಲಾಗುತ್ತದೆ, ಇದು ರೈತರಿಗೆ ಪ್ರಯೋಜನ ನೀಡುತ್ತದೆ, ಕೃಷಿ ಉತ್ಪನ್ನಗಳಿಗೆ ಔಪಚಾರಿಕ ಸಾಲದ ಪ್ರವೇಶ ಹೆಚ್ಚಿಸುತ್ತದೆ.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**ಕಾರ್ಯಸೂಚಿ 12.11 ಗ್ರಾಮೀಣ ಸಂಪರ್ಕಕ್ಕಾಗಿ ಹಣಕಾಸು ಸೇರ್ಪಡೆ ನಿಧಿ (ಎಫ್‌ಐಎಫ್) ಅಡಿ ಬೆಂಬಲ- ಎಚ್‌ಟಿಎಸ್-ವಿಎಸ್‌ಎಟಿ, ಡ್ಯುಯಲ್ ಎಲ್‌ಟಿಇ ಮತ್ತು ಎಸ್‌ಡಿಡಬ್ಲ್ಯುಎಎನ್ ತಂತ್ರಜ್ಞಾನಗಳು**

ನೆಟ್‌ವರ್ಕ್ ಬೂದು ಪ್ರದೇಶಗಳಲ್ಲಿ ಸೌರ ಮತ್ತು ಸೌರಶಕ್ತಿ ಚಾಲಿತವಲ್ಲದ ವಿಸ್ಯಾಟ್ ಗಳಿಗೆ ಬಂಡವಾಳ ವೆಚ್ಚ ಬೆಂಬಲದ ರೂಪದಲ್ಲಿ ಸಂಪರ್ಕ ಸುಧಾರಿಸಲು ನಬಾರ್ಡ್, ಹಣಕಾಸು ಸೇರ್ಪಡೆ ನಿಧಿ(ಎಫ್‌ಐಎಫ್) ಅಡಿ ಬೆಂಬಲ ಒದಗಿಸುತ್ತಿದೆ. ಬೆಂಬಲಿತ ವಿಸ್ಯಾಟ್ ವಿಶಾಲ ಕಿರಣ-ಆಧಾರಿತ ಸಂವಹನ ವ್ಯವಸ್ಥೆ ಆಧರಿಸಿದೆ. ಅದರ ಮಿತಿಗಳನ್ನು ಗಮನದಲ್ಲಿಟ್ಟುಕೊಂಡು, ಸುಧಾರಣೆಯಾಗಿ ಎಚ್‌ಟಿಎಸ್ ಆಧಾರಿತ ವಿಸ್ಯಾಟ್ ಸಂವಹನ ವ್ಯವಸ್ಥೆ ಪರಿಚಯಿಸಲು ನಿರ್ಧರಿಸಲಾಗಿದೆ.

**ಅರ್ಹ ಸಂಸ್ಥೆಗಳು:**

**ಹೊಸ ಘಟಕಗಳಿಗೆ**

ಈಶಾನ್ಯ ಪ್ರದೇಶ, ಗುಡ್ಡಗಾಡು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ (ಉದಾಹರಣೆಗೆ ಹಿಮಾಚಲ ಪ್ರದೇಶ, ಉತ್ತರಾಖಂಡ, ಲಡಾಖ್ ಮತ್ತು ಜಮ್ಮು-ಕಾಶ್ಮೀರ) ಎಲ್ಲಾ ಬ್ಯಾಂಕುಗಳು

ಎಸ್‌ಡಿ ಡಬ್ಲ್ಯುಎಎನ್ ಅಥವಾ ಡ್ಯುಯಲ್ ಎಲ್‌ಟಿಇ ಸಂಯೋಜನೆಯೊಂದಿಗೆ ಎಚ್‌ಟಿಎಸ್ ವಿಸ್ಯಾಟ್/ಎಚ್‌ಟಿಎಸ್ ವಿಸ್ಯಾಟ್ ಸ್ಥಾಪನೆಗೆ ಬೆಂಬಲ ಪಡೆಯಲು ಅರ್ಹವಾಗಿವೆ. ದೇಶದ ಇನ್ನುಳಿದ ಭಾಗಗಳ ಶ್ರೇಣಿ 5/ಶ್ರೇಣಿ 6 ಕೇಂದ್ರಗಳಲ್ಲಿ ಸಂಪರ್ಕವು ಅನಿಯಮಿತವಾಗಿದ್ದು, ಹಣಕಾಸು ಸೇರ್ಪಡೆ ನಿಧಿ (ಎಫ್‌ಐಎಫ್) ಅಡಿ, ವಿಸ್ಯಾಟ್ ಗೆ ಈ ಮೊದಲು ಯಾವುದೇ ಬೆಂಬಲ ಪಡೆಯಲು ಅರ್ಹವಾಗಿಲ್ಲ.

## ಅಸ್ತಿತ್ವದಲ್ಲಿರುವ ವಿಸ್ಯಾಟ್ ಗಳ ಬದಲಾವಣೆ

ಗ್ರಾಮೀಣ ಸಹಕಾರಿ ಬ್ಯಾಂಕುಗಳು(ರಾಜ್ಯ ಸಹಕಾರಿ ಬ್ಯಾಂಕುಗಳು ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು) ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಈಗಾಗಲೇ ಸ್ಥಾಪಿಸಲಾದ ವೈಡ್ ಬೀಮ್ ಆಧಾರಿತ ವಿಸ್ಯಾಟ್ ನಿಂದ ಎಚ್‌ಟಿಎಸ್-ವಿಸ್ಯಾಟ್ ತಂತ್ರಜ್ಞಾನಕ್ಕೆ ಬದಲಾಯಿಸಬಹುದು, ಆಗ ಅಲ್ಲಿ ಈ ಮೊದಲು ಸ್ಥಾಪಿಸಲಾದ ಸಾಧನಗಳು ಕಾರ್ಯ ನಿರ್ವಹಿಸುವುದಿಲ್ಲ.

## ಬೆಂಬಲದ ವ್ಯಾಪ್ತಿ

| ಮಾಡೆಲ್ | ತಂತ್ರಜ್ಞಾನ | ಎಫ್‌ಐಎಫ್ ಅಡಿ ಬೆಂಬಲ | ಅರ್ಹ ಭಾಗ |
|---|---|---|---|
| I | ಎಸ್‌ಡಿ ಡಬ್ಲ್ಯುಎಎನ್ /ಡ್ಯುಯಲ್ ಎಲ್‌ಟಿಇ ಜೊತೆಗೆ ಎಚ್‌ಟಿಎಸ್-ವಿಸ್ಯಾಟ್ ಸಂಯೋಜನೆ | 3,00,000 ರೂ. ಅಥವಾ ತಗುಲಿದ ವೆಚ್ಚದ 90%, ಯಾವುದು ಕಡಿಮೆಯೋ ಅದು | ಬಂಡವಾಳ ವೆಚ್ಚ + ಕಾರ್ಯಾಚರಣೆ ವೆಚ್ಚ |
| II | ಎಚ್‌ಟಿಎಸ್ ವಿಸ್ಯಾಟ್ ಮಾತ್ರ | 2,65,500 ರೂ. ಅಥವಾ ತಗುಲಿದ ವೆಚ್ಚದ 90%, ಯಾವುದು ಕಡಿಮೆಯೋ ಅದು | ಬಂಡವಾಳ ವೆಚ್ಚ + ಕಾರ್ಯಾಚರಣೆ ವೆಚ್ಚ |
| III | 4ಜಿ ಡ್ಯುಯಲ್ ಎಲ್‌ಟಿಇ ಮಾತ್ರ | 34,500 ರೂ. ಅಥವಾ ತಗುಲಿದ ವೆಚ್ಚದ 90%, ಯಾವುದು ಕಡಿಮೆಯೋ ಅದು | ಕಾರ್ಯಾಚರಣೆ ವೆಚ್ಚ |
| IV | ಎಸ್‌ಡಿ ಡಬ್ಲ್ಯುಎಎನ್ ಮಾತ್ರ | 34,500 ರೂ. ಅಥವಾ ತಗುಲಿದ ವೆಚ್ಚದ 90%, ಯಾವುದು ಕಡಿಮೆಯೋ ಅದು | ಬಂಡವಾಳ ವೆಚ್ಚ |

- ಮೇಲಿನ ಕೋಷ್ಟಕದಲ್ಲಿ ಸೂಚಿಸಿದಂತೆ ಮಾದರಿ(ಮಾಡೆಲ್) ಸಂಖ್ಯೆ I, II, III ಮತ್ತು IV ಇವುಗಳಲ್ಲಿ ಒಂದು ಶಾಖೆಗೆ ಒಂದು ಮಾದರಿಯನ್ನು ಮಾತ್ರ ಬ್ಯಾಂಕ್ ಬೆಂಬಲಕ್ಕೆ ಆಯ್ಕೆ ಮಾಡಬಹುದು.

---

- ಅರ್ಥಿಂಗ್ ಪಿಟ್ ಮತ್ತು ಕೇಜಿಂಗ್ ಇತ್ಯಾದಿಗಳಿಗೆ ಆರಂಭಿಕ ಸೆಟಪ್ ವೆಚ್ಚವನ್ನು ಎಚ್‌ಟಿಎಸ್-ವಿಸ್ಯಾಟ್ ಗಾಗಿ ಬಂಡವಾಳ ವೆಚ್ಚದ ಭಾಗವಾಗಿ ಸೇರಿಸಬಹುದು.
- ಕಾರ್ಯಾಚರಣೆ ವೆಚ್ಚಕ್ಕೆ ನೀಡುವ ಬೆಂಬಲವು 1 ವರ್ಷಕ್ಕೆ ಮಾತ್ರ ಮಾನ್ಯವಾಗಿರುತ್ತದೆ.

**ಕಾರ್ಯಾಚರಣೆ ಅವಧಿ:** ಈ ಯೋಜನೆಯು 3 ವರ್ಷಗಳ ಅವಧಿಗೆ ಕಾರ್ಯ ನಿರ್ವಹಿಸುತ್ತದೆ, ಅಂದರೆ 2024 ಏಪ್ರಿಲ್ 1ರಿಂದ 2027 ಮಾರ್ಚ್ 31ರ ವರೆಗೆ.

ಈ ಯೋಜನೆಯಡಿ ಬೆಂಬಲ ಪಡೆಯಲು ಬ್ಯಾಂಕ್‌ಗಳು ನಬಾರ್ಡ್‌ಗೆ ಪ್ರಸ್ತಾವನೆಗಳನ್ನು ಸಲ್ಲಿಸಬೇಕು ಎಂದು ನಬಾರ್ಡ್ ಸಿಜಿಎಂ ಮನವಿ ಮಾಡಿದರು.

**(ಕ್ರಮ: ಎಲ್ಲಾ ಬ್ಯಾಂಕುಗಳು)**

**<u>ಕಾರ್ಯಸೂಚಿ 12.12 – ಹಣಕಾಸು ಸಾಕ್ಷರತಾ ಕೇಂದ್ರ(ಸಿಎಫ್‌ಎಲ್)</u>**

- ಕರ್ನಾಟಕದಲ್ಲಿ ಹಣಕಾಸು ಸಾಕ್ಷರತಾ ಕೇಂದ್ರ(ಸಿಎಫ್‌ಎಲ್) ಯೋಜನೆಯ ಹಂತ-IIIರ ಅಡಿ, 41 ಹೊಸ ಹಣಕಾಸು ಸಾಕ್ಷರತಾ ಕೇಂದ್ರ(ಸಿಎಫ್‌ಎಲ್) ಗಳನ್ನು ಸ್ಥಾಪಿಸಲಾಗಿದೆ, ಇವುಗಳಿಗೆ 100% ಬಂಡವಾಳ ವೆಚ್ಚ ಮತ್ತು 90% ಕಾರ್ಯಾಚರಣೆ ವೆಚ್ಚ ಪೂರೈಸಲು ಪ್ರತಿ ಸಿಎಫ್‌ಎಲ್‌ಗೆ 29.30 ಲಕ್ಷ ರೂ. ಒಟ್ಟು ಅನುದಾನ ಬೆಂಬಲವನ್ನು ಎಫ್‌ಐಎಫ್ ಅಡಿ ಮಂಜೂರು ಮಾಡಲಾಗಿದೆ .ಪ್ರತಿ ಸಿಎಫ್‌ಎಲ್‌ಗೆ 5 ಲಕ್ಷ ರೂ. ಬಂಡವಾಳ ವೆಚ್ಚ ಬೆಂಬಲ ಮತ್ತು 3 ವರ್ಷಗಳವರೆಗೆ)ಒಟ್ಟು ಕಾರ್ಯಾಚರಣೆ ವೆಚ್ಚದ 90% (ಪ್ರತಿ ಸಿಎಫ್‌ಎಲ್‌ಗೆ 8.10 ಲಕ್ಷ ರೂ. ಕಾರ್ಯಾಚರಣೆ ವೆಚ್ಚದ ಬೆಂಬಲವನ್ನು ಎಫ್‌ಐಎಫ್ ಅಡಿ ನೀಡಲಾಗುತ್ತದೆ. ಇದಲ್ಲದೆ, 27.08.2024ರ ಸುತ್ತೋಲೆ ಸಂಖ್ಯೆ 163ರ ಪ್ರಕಾರ, 41 ಸಿಎಫ್‌ಎಲ್‌ಗಳಿಗೆ ಹೆಚ್ಚುವರಿ ಹಣ ಹಂಚಿಕೆ ಮಾಡಲಾಗಿದೆ .ಎಲ್ಲಾ ಪ್ರಾಯೋಜಕ ಬ್ಯಾಂಕ್‌ಗಳು ಅಂದರೆ ಬ್ಯಾಂಕ್ ಆಫ್ ಬರೋಡಾ)ಮಂಡ್ಯ ಮತ್ತು ಹುಬ್ಬಳ್ಳಿ(, ಯುಬಿಐ ಮತ್ತು ಕೆನರಾ ಬ್ಯಾಂಕ್‌ಗಳು ಮೊದಲ ವರ್ಷದಲ್ಲೂ ಕಾರ್ಯಾಚರಣೆ ಮೆಚ್ಚಕ್ಕೆ ಅರ್ಹವಾಗಿರುವುದರಿಂದ 2025 ಫೆಬ್ರವರಿ 20ರ ಮೊದಲು ಹೆಚ್ಚುವರಿ ನಿಧಿಯ ಮಂಜೂರಾತಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಮನವಿ ಮಾಡಲಾಗಿದೆ. ಆ ದಿನಾಂಕಕ್ಕೆ ಅನ್ವಯವಾಗುವಂತೆ, ಎಸ್‌ಬಿಐನಿಂದ ಮಾತ್ರ ಪ್ರಸ್ತಾವನೆ ಸ್ವೀಕರಿಸಲಾಗಿದೆ ಮತ್ತು ಅದು ಪ್ರಕ್ರಿಯೆಯಲ್ಲಿದೆ.
- ಪ್ರಾಯೋಜಕ ಬ್ಯಾಂಕ್‌ಗಳಾದ ಎಸ್‌ಬಿಐ, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ ಮತ್ತು ಯೂನಿಯನ್ ಬ್ಯಾಂಕ್‌ಗಳಿಂದ ಬಂಡವಾಳ ವೆಚ್ಚ ಕ್ಲೈಮ್‌ಗಳನ್ನು ಸ್ವೀಕರಿಸಲಾಗಿದೆ. 40 ಸಿಎಫ್‌ಎಲ್‌ಗಳ ಬಂಡವಾಳ ವೆಚ್ಚ ಕ್ಲೈಮ್‌ಗಳನ್ನು ಇತ್ಯರ್ಥಪಡಿಸಲಾಗಿದೆ.
- ಕೆನರಾ ಬ್ಯಾಂಕಿನ ಕಾರ್ಯಾಚರಣೆ ವೆಚ್ಚ ಕ್ಲೈಮ್ 2024ರ ಜೂನ್ ತ್ರೈಮಾಸಿಕದಿಂದ ಬಾಕಿ ಇದೆ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಎಸ್‌ಬಿಐ ಡಿಸೆಂಬರ್ ತ್ರೈಮಾಸಿಕದ ಕಾರ್ಯಾಚರಣೆ ವೆಚ್ಚದ ಕ್ಲೈಮ್‌ಗಳನ್ನು ಸಲ್ಲಿಸಬೇಕಿದೆ.

- ಕಾರ್ಯಾಚರಣೆ ವೆಚ್ಚದ ತ್ರೈಮಾಸಿಕ ಕ್ಲೈಮ್‌ಗಳನ್ನು ನಬಾರ್ಡ್‌ಗೆ ಸಕಾಲಿಕದಲ್ಲಿ ಸಲ್ಲಿಸುವುದನ್ನು ಖಚಿತಪಡಿಸಿಕೊಳ್ಳುವಂತೆ ಪ್ರಾಯೋಜಕ ಬ್ಯಾಂಕ್‌ಗಳಿಗೆ ನಬಾರ್ಡ್ ಸಿಜಿಎಂ ಸೂಚಿಸಿದರು.

**(ಕ್ರಮ: ಎಲ್ಲಾ ಬ್ಯಾಂಕ್‌ಗಳು)**

## ಕಾರ್ಯಸೂಚಿ 12.13 ಹಣಕಾಸು ಪ್ರಮಾಣದ ಡಿಜಿಟಲೀಕರಣ

ರೈತರು ಸೇರಿದಂತೆ ಕೃಷಿ ಸಂಬಂಧಿತ ಚಟುವಟಿಕೆ ನಡೆಸುವ ಫಲಾನುಭವಿಗಳು ಸುಲಭವಾಗಿ ಸಾಲ ಪಡೆಯುವಂತೆ ಮಾಡಲು ಭಾರತ ಸರ್ಕಾರವು ರಾಜ್ಯ ಸರ್ಕಾರಗಳೊಂದಿಗೆ ಸೇರಿ "ಕೃಷಿ-ಸಂಚಯ" ಸ್ಥಾಪಿಸುತ್ತಿದೆ. ಕೃಷಿ-ಸಾಲದ ಪ್ರಮಾಣವನ್ನು ನಿರ್ಧರಿಸುವಲ್ಲಿ ನಿಧಿಯ ಪ್ರಮಾಣ(ಎಸ್‌ಒಎಫ್) ಒಂದು ಪ್ರಮುಖ ಪರಿಮಾಣ(ವೇರಿಯಬಲ್) ಆಗಿರುವುದರಿಂದ, ಭಾರತ ಸರ್ಕಾರದ ಕೃಷಿ ಮತ್ತು ಕೃಷಿಕರ ಕಲ್ಯಾಣ ಸಚಿವಾಲಯದ ಬೆಳೆ ನೋಂದಣಿಗೆ ಅನುಗುಣವಾಗಿ ನಿಧಿ ಪ್ರಮಾಣದ ದತ್ತಾಂಶ ಸೆರೆಹಿಡಿಯಲು ನಬಾರ್ಡ್, ಡಿಜಿಟಲ್ ಎಸ್‌ಒಎಫ್ ನೋಂದಣಿ ರೂಪಿಸಿದೆ. ಈ ಸ್ವರೂಪಗಳನ್ನು ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿ(ಡಿಎಲ್‌ಟಿಸಿ) ಮತ್ತು ರಾಜ್ಯ ಮಟ್ಟದ ತಾಂತ್ರಿಕ ಸಮಿತಿ(ಎಸ್‌ಎಲ್‌ಟಿಸಿ) ಸಭೆಗಳ ಸಂಚಾಲಕರು (ಕ್ರಮವಾಗಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ಮತ್ತು ರಾಜ್ಯ ಸಹಕಾರಿ ಬ್ಯಾಂಕುಗಳು) ಪ್ರವೇಶಿಸಬಹುದು ಅಥವಾ ಪಡೆಯಬಹುದು. ಇದಕ್ಕೆ ಸಂಬಂಧಿಸಿದ ವಿವರಗಳನ್ನು ನಬಾರ್ಡ್ ಈಗಾಗಲೇ ಹಂಚಿಕೊಂಡಿದೆ.

ವಿವಿಧ ಬ್ಯಾಂಕುಗಳು ಸಾಲ ಪ್ರಸ್ತಾವನೆಗಳನ್ನು ಮಂಜೂರು ಮಾಡುವಾಗ ಪರಿಷ್ಕೃತ ಎಸ್‌ಒಎಫ್ ಅನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯತೆಯ ಬಗ್ಗೆ ನಬಾರ್ಡ್ ಸಿಜಿಎಂ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

**(ಕ್ರಮ: ಎಲ್ಲಾ ಬ್ಯಾಂಕುಗಳು)**

## ಕಾರ್ಯಸೂಚಿ ವಿಷಯ ಸಂಖ್ಯೆ – 13

## ಸಾಮಾಜಿಕ ಭದ್ರತಾ ಯೋಜನೆಗಳ ಪ್ರಗತಿ:

ಪಿಎಂಜೆಜೆಬಿವೈ, ಪಿಎಂಎಸ್‌ಬಿವೈ ಮತ್ತು ಎಪಿವೈ ಯೋಜನೆಗಳ ಅಡಿ, 31.12.2024 ರ ವೇಳೆಗೆ ಬಾಕಿ ಇರುವ ಖಾತೆಗಳ ಸಂಖ್ಯೆ ಕ್ರಮವಾಗಿ 193 ಲಕ್ಷ, 79 ಲಕ್ಷ ಮತ್ತು 38 ಲಕ್ಷವಿದೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

ಖಾಸಗಿ ವಲಯದ ಬ್ಯಾಂಕುಗಳು ಕಳಪೆ ಕಾರ್ಯಕ್ಷಮತೆ ತೋರುತ್ತಿವೆ ಎಂದು ಹಣಕಾಸು ಇಲಾಖೆಯ ವಿತ್ತೀಯ ಸುಧಾರಣೆಗಳು ವಿಭಾಗದ ಸರ್ಕಾರದ ಕಾರ್ಯದರ್ಶಿ ಡಾ. ಆರ್. ವಿಶಾಲ್ ಕಳವಳ ವ್ಯಕ್ತಪಡಿಸಿದರು. ಪ್ರತಿ ಬ್ಯಾಂಕ್ ವಾರಕ್ಕೆ ಪ್ರತಿ ಶಾಖೆಗೆ ಐದು ಖಾತೆ ತೆರೆಯುವ ಗುರಿ ಸಾಧಿಸಬೇಕು ಎಂದು ಅವರು ಒತ್ತಿ ಹೇಳಿದರು. ಹೆಚ್ಚುವರಿಯಾಗಿ, ಸಾಮಾಜಿಕ ಭದ್ರತಾ ಯೋಜನೆಗಳ ಅಡಿ, ಗೃಹಲಕ್ಷ್ಮಿ ಫಲಾನುಭವಿಗಳ ನೋಂದಣಿ ಮಾಡಲು(ದಾಖಲಿಸುವತ್ತ) ಗಮನ ಹರಿಸಬೇಕೆಂದು ಅವರು ಎಲ್ಲಾ ಬ್ಯಾಂಕರ್‌ಗಳನ್ನು ಒತ್ತಾಯಿಸಿದರು.

ಅಲ್ಲದೆ, ರಾಜ್ಯ ಸರ್ಕಾರವು "ಚಾಲೆಂಜ್ ಫಂಡ್ ಸ್ಕೀಮ್ 2024-25" ಎಂಬ ವಿಶೇಷ ಉಪಕ್ರಮ ಆರಂಭಿಸಿದೆ. ಈ ಯೋಜನೆಯಡಿ, ಪ್ರತಿ ಜಿಲ್ಲಾ ಗುಂಪಿಗೆ 5 ಲಕ್ಷ ರೂ. ಪ್ರೋತ್ಸಾಹ ಧನ ನೀಡಲಾಗುವುದು, ಇದು 6 ಜಿಲ್ಲೆಗಳಿಗೆ ಪ್ರಯೋಜನ ಒದಗಿಸುತ್ತದೆ. 2024 ಜೂನ್ ಒಳಗೆ ಪಿಎಂಜೆಜೆಬಿವೈನಲ್ಲಿ 25% ಮತ್ತು ಪಿಎಂಎಸ್‌ಬಿವೈನಲ್ಲಿ 40% ಹೆಚ್ಚುತ್ತಿರುವ ಬೆಳವಣಿಗೆಯ ಗುರಿ ಸಾಧಿಸುವುದು ಅರ್ಹತಾ ಮಾನದಂಡಗಳಲ್ಲಿ ಸೇರಿದೆ. ಎಲ್ಲಾ ಬ್ಯಾಂಕುಗಳು ಮತ್ತು ಲೀಡ್ ಜಿಲ್ಲಾ ವ್ಯವಸ್ಥಾಪಕರು ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಅವರು ಸೂಚನೆ ನೀಡಿದರು.

**(ಕ್ರಮ: ಎಲ್ಲಾ ಲೀಡ್ ಜಿಲ್ಲಾ ವ್ಯವಸ್ಥಾಪಕರು ಮತ್ತು ಬ್ಯಾಂಕ್‌ಗಳು)**

## ಕಾರ್ಯಸೂಚಿ ವಿಷಯ ಸಂಖ್ಯೆ – 14

### ಪಿಎಂಸ್ವನಿಧಿ ಯೋಜನೆ:

ಪ್ರಧಾನಮಂತ್ರಿ ಸ್ವನಿಧಿ ಸಾಲಗಳ ಮಂಜೂರಾತಿಯಲ್ಲಿ ಕರ್ನಾಟಕ 4ನೇ ಸ್ಥಾನದಲ್ಲಿದೆ ಎಂದು ಸಂಚಾಲಕರು ಸಭೆಗೆ ಮಾಹಿತಿ ನೀಡಿದರು, ಮತ್ತೆ ನಂಬರ್ 1 ಸ್ಥಾನ ಪಡೆಯಲು ಹೆಚ್ಚಿನ ಶ್ರಮ ಹಾಕುವ ಅಗತ್ಯವಿದೆ. ಪ್ರಧಾನಮಂತ್ರಿ ಸ್ವನಿಧಿ ಯೋಜನೆಯಡಿ, ಬ್ಯಾಂಕುಗಳು 5,82,325 ಅರ್ಜಿಗಳನ್ನು ಮಂಜೂರು ಮಾಡಿದ್ದು, ಅವುಗಳಲ್ಲಿ 5,59,327 ಅರ್ಜಿಗಳನ್ನು ವಿತರಿಸಲಾಗಿದೆ ಎಂದು ಅವರು ಹೇಳಿದರು.

ಅರ್ಜಿಗಳ ತಿರಸ್ಕಾರಗಳಿಗೆ ಸರಿಯಾದ ಕಾರಣಗಳನ್ನು ಒದಗಿಸಬೇಕು ಮತ್ತು ಅದನ್ನು ದಾಖಲಿಸಬೇಕು ಎಂದು ಕರ್ನಾಟಕ ಸರ್ಕಾರದ ಎಸಿಎಸ್**&**ಡಿಸಿ ಅವರು ಎಲ್ಲಾ ಬ್ಯಾಂಕರ್‌ಗಳಿಗೆ ಸೂಚಿಸಿದರು,. ಪಿಎಂ ಸ್ವನಿಧಿ ಯೋಜನೆಯಡಿ, ಕರ್ನಾಟಕ ಬ್ಯಾಂಕಿನ ಕಾರ್ಯಕ್ಷಮತೆಯ ಬಗ್ಗೆ ಅಧ್ಯಕ್ಷರು ಅಸಮಾಧಾನ ವ್ಯಕ್ತಪಡಿಸಿದರು, ಬಾಕಿ ಇರುವ ಪ್ರಕರಣಗಳನ್ನು ತಕ್ಷಣವೇ ತೆರವುಗೊಳಿಸಬೇಕು ಎಂದು ಅವರು ನಿರ್ದೇಶನ ನೀಡಿದರು.

**(ಕ್ರಮ: ಕರ್ನಾಟಕ ಬ್ಯಾಂಕ್, ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಲ್‌ಡಿಎಂಗಳು)**

## ಕಾರ್ಯಸೂಚಿ ವಿಷಯ ಸಂಖ್ಯೆ – 15

---

**ವ್ಯವಹಾರ ಪ್ರತಿನಿಧಿಗಳ ಕಾರ್ಯ ನಿರ್ವಹಣೆ (ವ್ಯವಹಾರ ಪ್ರತಿನಿಧಿಗಳ ಕಾರ್ಯಾಚರಣೆ ಪರಾಮರ್ಶೆ – ಕಾರ್ಯಾಚರಣೆಯಲ್ಲಿರುವ ಅಡಚಣೆಗಳು/ಸಮಸ್ಯೆಗಳು):**

ಫಿನೋ ಪೇಮೆಂಟ್ಸ್ ಬ್ಯಾಂಕ್(15,621), ಏರ್‌ಟೆಲ್ ಪೇಮೆಂಟ್ಸ್ ಬ್ಯಾಂಕ್(2,960), ಕೆನರಾ ಬ್ಯಾಂಕ್(1,122), ಎಕ್ಸಿಸ್ ಬ್ಯಾಂಕ್(450), ಯೆಸ್ ಬ್ಯಾಂಕ್(131) ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್(68)ಗಳಲ್ಲಿ ಅತಿ ಹೆಚ್ಚು ನಿಷ್ಕ್ರಿಯ ವ್ಯವಹಾರ ಪ್ರತಿನಿಧಿಗಳು ಇದ್ದಾರೆ ಎಂದು ಎಸ್‌ಎಲ್‌ಬಿಸಿ ಸಂಚಾಲಕರು ತಿಳಿಸಿದರು.

ದಿನಾಂಕ 05.12.2024ರಂದು ಬಿಡುಗಡೆಯಾದ ಐಬಿಎ ಪತ್ರದ ಪ್ರಕಾರ, ವ್ಯವಹಾರ ಪ್ರತಿನಿಧಿಗಳನ್ನು ನಿಷ್ಕ್ರಿಯ ಎಂದು ವರ್ಗೀಕರಿಸಲು 3 ತಿಂಗಳವರೆಗೆ ಯಾವುದೇ ಹಣಕಾಸು/ಹಣಕಾಸೇತರ ವಹಿವಾಟು ಇರುವುದಿಲ್ಲ ಎಂದು ಎಸ್‌ಎಲ್‌ಬಿಸಿ ಸಂಚಾಲಕರು ತಿಳಿಸಿದ್ದಾರೆ. ವ್ಯವಹಾರ ಪ್ರತಿನಿಧಿಗಳ ನಿಷ್ಕ್ರಿಯತೆ ಪರಿಶೀಲನೆಯನ್ನು ತ್ರೈಮಾಸಿಕ ಆಧಾರದಲ್ಲಿ ನಡೆಸಬೇಕು. ಎಲ್ಲಾ ಸದಸ್ಯ ಬ್ಯಾಂಕುಗಳು ಭಾರತೀಯ ಬ್ಯಾಂಕುಗಳ ಸಂಘಟನೆ(ಐಬಿಎ) ಮಾರ್ಗಸೂಚಿಗಳಿಗೆ ಅನುಗುಣವಾಗಿ ವ್ಯವಹಾರ ಪ್ರತಿನಿಧಿಗಳ ನಿಷ್ಕ್ರಿಯತೆಯನ್ನು ವರ್ಗೀಕರಿಸಬೇಕು ಮತ್ತು ಎಸ್‌ಎಲ್‌ಬಿಸಿಗೆ ನಿಖರವಾದ ವರದಿ ಖಚಿತಪಡಿಸಬೇಕು ಎಂದರು.

**(ಕ್ರಮ: ಕೆನರಾ ಬ್ಯಾಂಕ್, ಎಸ್‌ಬಿಐ, ಯುಬಿಐ, ಬಿಒಬಿ, ಬಿಒಐ, ಇಂಡಿಯನ್ ಬ್ಯಾಂಕ್, ಪಿಎನ್‌ಬಿ, ಯುಸಿಒ, ಕರ್ನಾಟಕ ಬ್ಯಾಂಕ್, ಎಚ್‌ಡಿಎಫ್‌ಸಿ, ಎಕ್ಸಿಸ್ ಬ್ಯಾಂಕ್, ಯೆಸ್ ಬ್ಯಾಂಕ್, ಐಡಿಎಫ್‌ಸಿ, ಏರ್‌ಟೆಲ್ ಪೇಮೆಂಟ್ ಬ್ಯಾಂಕ್ ಮತ್ತು ಫಿನೋ ಪೇಮೆಂಟ್ ಬ್ಯಾಂಕ್)**

**ವ್ಯವಹಾರ ಪ್ರತಿನಿಧಿ ಸಖಿಗಳು**:

ಎನ್‌ಆರ್‌ಎಲ್‌ಎಂ ಇಲಾಖೆಯು 5007 ಐಐಬಿಎಫ್ ಪ್ರಮಾಣೀಕೃತ ಮಹಿಳಾ ಸ್ವಸಹಾಯ ಸಂಘದ ಸದಸ್ಯರ ಪಟ್ಟಿ ಹಂಚಿಕೊಂಡಿದೆ, ಈ ಸದಸ್ಯರನ್ನು ವ್ಯವಹಾರ ಪ್ರತಿನಿಧಿ(ಬಿಸಿ) ಸಖಿಗಳಾಗಿ ನಿಯೋಜಿಸಲು ಸದಸ್ಯ ಬ್ಯಾಂಕ್‌ಗಳಿಗೆ ತಿಳಿಸಲಾಗಿದೆ ಎಂದು ಎಸ್‌ಎಲ್‌ಬಿಸಿ ಸಂಚಾಲಕರು ತಿಳಿಸಿದರು.

ಗ್ರಾಮ ಪಂಚಾಯಿತಿ ಕಚೇರಿ ಕಟ್ಟಡದಲ್ಲಿ ಈ ಬಿಸಿ ಸಖಿಗಳಿಗೆ ಉಚಿತ ಸ್ಥಳ ಮತ್ತು ಮೂಲಸೌಕರ್ಯಗಳನ್ನು ಒದಗಿಸಲಾಗುವುದು ಎಂದು ಕರ್ನಾಟಕ ಸರ್ಕಾರದ ಎಸಿಎಸ್&ಡಿಸಿ ತಿಳಿಸಿದರಲ್ಲದೆ, ಮತ್ತು ಬ್ಯಾಂಕರ್‌ಗಳು ಬಿಸಿ ಸಖಿಯರನ್ನು ಸಂಪರ್ಕಿಸಬೇಕು ಎಂದು ಸೂಚನೆ ನೀಡಿದರು. ಇದಲ್ಲದೆ, ನಿಷ್ಕ್ರಿಯ ಬಿಸಿ ಸ್ಥಳಗಳನ್ನು ಕರ್ನಾಟಕ ಸರ್ಕಾರದ ಎನ್‌ಎಲ್‌ಎಂ ಇಲಾಖೆಗೆ ಹಂಚಿಕೊಳ್ಳಬೇಕು ಎಂದು ಅವರು ಎಲ್ಲಾ ಬ್ಯಾಂಕುಗಳಿಗೆ ಸೂಚನೆ ನೀಡಿದರು.

ಹೆಚ್ಚುವರಿಯಾಗಿ, ಡಿಸಿಸಿ/ಡಿಎಲ್‌ಆರ್‌ಸಿ ಸಭೆಗಳಲ್ಲಿ ಇದನ್ನು ಕಾರ್ಯಸೂಚಿಯಾಗಿ ಸೇರಿಸಲು ಜಿಲ್ಲೆಗಳ ಸಿಇಒಗಳಿಗೆ ಪತ್ರ ಬರೆಯುವಂತೆ ಅವರು ಎನ್‌ಎಲ್‌ಎಂ ಇಲಾಖೆಯ ವ್ಯವಸ್ಥಾಪಕ ನಿರ್ದೇಶಕ(ಎಂಡಿ)ರಿಗೆ ಸಲಹೆ ನೀಡಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ – 16**

**ಆರ್ಥಿಕ(ಹಣಕಾಸು) ಸಾಕ್ಷರತಾ ಶಿಬಿರಗಳ ಪರಾಮರ್ಶೆ:**

31.12.2024ರ ವರೆಗೆ ಅನ್ವಯವಾಗುವಂತೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(32), ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ(7), ಕೆಜಿಬಿ(1) ಮತ್ತು ಬ್ಯಾಂಕ್ ಆಫ್ ಇಂಡಿಯಾ(1) ಕಾರ್ಯ ನಿರ್ವಹಿಸದ(ನಾನ್-ಫಂಕ್ಷನಲ್) ಹಣಕಾಸು ಸಾಕ್ಷರತಾ ಕೇಂದ್ರಗಳನ್ನು ಹೊಂದಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು. ಬ್ಯಾಂಕ್ ಆಫ್ ಇಂಡಿಯಾ ಬೆಳಗಾವಿ ಜಿಲ್ಲೆಯಲ್ಲಿ ಕೇವಲ 1 ಹಣಕಾಸು ಸಾಕ್ಷರತಾ ಕೇಂದ್ರ ಹೊಂದಿದ್ದು, ಅದು ಕಳೆದ 2 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿಲ್ಲ ಎಂದರು.

ಕಾರ್ಯ ನಿರ್ವಹಿಸದ ಹಣಕಾಸು ಸಾಕ್ಷರತಾ ಕೇಂದ್ರಗಳನ್ನು ಕಾರ್ಯಶೀಲವಾಗಿಸುವಂತೆ ಕರ್ನಾಟಕ ಸರ್ಕಾರದ ಎಸಿಎಸ್&ಡಿಸಿ ಮತ್ತು ಸಭೆಯ ಅಧ್ಯಕ್ಷರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಇಂಡಿಯಾ ಮತ್ತು ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗಳಿಗೆ ಸೂಚನೆ ನೀಡಿದರು. ಇದಲ್ಲದೆ, ಸಮಾಜದ ಕೆಳ ಮಟ್ಟದಲ್ಲಿಯೂ ಆರ್ಥಿಕ ಅಥವಾ ಹಣಕಾಸು ಜಾಗೃತಿ ಮೂಡಿಸಬೇಕೆಂದು ಅವರು ಪುನರುಚ್ಚರಿಸಿದರು.

**(ಕ್ರಮ: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಇಂಡಿಯಾ ಮತ್ತು ಕೆಜಿಬಿ)**

**ಕಾರ್ಯಸೂಚಿ ವಿಷಯ ಸಂಖ್ಯೆ – 17**

**ಹಣಕಾಸು ಸಾಕ್ಷರತಾ ಕೇಂದ್ರ (ಸಿಎಫ್‌ಎಲ್ ಗಳು):**

ಕರ್ನಾಟಕ ರಾಜ್ಯದಲ್ಲಿ 79 ಸಿಎಫ್‌ಎಲ್‌ಗಳು ಅಸ್ತಿತ್ವದಲ್ಲಿದ್ದು ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಬ್ಯಾಂಕ್ ಆಫ್ ಬರೋಡಾ ಪ್ರಾಯೋಜಕತ್ವ ನೀಡುತ್ತಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು.

ಈ ತ್ರೈಮಾಸಿಕದಲ್ಲಿ ನಡೆಸಲಾದ ಒಟ್ಟು ಶಿಬಿರಗಳ ಸಂಖ್ಯೆ 12,456 ಮತ್ತು ಭಾಗವಹಿಸಿದವರ ಸಂಖ್ಯೆ 5,28,746.

ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಸ್ಥಳಾವಕಾಶ ಕಲ್ಪಿಸಲು ಸಿಎಫ್‌ಎಲ್‌ಗಳ ಪ್ರಾಯೋಜಕ ಬ್ಯಾಂಕ್‌ಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವಂತೆ ಕರ್ನಾಟಕ ಸರ್ಕಾರದ ಎಸಿಎಸ್ & ಡಿಸಿ ಅವರು ಎನ್‌ಎಲ್‌ಎಂ ಇಲಾಖೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಸಲಹೆ ನೀಡಿದರು. ಹೀಗೆ ಮಾಡುವುದರಿಂದ ಸ್ವಸಹಾಯ ಸಂಘಗಳ ಮಹಿಳಾ ಸದಸ್ಯರು, ಹಿರಿಯ ನಾಗರಿಕರು ಮತ್ತು ಇತರ ಗುರಿ ಗುಂಪುಗಳಿಗೆ ಆರ್ಥಿಕ ಸಾಕ್ಷರತಾ ಚಟುವಟಿಕೆ ನಡೆಸಲು ಸಿಎಫ್‌ಎಲ್‌ಗಳಿಗೆ ಅನುವು ಮಾಡಿಕೊಡುತ್ತದೆ ಎಂದರು.

**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**
**ಸಂಚಾಲಕರು: ಕೆನರಾ ಬ್ಯಾಂಕ್**

---

**ಕಾರ್ಯಸೂಚಿ ವಿಷಯ ಸಂಖ್ಯೆ – 18**

**ಗುರಿಯಾಧರಿತ ಹಣಕಾಸು ಸೇರ್ಪಡೆ ಮಧ್ಯಸ್ಥಿಕೆ ಕಾರ್ಯಕ್ರಮಕ್ಕಾಗಿ ರಾಜ್ಯ ಮಟ್ಟದ ಅನುಷ್ಠಾನ ಸಮಿತಿ (ಟಿಎಫ್‌ಐಐಪಿ)**:

ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳು ಪಿಎಂಜೆಜೆಬಿವೈ ಮತ್ತು ಎಪಿವೈ ಗುರಿಗಳನ್ನು ಸಾಧಿಸಿವೆ, ಪಿಎಂಎಸ್‌ಬಿವೈ ಮತ್ತು ಸಿಎಎಸ್‌ಎ ಅಡಿ, ಗುರಿಗಳನ್ನು ಸಾಧಿಸಿಲ್ಲ ಎಂದು ಸಂಚಾಲಕರು ಮಾಹಿತಿ ನೀಡಿದರು.

ಇದಲ್ಲದೆ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪಿಎಂಎಸ್‌ಬಿವೈ ಮತ್ತು ಸಿಎಎಸ್‌ಎ ಅಡಿ, ನಿಗದಿಪಡಿಸಿದ ಗುರಿ ಸಾಧಿಸಲು ಎಲ್ಲಾ ಸದಸ್ಯ ಬ್ಯಾಂಕುಗಳಿಗೆ ಅವರು ಮನವಿ ಮಾಡಿದರು.

**(ಕ್ರಮ: ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಎಲ್ಲಾ ಸದಸ್ಯ ಬ್ಯಾಂಕುಗಳು, ಎಲ್‌ಡಿಎಂ)**

**ಕಾರ್ಯಸೂಚಿ ವಿಷಯ ಸಂಖ್ಯೆ – 19**

**ಕೆಸಿಸಿ ಸಾಲಗಳು – ವಿತರಣೆ ಮತ್ತು ಬಾಕಿ:**

2024 ಡಿಸೆಂಬರ್ ವೇಳೆಗೆ ಒಟ್ಟು ಕೆಸಿಸಿ ಸಾಲದ ಬಾಕಿ ಮೊತ್ತದಲ್ಲಿ 69,340 ಕೋಟಿ ರೂ. ಸಾಧನೆಯಾಗಿದೆ ಎಂದು ಎಸ್‌ಎಲ್‌ಬಿಸಿ ಸಂಚಾಲಕರು ಸಭೆಗೆ ತಿಳಿಸಿದರು. ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗಾಗಿ ಎಲ್ಲಾ ಅರ್ಹ ರೈತರಿಗೆ ಕೆಸಿಸಿ ಸಾಲಗಳನ್ನು ಮಂಜೂರು ಮಾಡುವಂತೆ ಎಸ್‌ಎಲ್‌ಬಿಸಿ ಸಂಚಾಲಕರು ಎಲ್ಲಾ ಸದಸ್ಯ ಬ್ಯಾಂಕ್‌ಗಳಿಗೆ ಮನವಿ ಮಾಡಿದರು.

**(ಕ್ರಮಗಳು: ಎಲ್ಲಾ ಸದಸ್ಯ ಬ್ಯಾಂಕ್)**

**ಕೆಸಿಸಿ-ಡೇರಿ ಮತ್ತು ಇತರೆ ಪಶುಸಂಗೋಪನಾ ಚಟುವಟಿಕೆಗಳು:**

ಬ್ಯಾಂಕ್‌ಗಳು 1,049 ಕೋಟಿ ರೂ. ಮೊತ್ತದ 1,93,816 ಕೆಸಿಸಿ ಪಶುಸಂಗೋಪನೆ ಸಾಲಗಳನ್ನು ಮಂಜೂರು ಮಾಡಿವೆ ಎಂದು ಎಸ್‌ಎಲ್‌ಬಿಸಿ ಸಂಚಾಲಕರು ಸಭೆಗೆ ತಿಳಿಸಿದರು.

ಬ್ಯಾಂಕ್‌ಗಳು 303 ಕೋಟಿ ರೂ. ಮೊತ್ತದ 20,347 ಕೆಸಿಸಿ ಮೀನುಗಾರಿಕೆ ಸಾಲಗಳನ್ನು ಮಂಜೂರು ಮಾಡಿವೆ ಎಂದು ಅವರು ತಿಳಿಸಿದರು.

**(ಕ್ರಮಗಳು: ಎಲ್ಲಾ ಸದಸ್ಯ ಬ್ಯಾಂಕ್‌ಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಕರ್ನಾಟ ಸರ್ಕಾರ)**

**ಕಾರ್ಯಸೂಚಿ ವಿಷಯ ಸಂಖ್ಯೆ – 20**

**ಕೃಷಿ ಮತ್ತು ಕೃಷಿಕರ ಕಲ್ಯಾಣ ಯೋಜನೆಗಳ ಇಲಾಖೆ:**

**20.1: ಕೃಷಿ ಮೂಲಸೌಕರ್ಯ ನಿಧಿ(ಎಐಎಫ್) :**

ಕರ್ನಾಟಕ ರಾಜ್ಯವು ಸಾಲ ವಿತರಣೆಯಲ್ಲಿ 5ನೇ ಸ್ಥಾನದಲ್ಲಿದೆ ಮತ್ತು ಪ್ಯಾನ್ ಇಂಡಿಯಾ ಆಧಾರದ ಮೇಲೆ ಮಂಜೂರಾತಿಯಲ್ಲಿ 6ನೇ ಸ್ಥಾನದಲ್ಲಿದೆ ಎಂದು ಸಂಚಾಲಕರು ತಿಳಿಸಿದರು.

2024-25ನೇ ಹಣಕಾಸು ವರ್ಷದಲ್ಲಿ ಬ್ಯಾಂಕುಗಳು 798 ಖಾತೆಗಳಿಗೆ 943 ಕೋಟಿ ರೂ. ಮೊತ್ತದ ಸಾಲ ಮಂಜೂರು ಮಾಡಿವೆ ಎಂದು ಸಂಚಾಲಕರು ತಿಳಿಸಿದರು.

ಇದಲ್ಲದೆ, ಮಂಜೂರಾತಿ ಮತ್ತು ವಿತರಣೆ ಪ್ರಕರಣಗಳಲ್ಲಿ ಇರುವ ಎಲ್ಲಾ ಬಾಕಿಗಳನ್ನು ಸದಸ್ಯ ಬ್ಯಾಂಕುಗಳು ಪಾವತಿಸಬೇಕು, ಅಲ್ಲದೆ ಅಸ್ತಿತ್ವದಲ್ಲಿರುವ ಎಲ್ಲಾ ಅರ್ಜಿಗಳಿಗೆ ಬ್ಯಾಂಕುಗಳು ಕೃಷಿ ಮ್ಯಾಪರ್ ಅಪ್ಲಿಕೇಶನ್ ಬಳಸಿ ಜಿಯೋ ಟ್ಯಾಗಿಂಗ್ ಪೂರ್ಣಗೊಳಿಸಬೇಕು ಎಂದು ಅವರು ಎಲ್ಲಾ ಸದಸ್ಯ ಬ್ಯಾಂಕುಗಳಿಗೆ ಸೂಚಿಸಿದರು.

ಮುಂಬರುವ ಎಸ್‌ಎಲ್‌ಬಿಸಿ ಸಭೆಗಳಲ್ಲಿ ಎಐಎಫ್ ಯೋಜನೆಗಳ ಜಿಯೋಟ್ಯಾಗಿಂಗ್ ಕುರಿತ ಪರಿಷ್ಕರಣೆಗಳನ್ನು, ವರ್ಷವಾರು ಪ್ರಗತಿಯನ್ನು ಒಟ್ಟುಗೂಡಿಸುವುದನ್ನು ಕಾರ್ಯಸೂಚಿಯ ಅಂಶವಾಗಿ ಸೇರಿಸಬೇಕು ಎಂದು ಸಭೆಯ ಅಧ್ಯಕ್ಷರು ಮತ್ತು ಕರ್ನಾಟಕ ಸರ್ಕಾರದ ಎಸಿಎಸ್&ಡಿಸಿ ಎಸ್‌ಎಲ್‌ಬಿಸಿಗೆ ಸೂಚನೆ ನೀಡಿದರು.

**(ಕ್ರಮಗಳು: ಎಲ್ಲಾ ಸದಸ್ಯ ಬ್ಯಾಂಕ್‌ಗಳು ಮತ್ತು ಎಸ್‌ಎಲ್‌ಬಿಸಿ)**

**20.2: ಎಲೆಕ್ಟ್ರಾನಿಕ್ ನೆಗೋಷಿಯೇಬಲ್ ವೇರ್‌ಹೌಸ್ ರಶೀದಿ (ಇ-ಎನ್ ಡಬ್ಲ್ಯುಆರ್) ಮೂಲಕ ಕೃಷಿ ಸರಕುಗಳಿಗೆ ಅಡಮಾನ ಹಣಕಾಸು:**

31.12.2024ರ ವರೆಗೆ ಅನ್ವಯವಾಗುವಂತೆ, ಬ್ಯಾಂಕುಗಳು 2,429 ಸಾಲ ಅರ್ಜಿಗಳನ್ನು ಬಾಕಿ ಉಳಿಸಿಕೊಂಡಿದ್ದು, ಇವುಗಳ ಮೊತ್ತ 539 ಕೋಟಿ ರೂ.ಗಳಷ್ಟಿದೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

**20.3: ಪಶು ಮೂಲಸೌಕರ್ಯ ಅಭಿವೃದ್ಧಿ ನಿಧಿ ಅಡಿ, ಪಶುಸಂಗೋಪನೆ ಕ್ಷೇತ್ರಕ್ಕೆ ನೀಡಿರುವ ಸಾಲ ಯೋಜನೆಗಳ ಕಾರ್ಯಕ್ಷಮತೆ:**

ಆತ್ಮನಿರ್ಭರ್ ಭಾರತ್ ಪ್ಯಾಕೇಜ್ ಅಡಿ, ಈ ಯೋಜನೆ ಆರಂಭಿಸಲಾಗುತ್ತಿದೆ ಎಂದು ಸಂಚಾಲಕರು ಸಭೆಗೆ ಮಾಹಿತಿ ನೀಡಿದರು, ಶಾಖೆಗಳ ಮಟ್ಟದಲ್ಲಿ ಯೋಜನೆಯ ಬಗ್ಗೆ ಪ್ರಚಾರ ಮಾಡುವಂತೆ ಅವರು ಎಲ್ಲಾ ಬ್ಯಾಂಕರ್‌ಗಳಿಗೆ ಸಲಹೆ ನೀಡಿದರು.

**(ಕ್ರಮಗಳು: ಎಲ್ಲಾ ಸದಸ್ಯ ಬ್ಯಾಂಕ್‌ಗಳು)**

**20.4: ರೈತ ಉತ್ಪಾದಕ ಕಂಪನಿಗಳು/ರೈತ ಉತ್ಪಾದಕ ಸಂಸ್ಥೆಗಳಿಗೆ ಹಣಕಾಸು:**

31.12.2024ರ ವರೆಗೆ ಅನ್ವಯವಾಗುವಂತೆ, ಬ್ಯಾಂಕುಗಳು 18.50 ಕೋಟಿ ರೂ. ಮೊತ್ತದ 48 ಸಾಲಗಳನ್ನು ಮಂಜೂರು ಮಾಡಿವೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

**20.5: ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ(ಪಿಎಂಎಫ್‌ಬಿವೈ):**

31.12.2024ರ ವರೆಗೆ ಅನ್ವಯವಾಗುವಂತೆ, ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ(ಎನ್‌ಪಿಸಿಐ) ಪಾವತಿ ವೈಫಲ್ಯ ಮತ್ತು ವಿವಿಧ ಸದಸ್ಯ ಬ್ಯಾಂಕ್‌ಗಳಿಂದ ಖಾಲಿ(ಬ್ಲಾಂಕ್) ಆಧಾರ್ ಕಾರಣದಿಂದಾಗಿ, ಪಿಎಂಎಫ್‌ಬಿವೈ ಯೋಜನೆ ಅಡಿ ಇತ್ಯರ್ಥಕ್ಕೆ ಬಾಕಿ ಇರುವ 2.35 ಕೋಟಿ ರೂ. ಮೊತ್ತದ 1,581 ಸಾಲ ಪ್ರಸ್ತಾವನೆಗಳಿವೆ ಎಂದು ಸಂಚಾಲಕರು ತಿಳಿಸಿದರು. ಇದಲ್ಲದೆ, ಐಸಿಐಸಿಐ ಬ್ಯಾಂಕ್ 1.20 ಕೋಟಿ ರೂ. ಮೊತ್ತದ 566 ಅರ್ಜಿಗಳ ಪ್ರಮುಖ ಬಾಕಿ ಉಳಿಸಿಕೊಂಡಿದೆ ಎಂದು ಅವರು ಮಾಹಿತಿ ನೀಡಿದರು.

15.03.2025ರೊಳಗೆ ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡುವಂತೆ ಕರ್ನಾಟಕ ಸರ್ಕಾರದ ಎಸಿಎಸ್&ಡಿಸಿ ಅವರು ಐಸಿಐಸಿಐ ಬ್ಯಾಂಕ್‌ಗೆ ಸೂಚನೆ ನೀಡಿದರು.

**(ಕ್ರಮಗಳು: ಐಸಿಐಸಿಐ ಬ್ಯಾಂಕ್)**

**20.6: ಪುನರ್ರಚಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ:**

ಇಲಾಖೆಯಿಂದ ದತ್ತಾಂಶ ಸ್ವೀಕರಿಸಲಾಗಿಲ್ಲ.

.

**ಕಾರ್ಯಸೂಚಿ ವಿಷಯ ಸಂಖ್ಯೆ – 21**

**ಪಿಎಂಎವೈ-ಯು: ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ (ಆರ್‌ಜಿಆರ್‌ಹೆಚ್‌ಸಿಎಲ್):**

ಇದುವರೆಗೆ ಇಲಾಖೆಯ 641 ಅರ್ಜಿಗಳ ಪಟ್ಟಿಯನ್ನು ಮಾತ್ರ ಎಸ್‌ಎಲ್‌ಬಿಸಿ ಮೂಲಕ ಬ್ಯಾಂಕುಗಳೊಂದಿಗೆ ಹಂಚಿಕೊಳ್ಳಲಾಗಿದೆ. ಹಲವು ಬ್ಯಾಂಕುಗಳು ದೃಢೀಕರಣ ನೀಡಿದ ನಂತರ, ಇಲಾಖೆಯು ಯಾವುದೇ ಬ್ಯಾಂಕಿನೊಂದಿಗೆ ಯಾವುದೇ ಭೌತಿಕ ಅರ್ಜಿಯನ್ನು ಸಲ್ಲಿಸಿಲ್ಲ ಎಂಬುದನ್ನು ಗಮನಿಸಲಾಗಿದೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಯು 30.11.2024ರಂದು ಮಾಹಿತಿ ನೀಡಿದ್ದು, 1 ತಿಂಗಳ ಅವಧಿಯೊಳಗೆ 21,100 ಸಾಲ ಅರ್ಜಿಗಳನ್ನು ಬ್ಯಾಂಕುಗಳಿಗೆ ಮತ್ತೆ ಸಲ್ಲಿಸುವುದಾಗಿ ತಿಳಿಸಿದೆ.

**(ಕ್ರಮ: ಆರ್‌ಜಿಆರ್‌ಹೆಚ್‌ಸಿಎಲ್ ಇಲಾಖೆ, ಕರ್ನಾಟಕ ಸರ್ಕಾರ)**

**ಕಾರ್ಯಸೂಚಿ ವಿಷಯ ಸಂಖ್ಯೆ – 22**

**ಸರ್ಕಾರಿ ಪ್ರಾಯೋಜಿತ ಯೋಜನೆಗಳು ಮತ್ತು ಸರ್ಕಾರಿ ಪ್ರಾಯೋಜಿತ ಯೋಜನೆಗಳಿಗೆ ಸಾಲ ನೀಡುವ ಕುರಿತು ಚರ್ಚೆ (ಡೇ-ಎನ್‌ಆರ್‌ಎಲ್‌ಎಂ, ಡೇ-ಎನ್ ಯುಎಲ್‌ಎಂ, ಮುದ್ರಾ, ಸ್ಟ್ಯಾಂಡ್-ಅಪ್ ಇಂಡಿಯಾ, ಇತ್ಯಾದಿ) ಮತ್ತು ಈ ಯೋಜನೆಗಳ ಪ್ರಭಾವ.**

**22.1: 31.12.2024ರ ವರೆಗೆ ಅನ್ವಯವಾಗುವಂತೆ ಪಿಎಂಇಜಿಪಿ ಕಾರ್ಯಕ್ಷಮತೆ:**

ರಾಜ್ಯದಲ್ಲಿ ನಿರುದ್ಯೋಗಿ ಯುವಕರಿಗೆ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸಲು ಸಹಾಯ ಮಾಡುವ ಪ್ರಧಾನ ಮಂತ್ರಿ ಉದ್ಯೋಗ ಸೃಜನೆ ಕಾರ್ಯಕ್ರಮ(ಪಿಎಂಇಜಿಪಿ) ಯೋಜನೆಯಡಿ ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡುವಂತೆ ಸದಸ್ಯ ಬ್ಯಾಂಕುಗಳಿಗೆ ಸಂಚಾಲಕರು ಮನವಿ ಮಾಡಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು)**

**22.2 ಅಲ್ಪಸಂಖ್ಯಾತ ಸಮುದಾಯಗಳಿಗೆ ಸಾಲ ಹರಿವು:**

**ಕಾರ್ಯಸೂಚಿ 22.2.1: ರಾಜ್ಯದಲ್ಲಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಹಣಕಾಸು ನೆರವಿನ ಅಡಿ ಪ್ರಗತಿ:**

31.12.2024ರ ವರೆಗೆ ಅನ್ವಯವಾಗುವಂತೆ, ವೇಳೆಗೆ ಅಲ್ಪಸಂಖ್ಯಾತ ಸಮುದಾಯಗಳಿಗೆ ಬಾಕಿ ಇರುವ ಸಾಲಗಳು 50,735 ಕೋಟಿ ರೂ.ಗಳಾಗಿದ್ದು, ಇದು ಒಟ್ಟು ಆದ್ಯತಾ ವಲಯದ ಮುಂಗಡ(ಪಿಎಸ್‌ಎ)ದ 11% ಆಗಿದೆ ಎಂದು ಸಂಚಾಲಕರು ತಿಳಿಸಿದರು.

2024-25ರ ಹಣಕಾಸು ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಗರಿಷ್ಠ ಸಾಲ ಮಂಜೂರು ಮಾಡುವ ಮೂಲಕ ದುರ್ಬಲ ವರ್ಗಗಳಿಗೆ ಪಿಎಸ್‌ಎ ಸಾಲದ ಅಡಿ, ಕಡ್ಡಾಯ ಅವಶ್ಯಕತೆಗಳನ್ನು ಪೂರೈಸುವಂತೆ(ಸಾಧಿಸುವಂತೆ) ಎಸ್‌ಎಲ್‌ಬಿಸಿ, ಎಲ್ಲಾ ಸದಸ್ಯ ಬ್ಯಾಂಕ್‌ಗಳಿಗೆ ಮನವಿ ಮಾಡಿತು.

**(ಕ್ರಮ: ಎಸ್‌ಎಲ್‌ಬಿಸಿ, ಎಲ್ಲಾ ಸದಸ್ಯ ಬ್ಯಾಂಕ್‌ಗಳು, ಎಲ್‌ಡಿಎಂಗಳು ಮತ್ತು ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ)**

**ಕಾರ್ಯಸೂಚಿ 22.2.2: ರಾಜ್ಯದ ಗುರುತಿಸಲಾದ ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಹಣಕಾಸು ನೆರವು ಅಡಿ ಪ್ರಗತಿ:**

2024-25ನೇ ಹಣಕಾಸು ವರ್ಷದಲ್ಲಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಹೆಚ್ಚಿನ ಸಾಲ ಸೌಲಭ್ಯ ಒದಗಿಸಲು ಶಾಖೆಗಳಿಗೆ ಸಲಹೆ ನೀಡುವಂತೆ ಎಸ್‌ಎಲ್‌ಬಿಸಿಯು ಬೀದರ್ ಎಸ್‌ಬಿಐ, ಕಲಬುರ್ಗಿ

ಎಸ್‌ಬಿಐ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಕೆನರಾ ಬ್ಯಾಂಕ್ ಗಳ ಲೀಡ್ ಜಿಲ್ಲಾ ವ್ಯವಸ್ಥಾಪಕರಿಗೆ ಮನವಿ ಮಾಡಿತು.

**(ಕ್ರಮ: ಬೀದರ್, ಕಲಬುರ್ಗಿ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಎಲ್ಲಾ ಸದಸ್ಯ ಬ್ಯಾಂಕುಗಳ ಎಲ್‌ಡಿಎಂಗಳು)**

## 22.3: ಸ್ವಸಹಾಯ ಗುಂಪು-ಬ್ಯಾಂಕ್ ಸಂಪರ್ಕ/ಜಂಟಿ ಹೊಣೆಗಾರಿಕೆ ಗುಂಪುಗಳ ಅಡಿ ಪ್ರಗತಿ:

### ಎನ್‌ಆರ್‌ಎಲ್‌ಎಂ ಸ್ವಸಹಾಯ ಗುಂಪುಗಳ (ಎಸ್‌ಎಚ್ ಜಿ) ಅಡಿ ಪ್ರಗತಿ:

ರಾಜ್ಯದ ಎನ್‌ಆರ್‌ಎಲ್‌ಎಂ ಸ್ವಸಹಾಯ ಗುಂಪುಗಳಿಗೆ ಬ್ಯಾಂಕುಗಳು 1,675 ಕೋಟಿ ರೂಪಾಯಿ ಸಾಲ ವಿತರಿಸಿವೆ ಎಂದು ಸಂಚಾಲಕರು ಸಭೆಗೆ ಮಾಹಿತಿ ನೀಡಿದರು. ಅಲ್ಲದೆ, ಅಜೀವಿಕ ಪೋರ್ಟಲ್‌ನಲ್ಲಿ ಎನ್‌ಆರ್‌ಎಲ್‌ಎಂ ಸ್ವಸಹಾಯ ಗುಂಪುಗಳ ದತ್ತಾಂಶ ಪರಿಷ್ಕರಿಸುವಂತೆ ಅವರು ಎಲ್ಲಾ ಬ್ಯಾಂಕುಗಳಿಗೆ ಮನವಿ ಮಾಡಿದರು.

ಎಚ್‌ಡಿಎಫ್‌ಸಿ ಬ್ಯಾಂಕ್ ಅಧಿಕಾರಿಯೊಬ್ಬರು, ತಮ್ಮ ಬ್ಯಾಂಕಿನಲ್ಲಿ ಎನ್‌ಆರ್‌ಎಲ್‌ಎಂ ಎಸ್‌ಎಚ್ ಜಿ ಟ್ರ್ಯಾಕಿಂಗ್ ಮಾಡಲಾಗುತ್ತಿಲ್ಲ ಎಂದು ಒಪ್ಪಿಕೊಂಡರು. ಈ ಸಮಸ್ಯೆಯನ್ನು ಕೇಂದ್ರ ಕಚೇರಿಯ ಗಮನಕ್ಕೆ ತರಲಾಗಿದೆ, ಮಾರ್ಚ್ 1ರಿಂದ ಎನ್‌ಆರ್‌ಎಲ್‌ಎಂ ಎಸ್‌ಎಚ್ ಜಿ ದತ್ತಾಂಶ ಸೆರೆಹಿಡಿಯಲು ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದ್ದಾರೆ, ನಂತರ ಅದನ್ನು ಆಜೀವಿಕಾ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದು ಎಂದರು.

ರಾಯಚೂರು ಡಿಸಿಸಿ ಬ್ಯಾಂಕಿನಲ್ಲಿ ಬಾಕಿ ಇರುವ ಅರ್ಜಿಗಳನ್ನು ತಕ್ಷಣವೇ ವಿಲೇವಾರಿ ಮಾಡುವಂತೆ ಎನ್‌ಎಲ್‌ಎಂ ವ್ಯವಸ್ಥಾಪಕ ನಿರ್ದೇಶಕರು ಅಪೆಕ್ಸ್ ಬ್ಯಾಂಕ್‌ಗೆ ಸೂಚನೆ ನೀಡಿದರು. ಹೆಚ್ಚುವರಿಯಾಗಿ, ಎಲ್ಲಾ ಬ್ಯಾಂಕುಗಳು ಎನ್‌ಆರ್‌ಎಲ್‌ಎಂ ಯೋಜನೆಯಡಿ, ಸಾಲ ಸಂಪರ್ಕ ಅಭಿಯಾನಗಳನ್ನು ಆಯೋಜಿಸುವಂತೆ ಅವರು ಸೂಚಿಸಿದರು.

2025 ಮಾರ್ಚ್ 31ರೊಳಗೆ ಎಲ್ಲಾ ಬ್ಯಾಂಕುಗಳು 100% ಗುರಿ ಸಾಧಿಸುವಂತೆ ಕರ್ನಾಟಕ ಸರ್ಕಾರದ ಎಸಿಎಸ್&ಡಿಸಿ ಅವರು ಸೂಚಿಸಿದರು. ಇದಲ್ಲದೆ, ಬ್ಯಾಂಕುಗಳು, ವಿಶೇಷವಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎನ್‌ಜಿಒಗಳ ಮೂಲಕ ಸಾಲ ಸಂಪರ್ಕ ಅರ್ಜಿಗಳನ್ನು ರವಾನಿಸಲು ಎನ್‌ಆರ್‌ಎಲ್‌ಎಂ ಸ್ವಸಹಾಯ ಗುಂಪುಗಳನ್ನು ಕೇಳಬಾರದು ಎಂದು ಅವರು ಒತ್ತಿ ಹೇಳಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು)**

### ಜಂಟಿ ಹೊಣೆಗಾರಿಕೆ ಗುಂಪುಗಳ (ಜೆಎಲ್‌ಜಿ) ಅಡಿ ಪ್ರಗತಿ:

---

2024 ಡಿಸೆಂಬರ್ 31ರ ವರೆಗೆ ಅನ್ವಯವಾಗುವಂತೆ, ಜಂಟಿ ಹೊಣೆಗಾರಿಕೆ ಗುಂಪುಗಳ (ಜೆಎಲ್‌ಜಿ) ಅಡಿ, ಸಾಲಗಳ ಒಟ್ಟು ಬಾಕಿ ಮೊತ್ತ 16,281 ಕೋಟಿ ರೂ. ಇದ್ದು, ಸದಸ್ಯ ಬ್ಯಾಂಕುಗಳು ನಿಗದಿಪಡಿಸಿದ ಗುರಿ ಸಾಧಿಸುವತ್ತ ಗಮನ ಹರಿಸಬೇಕೆಂದು ಸಂಚಾಲಕರು ತಿಳಿಸಿದರು.

**(ಕ್ರಮ: ಸದಸ್ಯ ಬ್ಯಾಂಕುಗಳು)**

**22.4: 31.12.2024ರ ವರೆಗೆ ಅನ್ವಯವಾಗುವಂತೆ, ಸ್ಟ್ಯಾಂಡ್ ಅಪ್ ಇಂಡಿಯಾ(ಎಸ್ ಯುಐ) ಯೋಜನೆಯ ಪ್ರಗತಿ**

2024 ಡಿಸೆಂಬರ್ ತನಕ ಬ್ಯಾಂಕುಗಳು ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆಯಡಿ, 289 ಕೋಟಿ ರೂ. ಮೊತ್ತದ ಸಾಲ ಮಂಜೂರು ಮಾಡಿವೆ ಎಂದು ಸಂಚಾಲಕರು ಸಭೆಯ ಗಮನಕ್ಕೆ ತಂದರು.

ಎಂಎಸ್‌ಎಂಇ ಇಲಾಖೆ, ಎಸ್ಸಿ/ಎಸ್ಟಿ ನಿಗಮ, ಕೆವಿಐಸಿ ಮತ್ತು ಡಿಐಸಿಸಿಗಳು ಗರಿಷ್ಠ ಸಂಖ್ಯೆಯ ಅರ್ಜಿಗಳನ್ನು ಸ್ವೀಕರಿಸಬೇಕು ಎಂದು ಎಸ್‌ಎಲ್‌ಬಿಸಿ ಮನವಿ ಮಾಡಿತು.

ಎಲ್ಲಾ ಬ್ಯಾಂಕುಗಳು 2025-26ನೇ ಹಣಕಾಸು ವರ್ಷದೊಳಗೆ ಬಾಕಿ ಇರುವ ಗುರಿ ಸಾಧಿಸಬೇಕು ಎಂದು ಎಸಿಎಸ್ & ಡಿಸಿ ಅವರು ಸೂಚನೆ ನೀಡಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕ್‌ಗಳು, ಸಂಬಂಧಿಸಿದ ಇಲಾಖೆಗಳು ಮತ್ತು ಎಲ್‌ಡಿಎಂಗಳು)**

**22.5: ಮುದ್ರಾ ಯೋಜನೆಯಡಿ ನೀಡಿರುವ ಮಂಜೂರಾತಿಗಳಲ್ಲಿ ಪ್ರಗತಿ:**

ಸದಸ್ಯ ಬ್ಯಾಂಕುಗಳು 01.04.2024ರಿಂದ 31.12.2024ರ ವರೆಗೆ 26,65,389 ಮುದ್ರಾ ಸಾಲ ಖಾತೆಗಳಿಗೆ 25,304 ಕೋಟಿ ರೂ. ಮೊತ್ತದ ಸಾಲ ಮಂಜೂರು ಮಾಡಿವೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

ಎಲ್ಲಾ ಸದಸ್ಯ ಬ್ಯಾಂಕುಗಳ ಸಕ್ರಿಯ ಭಾಗವಹಿಸುವಿಕೆ ಮತ್ತು ಸಂಬಂಧಿಸಿದ(ಲೈನ್) ಇಲಾಖೆಯ ಬೆಂಬಲದೊಂದಿಗೆ ಕರ್ನಾಟಕ ರಾಜ್ಯವು ಮುದ್ರಾ ಸಾಲ ಮಂಜೂರಾತಿ ಮತ್ತು ವಿತರಣೆಯಲ್ಲಿ ದೇಶದಲ್ಲೇ ಅಗ್ರಸ್ಥಾನ ಪಡೆದುಕೊಂಡಿದೆ ಎಂದು ಸಂಚಾಲಕರು ತಿಳಿಸಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು)**

**22.6 ಪಿಎಂಎಫ್‌ಎಂಇ ಯೋಜನೆಯ ಪ್ರಗತಿ:**

31.12.2024ರ ವರೆಗೆ ಸಲ್ಲಿಸಲಾದ 3,109 ಅರ್ಜಿಗಳಲ್ಲಿ 1,714 ಅರ್ಜಿಗಳಿಗೆ ಬ್ಯಾಂಕುಗಳು ಸಾಲ ಮಂಜೂರು ಮಾಡಿವೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು

ಬ್ಯಾಂಕುಗಳು ಎಲ್ಲಾ ಸಾಲಗಳನ್ನು ಮಂಜೂರು ಮಾಡಬೇಕು, ಮಂಜೂರಾತಿ ಮತ್ತು ವಿತರಣೆ ಅಡಿ, ಬಾಕಿ ಇರುವ ಸಾಲಗಳನ್ನು ತುರ್ತು ಆಧಾರದಲ್ಲಿ ವಿಲೇವಾರಿ ಮಾಡಬೇಕು ಎಂದು ಎಸಿಎಸ್&ಡಿಸಿ ಅವರು ಎಲ್ಲಾ ಬ್ಯಾಂಕುಗಳಿಗೆ ಸೂಚನೆ ನೀಡಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು, ಎಲ್‌ಡಿಎಂಗಳು, ಪಿಎಂಎಫ್‌ಎಂಇ ವಿಶೇಷ ಅಧಿಕಾರಿ, ಕೃಷಿ ಇಲಾಖೆ-ಕೆಎಪಿಪಿಇಸಿ)**

## 22.7: PMJDY ಖಾತೆಗಳಲ್ಲಿ ಆಧಾರ್ ಜೋಡಣೆಯ ಪ್ರಗತಿ:

31.12.2024ರ ವರೆಗೆ ಅನ್ವಯವಾಗುವಂತೆ, ಪಿಎಂಜೆಡಿವೈ ಖಾತೆಗಳ ಪೈಕಿ 81% ಖಾತೆಗಳಿಗೆ ಆಧಾರ್ ಜೋಡಣೆಯಾಗಿದೆ ಎಂದು ಸಂಚಾಲಕರು ಸದನಕ್ಕೆ ತಿಳಿಸಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕ್‌ಗಳು ಮತ್ತು ಎಲ್ಲಾ ಎಲ್‌ಡಿಎಂಗಳು)**

## 22.8: 2024-25ನೇ ಹಣಕಾಸು ವರ್ಷದಲ್ಲಿ ವಾರ್ಷಿಕ ಅಟಲ್ ಪಿಂಚಣಿ ಯೋಜನೆ (ಎಪಿವೈ) ಗುರಿಗಳ ಅಡಿ ಬ್ಯಾಂಕ್‌ಗಳ ಕಾರ್ಯಕ್ಷಮತೆ:(01.04.2024ರಿಂದ 31.12.2024ರ ವರೆಗೆ)

2024-25ನೇ ಹಣಕಾಸು ವರ್ಷದಲ್ಲಿ ಪಿಎಫ್‌ಆರ್‌ಡಿಎ ನಿಗದಿಪಡಿಸಿದ ಎಪಿವೈ ಗುರಿಗೆ ಪ್ರತಿಯಾಗಿ ಕರ್ನಾಟಕ ರಾಜ್ಯವು 31.12.2024ರ ವರೆಗೆ ಅನ್ವಯವಾಗುವಂತೆ 61% ಗುರಿ ಸಾಧಿಸಿದೆ. ಬ್ಯಾಂಕುಗಳು ಎಪಿವೈ ಅಡಿ, ಅಭಿಯಾನ ಮಾದರಿಯಲ್ಲಿ ಗರಿಷ್ಠ ಅರ್ಜಿಗಳನ್ನು ನೋಂದಾಯಿಸಿಕೊಳ್ಳಬೇಕು ಎಂದು ಸಂಚಾಲಕರು ತಿಳಿಸಿದರು.

ಖಾಸಗಿ ಬ್ಯಾಂಕ್‌ಗಳ ಕಾರ್ಯಕ್ಷಮತೆಯ ಬಗ್ಗೆ ಸಭೆಯ ಅಧ್ಯಕ್ಷರು ಅಸಮಾಧಾನ ವ್ಯಕ್ತಪಡಿಸಿ, ನಿಗದಿತ ಗುರಿ ಸಾಧಿಸುವಂತೆ ಸಲಹೆ ನೀಡಿದರು. ರಾಜ್ಯದ ಕಾರ್ಯಕ್ಷಮತೆಯನ್ನು ಖಾಸಗಿ ಬ್ಯಾಂಕ್‌ಗಳು ಮುನ್ನಡೆಸುತ್ತಿವೆ ಎಂದು ಅವರು ತಿಳಿಸಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕ್‌ಗಳು ಮತ್ತು ಎಲ್‌ಡಿಎಂಗಳು)**

## ಕಾರ್ಯಸೂಚಿ ವಿಷಯ ಸಂಖ್ಯೆ – 22.9

### ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆಯ ಕಾರ್ಯಕ್ಷಮತೆ:

31.12.2024ರ ವರೆಗೆ ಬ್ಯಾಂಕುಗಳು 64,650 ಅರ್ಜಿಗಳಿಗೆ 521 ಕೋಟಿ ರೂ. ಮೊತ್ತದ ಸಾಲ ಮಂಜೂರು ಮಾಡಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು.

## ಕಾರ್ಯಸೂಚಿ ವಿಷಯ ಸಂಖ್ಯೆ – 22.10

## ಪಿಎಂ ಸೂರ್ಯ ಘರ್ - ಮಫ್ತ್ ಬಿಜ್ಲಿ ಯೋಜನೆ (ಪಿಎಂಎಸ್ ಜಿಎಂಬಿವೈ) ಯೋಜನೆಯ ಕಾರ್ಯಕ್ಷಮತೆ

31.12.2024ರ ವರೆಗೆ ಬ್ಯಾಂಕುಗಳು 1,211 ಅರ್ಜಿಗಳಿಗೆ 26 ಕೋಟಿ ರೂ. ಮೊತ್ತದ ಸಾಲ ಮಂಜೂರು ಮಾಡಿವೆ ಎಂದು ಸಂಚಾಲಕರು ಮಾಹಿತಿ ನೀಡಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ** – 2**3**

## ಹಣಕಾಸು ಸೇರ್ಪಡೆ ಉಪಕ್ರಮಗಳು, ಬ್ಯಾಂಕಿಂಗ್ ಜಾಲದ ವಿಸ್ತರಣೆ ಮತ್ತು ಹಣಕಾಸು ಸಾಕ್ಷರತೆಯ ಪರಾಮರ್ಶೆ

5ನೇ ಶ್ರೇಣಿಯ ಗ್ರಾಮೀಣ ಕೇಂದ್ರಗಳಲ್ಲಿ ಬ್ಯಾಂಕ್ ಸೌಲಭ್ಯವಿಲ್ಲದ ಗ್ರಾಮೀಣ ಕೇಂದ್ರ (ಯು.ಆರ್.ಸಿ.)ವನ್ನು ಗುರುತಿಸುವ ಕುರಿತು ಎಸ್‌ಎಲ್‌ಬಿಸಿಯು ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆ ಮತ್ತು ಆರ್‌ಬಿಐನ ಹಣಕಾಸು ಸೇರ್ಪಡೆ ಮತ್ತು ಅಭಿವೃದ್ಧಿ ಇಲಾಖೆ(ಎಫ್‌ಐಡಿಡಿ)ಯಿಂದ ಸಂವಹನ ಸ್ವೀಕರಿಸಿದೆ.

ಎಸ್‌ಎಲ್‌ಬಿಸಿಯು ರಾಜ್ಯ ಸರ್ಕಾರದಿಂದ ಗ್ರಾಮ ಜನಸಂಖ್ಯಾವಾರು 2011ರ ಜನಗಣತಿ ದತ್ತಾಂಶ ಪಡೆದುಕೊಂಡಿದೆ. ದತ್ತಾಂಶದ ಪ್ರಕಾರ, 5000ದಿಂದ 9999 (ಶ್ರೇಣಿ 5)ರ ವರೆಗೆ ಜನಸಂಖ್ಯೆ ಹೊಂದಿರುವ 836 ಗ್ರಾಮಗಳಿವೆ. 836 ಗ್ರಾಮಗಳಲ್ಲಿ, 780 ಗ್ರಾಮಗಳಲ್ಲಿ ಈಗಾಗಲೇ ಸಾಂಪ್ರದಾಯಿಕ ಬ್ಯಾಕಿಂಗ್ ಸೇವೆ ಒದಗಿಸುತ್ತಿರುವ ಭೌತಿಕ ಬ್ಯಾಂಕ್ ಶಾಖೆಗಳನ್ನು ಹೊಂದಿವೆ. ಅದರಲ್ಲಿ 51 ಗ್ರಾಮಗಳು ಸ್ಥಿರ ವ್ಯವಹಾರ ಪ್ರತಿನಿಧಿಗಳನ್ನು ಹೊಂದಿವೆ ಮತ್ತು ಉಳಿದ 5 ಗ್ರಾಮಗಳು ಭೌತಿಕ ಬ್ಯಾಂಕ್ ಶಾಖೆಗಳನ್ನೂ ಹೊಂದಿಲ್ಲ ಮತ್ತು ಅಥವಾ ಸ್ಥಿರ ವ್ಯವಹಾರ ಪ್ರತಿನಿಧಿಗಳನ್ನು ಸಹ ಹೊಂದಿಲ್ಲ. ಆದರೆ, ಈ ಗ್ರಾಮಗಳಿಗೆ ಹತ್ತಿರದ ಸ್ಥಳಗಳಿಂದ ವ್ಯವಹಾರ ಪ್ರತಿನಿಧಿಗಳು ಸೇವೆ ಒದಗಿಸುತ್ತಿದ್ದಾರೆ.

31.12.2020ರ ವರೆಗೆ ಅನ್ವಯವಾಗುವಂತೆ, ಈ ಎಲ್ಲಾ 5ನೇ ಶ್ರೇಣಿಯ ಗ್ರಾಮಗಳು ಭೌತಿಕ ಬ್ಯಾಂಕ್ ಶಾಖೆ/ಸ್ಥಿರ ವ್ಯವಹಾರ ಪ್ರತಿನಿಧಿಗಳನ್ನು ಒಳಗೊಂಡಿವೆ. ಸಾರ್ವಜನಿಕ ವಲಯದ ಬ್ಯಾಂಕುಗಳ ವಿಲೀನದ ನಂತರ ಹಲವಾರು ಶಾಖೆಗಳನ್ನು ವಿಲೀನಗೊಳಿಸಲಾಯಿತು ಅಥವಾ ಮುಚ್ಚಲಾಯಿತು. ಇದಾದ ನಂತರ 56 ಕೇಂದ್ರಗಳು ಭೌತಿಕ ಬ್ಯಾಂಕ್ ಶಾಖೆಯಿಲ್ಲದೆ ಉಳಿದಿವೆ. ಅಂದಿನಿಂದ ಈ ಕೇಂದ್ರಗಳಿಗೆ ಸ್ಥಿರ ವ್ಯವಹಾರ ಪ್ರತಿನಿಧಿಗಳನ್ನು ನಿಯೋಜಿಸಲಾಗಿದೆ. ಮೇಲಿನ ದಿನಾಂಕಕ್ಕೆ ಅನ್ವಯವಾಗುವಂತೆ, ಕೇಂದ್ರಗಳಲ್ಲಿ ಭೌತಿಕ ಬ್ಯಾಂಕ್ ಶಾಖೆಗಳು ಇಲ್ಲ ಮತ್ತು ಸ್ಥಿರ ವ್ಯವಹಾರ ಪ್ರತಿನಿಧಿಗಳ ಸೇವೆಯೂ ಇಲ್ಲದಾಗಿದೆ.

ಆದಾಗ್ಯೂ, ಈ ಎಲ್ಲಾ 56 ಕೇಂದ್ರಗಳನ್ನು ಎಸ್‌ಎಲ್‌ಬಿಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಸದಸ್ಯ ಬ್ಯಾಂಕುಗಳು ಭೌತಿಕ ಬ್ಯಾಂಕ್ ಶಾಖೆ ತೆರೆಯಲು ಅವಕಾಶವಿದೆ. ಈ ಕೇಂದ್ರಗಳಲ್ಲಿ ತೆರೆಯಲಾಗುವ ಶಾಖೆಗಳನ್ನು 2017ರ ಆರ್‌ಬಿಐ ಸುತ್ತೋಲೆಯಂತೆ “ಶಾಖೆಗಳ ನೀತಿ ತರ್ಕಬದ್ಧಗೊಳಿಸುವಿಕೆ” ಅಡಿ, 25% ನಿಯಮಾವಳಿಗಳನ್ನು ಲೆಕ್ಕಹಾಕಲು ಬ್ಯಾಂಕ್

ಸೌಲಭ್ಯವಿಲ್ಲದ ಗ್ರಾಮೀಣ ಕೇಂದ್ರ (ಯು.ಆರ್.ಸಿ.)ಗಳಿಗೆ ಒಳಗೊಳ್ಳುತ್ತವೆ ಎಂದು ಪರಿಗಣಿಸಬಹುದು.

ದಿನಾಂಕ 31.03.2025ರಂದು ಅಥವಾ ಅದಕ್ಕೂ ಮೊದಲು 5ನೇ ಶ್ರೇಣಿಯ ಯು.ಆರ್.ಸಿ.ಗಳಲ್ಲಿ ಕೆನರಾ ಬ್ಯಾಂಕ್(2), ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ(2) ಮತ್ತು ಬ್ಯಾಂಕ್ ಆಫ್ ಬರೋಡಾ(1) ವ್ಯವಹಾರ ಪ್ರತಿನಿಧಿಗಳನ್ನು ನೇಮಿಸಬೇಕು ಎಂದು ಸಂಚಾಲಕರು ಮನವಿ ಮಾಡಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ – 24**

**ಶಾಖೆಗಳ ಜಾಲ:**

ಸಂಚಾಲಕರು ಮಾಹಿತಿ ನೀಡಿ, 30.09.2024ರ ವರೆಗೆ ಇದ್ದ 12,394 ಬ್ಯಾಂಕ್ ಶಾಖೆಗಳ ಸಂಖ್ಯೆಯು 31.12.2024ರ ವರೆಗೆ 12,463ಕ್ಕೆ ಏರಿಕೆಯಾಗಿದೆ. ಇದರೊಂದಿಗೆ, ತ್ರೈಮಾಸಿಕ ಆಧಾರದ ಮೇಲೆ 69 ಶಾಖೆಗಳ ಹೆಚ್ಚಳ ಕಂಡುಬಂದಿದೆ ಎಂದರು.

**ಕಾರ್ಯಸೂಚಿ ವಿಷಯ ಸಂಖ್ಯೆ – 25**

**ಗ್ರಾಮೀಣ ಬ್ಯಾಂಕ್ ಶಾಖೆ ಮುಚ್ಚುವಿಕೆ/ವಿಲೀನ/ಸ್ಥಳಾಂತರದ ಸ್ಥಿತಿಗತಿ:**

ಗ್ರಾಮೀಣ ಬ್ಯಾಂಕ್ ಶಾಖೆ ಮುಚ್ಚುವಿಕೆ/ವಿಲೀನ/ಸ್ಥಳಾಂತರಕ್ಕೆ ಎಸ್‌ಎಲ್‌ಬಿಸಿಯು ಎಲ್‌ಡಿಎಂಗಳಿಂದ ಯಾವುದೇ ಮನವಿ ಸ್ವೀಕರಿಸಿಲ್ಲ.

**ಕಾರ್ಯಸೂಚಿ ವಿಷಯ ಸಂಖ್ಯೆ – 26**

**ಎಟಿಎಂ ನೆಟ್‌ವರ್ಕ್:**

31.12.2024ರ ವರೆಗೆ ಒಟ್ಟು ಎಟಿಎಂಗಳ ಸಂಖ್ಯೆ 16,832 ಇದ್ದು, 30.09.2024ರ ವರೆಗೆ ಅನ್ವಯವಾಗುವಂತೆ 16,638 ಇದ್ದವು. ಹೀಗಾಗಿ 194 ಎಟಿಎಂಗಳ ಹೆಚ್ಚಳ ಕಂಡುಬಂದಿದೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

**ಕಾರ್ಯಸೂಚಿ ವಿಷಯ ಸಂಖ್ಯೆ – 27**

**ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ(ಸಿಎಎಸ್‌ಎ)ಗಳ ನಿರ್ವಹಣೆಯಲ್ಲಿ ಆಧಾರ್ ಜೋಡಣೆಯ ಪ್ರಗತಿ:**

27.12.2024ರ ವರೆಗೆ ಆಧಾರ್ ಜೋಡಣೆಯ ಶೇಕಡಾವಾರು ಪ್ರಮಾಣ 89% ಆಗಿದೆ ಎಂದು ಸಂಚಾಲಕರು ತಿಳಿಸಿದರು.

ಇದಲ್ಲದೆ, ಬ್ಯಾಂಕ್ ಶಾಖೆಗಳನ್ನು ಸಂವೇದನಾಶೀಲಗೊಳಿಸುವಂತೆ ಮತ್ತು ಆಧಾರ್ ಆಧಾರಿತ ಆನ್‌ಲೈನ್ ನೇರ ನಗದು ವರ್ಗಾವಣೆ(ಡಿಬಿಟಿ) ಪಾವತಿ(ಸಾಲ)ಗಳನ್ನು ಹೆಚ್ಚೆಚ್ಚು ಸುಗಮಗೊಳಿಸಲು ಮತ್ತು ಡಿಜಿಟಲ್ ಬ್ಯಾಂಕಿಂಗ್ ಜನಪ್ರಿಯಗೊಳಿಸಲು ಆಧಾರ್

ಜೋಡಣೆಯಲ್ಲಿ ಇನ್ನಷ್ಟು ಸುಧಾರಣೆ ತರುವಂತೆ ಎಲ್ಲಾ ಸದಸ್ಯ ಬ್ಯಾಂಕ್‌ಗಳು ಮತ್ತು ಎಲ್‌ಡಿಎಂಗಳಿಗೆ ಸಂಚಾಲಕರು ಮನವಿ ಮಾಡಿದರು.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕ್‌ಗಳು ಮತ್ತು ಎಲ್‌ಡಿಎಂಗಳು)**

**ಕಾರ್ಯಸೂಚಿ ವಿಷಯ ಸಂಖ್ಯೆ – 28**

**ವಲಯವಾರು ಅನುತ್ಪಾದಕ ಆಸ್ತಿ(ವಸೂಲಾಗದ ಸಾಲ-ಎನ್‌ಪಿಎ) ಸ್ಥಿತಿಗತಿ**

**28.1: 30.09.2024ರ ವರೆಗೆ ಅನ್ವಯವಾಗುವಂತೆ, ಅನುತ್ಪಾದಕ ಸ್ವತ್ತುಗಳ ಸ್ಥಿತಿಗತಿ:**

31.12.2024 ರಂತೆ ಒಟ್ಟು ಅನುತ್ಪಾದಕ ಆಸ್ತಿಗಳ ಮೊತ್ತ 53,267 ಕೋಟಿ ರೂ.ಗಳಷ್ಟಿವೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

**<u>28.2: ಪಿಎಂಇಜಿಪಿ ಅಡಿ, ಬ್ಯಾಂಕ್ ಬಾಕಿಗಳ ವಸೂಲಿ:</u>**

ಪಿಎಂಇಜಿಪಿ ಅಡಿ, ಎನ್‌ಪಿಎ ಪಾಲು 22% ಇದೆ ಎಂದು ಸಂಚಾಲಕರು ಸಭೆಗೆ ಮಾಹಿತಿ ನೀಡಿದರು. ಈ ಯೋಜನೆಯಲ್ಲಿ ಶೇಕಡಾವಾರು ಎನ್‌ಪಿಎ ತುಂಬಾ ಹೆಚ್ಚಿರುವುದರಿಂದ ವಸೂಲಾತಿಗಾಗಿ ಬ್ಯಾಂಕುಗಳಿಗೆ ಅಗತ್ಯ ಬೆಂಬಲ ನೀಡುವಂತೆ ಕರ್ನಾಟಕ ಸರ್ಕಾರದ ಎಸಿಎಸ್ & ಡಿಸಿ ಅವರು ಸಂಬಂಧಪಟ್ಟ ಇಲಾಖೆಗಳಿಗೆ ಮನವಿ ಮಾಡಿದರು.

**(ಕ್ರಮ: ಕೆವಿಐಸಿ, ಕೆವಿಐಬಿ ಮತ್ತು ಡಿಐಸಿ ಇಲಾಖೆಗಳು ಮತ್ತು ಸದಸ್ಯ ಬ್ಯಾಂಕ್‌ಗಳು)**

**<u>ಕಾರ್ಯಸೂಚಿ ವಿಷಯ ಸಂಖ್ಯೆ – 29</u>**

ಡಿಸಿಸಿ/ಡಿಎಲ್‌ಆರ್‌ಸಿ ಸಭೆಯಲ್ಲಿ ಬಗೆಹರಿಯದೆ ಉಳಿದಿರುವ ಸಮಸ್ಯೆಗಳು:

**1. ಶಿವಮೊಗ್ಗ ಜಿಲ್ಲೆ:** ಭದ್ರಾವತಿ ಬ್ಲಾಕ್‌ನಲ್ಲಿ ಹಣಕಾಸು ಸಾಕ್ಷರತಾ ಕೇಂದ್ರ (ಎಫ್‌ಎಲ್‌ಸಿ)ಕ್ಕೆ ಸಲಹೆಗಾರ(ಕೌನ್ಸಿಲರ್)ರನ್ನು ಎಸ್‌ಬಿಐ ನೇಮಿಸದಿರುವ ಕುರಿತು ಸಂಸದರು ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ, ಈ ಎಫ್‌ಎಲ್‌ಸಿ 31.08.2023ರಿಂದ ಖಾಲಿ ಇದೆ ಎಂದು ಸಭೆಯ ಗಮನಕ್ಕೆ ತರಲಾಯಿತು.

**2. ವಿಜಯಪುರ ಜಿಲ್ಲೆ:** ದೇವರ ಹಿಪ್ಪರಗಿ ಹೊಸ ತಾಲೂಕಿನ ಹನ್ ಶ್ಯಾಲ್ ಗ್ರಾಮದಲ್ಲಿ ಆದಷ್ಟು ಬೇಗ ಹೊಸ ಶಾಖೆ ತೆರೆಯಲು ನಿರ್ಧಾರ ಮರುಪರಿಶೀಲಿಸುವಂತೆ ಸಭೆಯಲ್ಲಿ ಅಧ್ಯಕ್ಷರು ಸೂಚನೆ ನೀಡಿದರು. ಇಲ್ಲಿ ಶಾಖೆ ತೆರೆಯಲು ಐಸಿಐಸಿಐ ಬ್ಯಾಂಕ್ ಗೆ ಹಂಚಿಕೆ ಮಾಡಲಾಗಿದೆ.

ಈ ಗ್ರಾಮದಲ್ಲಿ ಯಾವುದೇ ಸ್ಥಿರ ವ್ಯವಹಾರ ಪ್ರತಿನಿಧಿಗಳು ಅಥವಾ ಪಾವತಿ ಬ್ಯಾಂಕ್ ಇದೆಯೇ ಎಂಬುದನ್ನು ಪರಿಶೀಲಿಸುವಂತೆ ಕರ್ನಾಟಕ ಸರ್ಕಾರದ ಎಸಿಎಸ್**&**ಡಿಸಿ ಅವರು

ಎಸ್ಎಲ್‌ಬಿಸಿಗೆ ಸೂಚಿಸಿದರು. ವ್ಯವಹಾರ ಪ್ರತಿನಿಧಿ ಅಥವಾ ಪಾವತಿ ಬ್ಯಾಂಕ್ ಇಲ್ಲದಿದ್ದರೆ ಹನ್ ಶ್ಯಾಲ್ ಗ್ರಾಮದಲ್ಲಿ ಭೌತಿಕ ಬ್ಯಾಂಕ್ ಶಾಖೆ ತೆರೆಯಲು ಬ್ಯಾಂಕಿಗೆ ಹಂಚಿಕೆ ಮಾಡಬೇಕು ಎಂದು ಸೂಚಿಸಿದರು.

**(ಕ್ರಮ: ಎಸ್ಎಲ್‌ಬಿಸಿ)**

**<u>ಕಾರ್ಯಸೂಚಿ ವಿಷಯ ಸಂಖ್ಯೆ</u>** <u>– 30</u>

**<u>ಪರಾಮರ್ಶೆ ಸಮಯದಲ್ಲಿ ನಡೆದ ಉಪಸಮಿತಿ ಸಭೆಗಳು:</u>**

ಸೆಪ್ಟೆಂಬರ್ 2024ರ ದುರ್ಬಲ ವರ್ಗಗಳ(ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ) ಉಪಸಮಿತಿ ಸಭೆ, ಸೆಪ್ಟೆಂಬರ್ 2024ರ ಪುನಶ್ಚೇತನ ಮತ್ತು ಪುನರ್ವಸತಿ(ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ) ಉಪಸಮಿತಿ ಸಭೆ, 2024ರ ಜೂನ್ ಮತ್ತು ಸೆಪ್ಟೆಂಬರ್ ಆರ್‌ಎಸ್ಇಟಿಐ(ಎಸ್‌ಬಿಐ) ಉಪಸಮಿತಿ ಸಭೆ, 2024ರ ಸೆಪ್ಟೆಂಬರ್ ಎಂಎಸ್ಎಂಇ ಉಪಸಮಿತಿ ಸಭೆ(ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ) ಮತ್ತು ಸೆಪ್ಟೆಂಬರ್‌ನಲ್ಲಿ ಚಿಲ್ಲರೆ ವ್ಯಾಪಾರದ ಉಪಸಮಿತಿ ಸಭೆ(ಬ್ಯಾಂಕ್ ಆಫ್ ಬರೋಡಾ)ಗಳನ್ನು ಸಂಚಾಲಕ ಬ್ಯಾಂಕ್ ಗಳು ನಡೆಸಿಲ್ಲ ಎಂದು ಸಂಚಾಲಕರು ಸದನಕ್ಕೆ ತಿಳಿಸಿದರು.

ಮೇಲಿನ ಸಭೆಗಳನ್ನು ತಕ್ಷಣವೇ ನಡೆಸಿ ನಡಾವಳಿಗಳನ್ನು ಎಸ್ಎಲ್‌ಬಿಸಿಗೆ ಹಂಚಿಕೊಳ್ಳುವಂತೆ ಅಧ್ಯಕ್ಷರು, ಸದಸ್ಯ ಸಂಚಾಲಕ ಬ್ಯಾಂಕ್ ಗಳಿಗೆ ಮನವಿ ಮಾಡಿದರು.

**(ಕ್ರಮ: ಎಸ್‌ಬಿಐ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಬ್ಯಾಂಕ್ ಆಫ್ ಬರೋಡಾ)**

**<u>ಕಾರ್ಯಸೂಚಿ ವಿಷಯ ಸಂಖ್ಯೆ</u>** <u>– 31.1</u>

ಸ್ವಾಮಿತ್ವ**(**ಗ್ರಾಮೀಣ ಪ್ರದೇಶಗಳಲ್ಲಿ ಸುಧಾರಿತ ತಂತ್ರಜ್ಞಾನದೊಂದಿಗೆ ಗ್ರಾಮಗಳ ಸಮೀಕ್ಷೆ ಮತ್ತು ನಕ್ಷೆ ರಚನೆ) ಯೋಜನೆ:

ಡ್ರೋನ್ ಸಮೀಕ್ಷೆ ತಂತ್ರಜ್ಞಾನ ಬಳಸಿಕೊಂಡು ಅಬಾದಿ(ಗ್ರಾಮೀಣ ವಸತಿ ಪ್ರದೇಶ) ಪ್ರದೇಶಗಳ ಗಡಿ ಗುರುತಿಸುವಿಕೆಯನ್ನು ಪಂಚಾಯತ್ ರಾಜ್ ಸಚಿವಾಲಯ**,** ರಾಜ್ಯ ಪಂಚಾಯತ್ ರಾಜ್ ಇಲಾಖೆ**,** ರಾಜ್ಯ ಕಂದಾಯ ಇಲಾಖೆ ಮತ್ತು ಸರ್ವೇ ಆಫ್ ಇಂಡಿಯಾ ಸಹಭಾಗಿತ್ವದಲ್ಲಿ ಮಾಡಲಾಗುವುದು ಎಂದು ಸಂಚಾಲಕರು ಮಾಹಿತಿ ನೀಡಿದರು.

ಸ್ವಾಮಿತ್ವ ಯೋಜನೆಯಡಿ ನೀಡಲಾದ ಆಸ್ತಿ ಕಾರ್ಡ್‌ಗಳು ಸಂಪೂರ್ಣ ಮಾಲೀಕತ್ವ ಹಕ್ಕುಗಳನ್ನು ಜತೆಗೆ, ಬೇಷರತ್ತಾದ ವರ್ಗಾವಣೆಯ ಹಕ್ಕನ್ನು ನೀಡುತ್ತವೆ. ಹಾಗಾಗಿ, ಸಂಬಂಧಿಸಿದ ರಾಜ್ಯ ಸರ್ಕಾರಿ ಇಲಾಖೆಗಳು ಈ ಕಾರ್ಡುಗಳಿಗೆ ಅಗತ್ಯ ಶಾಸಕಾಂಗ ಬದಲಾವಣೆಗಳನ್ನು ತರಬೇಕೆಂದು ನಾವು ಮನವಿ ಮಾಡುತ್ತೇವೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

---

## 31.2. ಬ್ಯಾಂಕುಗಳಿಂದ ಕನ್ನಡ ಭಾಷೆಯ ಅನುಷ್ಠಾನ.

ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಲ್‌ಡಿಎಂಗಳು ಈ ಕೆಳಗಿನ ಅಂಶಗಳನ್ನು ಖಚಿತಪಡಿಸಿಕೊಳ್ಳುವಂತೆ ಸಂಚಾಲಕರು ಮನವಿ ಮಾಡಿದರು:

1) ಎಲ್ಲಾ ಶಾಖೆಗಳಲ್ಲಿ ಖಾತೆ ತೆರೆಯುವ ನಮೂನೆಗಳು, ಸಾಲದ ಅರ್ಜಿಗಳು, ಚಲನ್‌ಗಳು ಇತ್ಯಾದಿಗಳ ಲಭ್ಯತೆ ಕನ್ನಡ ಭಾಷೆಯಲ್ಲಿರಬೇಕು.

2) ಬ್ಯಾಂಕ್ ಎಟಿಎಂಗಳು, ಬಿಎನ್‌ಎ(Bulk Note Acceptor)ಗಳು, ಸೈನ್ ಬೋರ್ಡ್‌ಗಳು, ಲೆಟರ್ ಹೆಡ್‌ಗಳು, ಬ್ಯಾಂಕ್/ಶಾಖೆಯ ಸೀಲ್ ಮತ್ತು ಆರ್‌ಎಸ್‌ಇ ಟಿಐಗಳು/ರುಡ್ ಸೆಟ್ ಗಳು ಮತ್ತು ಎಫ್‌ಎಲ್‌ಸಿಗಳಲ್ಲಿ ಕನ್ನಡ ಭಾಷೆ ಬಳಸಬೇಕು.

ಕನ್ನಡೇತರ ಉದ್ಯೋಗಿಗಳಿಗೆ ಕನ್ನಡ ಭಾಷಾ ತರಬೇತಿ ನೀಡುವುದನ್ನು ಖಚಿತಪಡಿಸಬೇಕು ಎಂದು ಎಸ್‌ಎಲ್‌ಬಿಸಿ, ಸದಸ್ಯ ಬ್ಯಾಂಕುಗಳಿಗೆ ಮನವಿ ಮಾಡಿತು. ಇದಲ್ಲದೆ, ಬ್ಯಾಂಕುಗಳು ತ್ರೈಮಾಸಿಕ ಆಧಾರದ ಮೇಲೆ ನಡೆಸಿದ ತರಬೇತಿಗಳ ಬಗ್ಗೆ ಎಸ್‌ಎಲ್‌ಬಿಸಿಗೆ ವಿವರ ನೀಡುವಂತೆ ಕೋರಲಾಯಿತು. ಹೆಚ್ಚುವರಿಯಾಗಿ, ಬ್ಯಾಂಕುಗಳಲ್ಲಿ ಕನ್ನಡ ಭಾಷೆಯ ಅನುಷ್ಠಾನಕ್ಕೆ ಸಂಬಂಧಿಸಿದ ಅನುಬಂಧವನ್ನು ಸಲ್ಲಿಸುವಂತೆ ಎಸ್‌ಎಲ್‌ಬಿಸಿ, ಎಲ್ಲಾ ಸದಸ್ಯ ಬ್ಯಾಂಕುಗಳಿಗೆ ತಿಳಿಸಿದೆ.

**(ಕ್ರಮ: ಎಲ್ಲಾ ಸದಸ್ಯ ಬ್ಯಾಂಕುಗಳು ಮತ್ತು ಎಲ್‌ಡಿಎಂಗಳು)**

## 31.3: 31.12.2024ರ ವರೆಗೆ ಅನ್ವಯವಾಗುವಂತೆ, ಪ್ರಾಯೋಜಕ ಬ್ಯಾಂಕುಗಳು ವರದಿ ಮಾಡಿದಂತೆ ಆರ್‌ಎಸ್‌ಇಟಿಐಗಳು / ರುಡ್ ಸೆಟ್ ಗಳ ಸ್ಥಿತಿಗತಿ ಹೀಗಿದೆ:

31.12.2024ರ ವರೆಗೆ ಅನ್ವಯವಾಗುವಂತೆ, ಒಟ್ಟು 1,027 ತರಬೇತಿ ನೀಡಬೇಕೆಂಬ ಗುರಿಗೆ ಪ್ರತಿಯಾಗಿ 845 ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ ಎಂದು ಸಂಚಾಲಕರು ಸಭೆಗೆ ಮಾಹಿತಿ ನೀಡಿದರು.

## 31.4: ಕರ್ನಾಟಕ ರಾಜ್ಯದಲ್ಲಿ ರುಡ್ ಸೆಟ್(7)/ಆರ್‌ಎಸ್‌ಇಟಿಐ(24)ಗಳ ಕಾರ್ಯ ನಿರ್ವಹಣೆ ಮತ್ತು ಕಾರ್ಯಕ್ಷಮತೆ:

2024-25ರ ಹಣಕಾಸು ವರ್ಷದಲ್ಲಿ 4,13,693 ವ್ಯಕ್ತಿಗಳಿಗೆ ತರಬೇತಿ ನೀಡಲಾಗಿದೆ, ಅದರಲ್ಲಿ 1,82,562 ಜನರನ್ನು ಸಾಲ ಸೌಲಭ್ಯಗಳಿಗೆ ಸಂಪರ್ಕ ಕಲ್ಪಿಸಲಾಗಿದೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು.

**(ಕ್ರಮ: ಆರ್‌ಎಸ್‌ಇಟಿಐ/ ರುಡ್ ಸೆಟ್ ರಾಜ್ಯ ನಿರ್ದೇಶಕರು, ಆರ್‌ಎಸ್‌ಇಟಿಐ ಎಸ್‌ಎಲ್‌ಬಿಸಿ ಉಪಸಮಿತಿ ಸಂಚಾಲಕರು ಮತ್ತು ಕರ್ನಾಟಕ ಸರ್ಕಾರದ ಕೌಶಲ್ಯ ಅಭಿವೃದ್ಧಿ ಇಲಾಖೆ)**

## 31.5: ರಾಜ್ಯದಲ್ಲಿ ಆಧಾರ್ ನೋಂದಣಿ ಕೇಂದ್ರಗಳ(ಎಇಸಿ) ಸ್ಥಿತಿಗತಿ:

ಎಲ್ಲಾ ಬ್ಯಾಂಕುಗಳು ಆಧಾರ್ ನೋಂದಣಿ ಸುಧಾರಿಸಬೇಕು ಮತ್ತು ಗರಿಷ್ಠ ನೋಂದಣಿ/ಪರಿಷ್ಕರಣೆ ಕೈಗೊಳ್ಳಬೇಕು ಎಂದು ಎಸ್‌ಎಲ್‌ಬಿಸಿ ಮನವಿ ಮಾಡಿತು. ಎಲ್ಲಾ ಸದಸ್ಯ ಬ್ಯಾಂಕುಗಳು ಮಹತ್ವಾಕಾಂಕ್ಷೆಯ ಜಿಲ್ಲೆಗಳಲ್ಲಿ ಅಂದರೆ ರಾಯಚೂರು ಮತ್ತು ಯಾದಗಿರಿಯಲ್ಲಿ ನೋಂದಣಿ/ಪರಿಷ್ಕರಣೆಗಳಿಗೆ ಹೆಚ್ಚಿನ ಗಮನ ಹರಿಸಬೇಕೆಂದು ಎಸ್‌ಎಲ್‌ಬಿಸಿ ಮನವಿ ಮಾಡಿತು.

## 31.6: ಕೇಂದ್ರ ವಲಯ ಬಡ್ಡಿ ಸಬ್ಸಿಡಿ(ಸಿಎಸ್‌ಐಎಸ್) ಯೋಜನೆ ಕಾರ್ಯಕ್ಷಮತೆಯ ಪರಾಮರ್ಶೆ

ಕೇಂದ್ರ ವಲಯದ ಬಡ್ಡಿ ಸಬ್ಸಿಡಿ(ಸಿಎಸ್‌ಐಎಸ್) ಯೋಜನೆಯ ಕಾರ್ಯಕ್ಷಮತೆಯ ಪರಾಮರ್ಶೆಗೆ ಸಂಬಂಧಿಸಿದಂತೆ ಎಸ್‌ಎಲ್‌ಬಿಸಿ, ಹಣಕಾಸು ಸೇವೆಗಳ ಇಲಾಖೆಯಿಂದ ಸಂವಹನ ಸ್ವೀಕರಿಸಿದೆ. ಈ ಯೋಜನೆಯಡಿ, ಎಲ್ಲಾ ಮೂಲಗಳಿಂದ 4.5 ಲಕ್ಷ ರೂ.ವರೆಗೆ ಪೋಷಕರ ವಾರ್ಷಿಕ ಆದಾಯ ಹೊಂದಿರುವ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ, "ಸಾಲ ಮರುಪಾವತಿ ವಿರಾಮ ಅವಧಿ(ಮೊರಟೋರಿಯಂ ಪೀರಿಯಡ್)" ಅಂದರೆ ಕೋರ್ಸ್ ಅವಧಿ ಮತ್ತು ಶೆಡ್ಯೂಲ್ಡ್ ಬ್ಯಾಂಕ್‌ಗಳಿಂದ ಪಡೆದ ಶಿಕ್ಷಣ ಸಾಲದ ಮೇಲೆ 1 ವರ್ಷದ ಅವಧಿಗೆ ಬಡ್ಡಿ ಸಬ್ಸಿಡಿ ನೀಡಲಾಗುತ್ತದೆ.

ಎಲ್ಲಾ ಸದಸ್ಯ ಬ್ಯಾಂಕ್‌ಗಳು ಪರಾಮರ್ಶೆ ಉದ್ದೇಶಕ್ಕಾಗಿ ಅರ್ಹ ಖಾತೆಗಳ ಪಟ್ಟಿ ಒದಗಿಸಬೇಕು ಎಂದು ಎಸ್‌ಎಲ್‌ಬಿಸಿ ಮನವಿ ಮಾಡಿತು.

## **ಕಾರ್ಯಸೂಚಿ ವಿಷಯ ಸಂಖ್ಯೆ –** 32

**ಯಶೋಗಾಥೆಗಳು**:

ಗೌರಿಶಂಕರ್ ಫುಡ್ ಇಂಡಸ್ಟ್ರೀಸ್ ಕೆನರಾ ಬ್ಯಾಂಕಿನಿಂದ ಪ್ರಧಾನ ಮಂತ್ರಿ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳ ಔಪಚಾರೀಕರಣ(ಪಿಎಂಎಫ್‌ಎಂಇ) ಯೋಜನೆಯಡಿ ಸಾಲ ಪಡೆದು 10 ಜನರಿಗೆ ಉದ್ಯೋಗ ಕಲ್ಪಿಸಿದೆ ಎಂದು ಸಂಚಾಲಕರು ಸಭೆಗೆ ತಿಳಿಸಿದರು. ಅದೇ ರೀತಿ ಅಭಯ್ ನ್ಯಾಚುರಲ್ಸ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ ಪಿಎಂಎಫ್‌ಎಂಇ ಸಾಲ ಪಡೆದು 10 ಜನರಿಗೆ ಉದ್ಯೋಗ ಕಲ್ಪಿಸಿದೆ.

## 33. ವಿಶೇಷ ಆಹ್ವಾನಿತರು

ಶ್ರೀ ಯು. ಧರ್ಮ ರಾವ್ ಅವರು ಕಳೆದ 25 ವರ್ಷಗಳಿಂದ ನವದೆಹಲಿ, ಹೈದರಾಬಾದ್, ಮುಂಬೈ ಮತ್ತು ಕೋಲ್ಕೊತಾದ "ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ(ಎಪಿಇಡಿಎ)"ದ ಪ್ರಾದೇಶಿಕ ಕಚೇರಿಯಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಪ್ರಸ್ತುತ ಅವರು, ಕರ್ನಾಟಕ ಮತ್ತು ಕೇರಳ ರಾಜ್ಯಗಳನ್ನು ಒಳಗೊಂಡಂತೆ ಬೆಂಗಳೂರಿನಲ್ಲಿರುವ

ಎಪಿಇಡಿಎ ಪ್ರಧಾನ ಕಚೇರಿಯಲ್ಲಿ ಸಹಾಯಕ ಜನರಲ್ ಮ್ಯಾನೇಜರ್ ಮತ್ತು ಪ್ರಾದೇಶಿಕ ಮುಖ್ಯಸ್ಥರ ಹುದ್ದೆಯನ್ನು ನಿರ್ವಹಿಸುತ್ತಿದ್ದಾರೆ.

ಅವರು ವಿವಿಧ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರದರ್ಶನಗಳು, ಸಮ್ಮೇಳನ ಮತ್ತು ತರಬೇತಿ ಕಾರ್ಯಕ್ರಮಗಳಲ್ಲಿ ಎಪಿಇಡಿಎ ಅನ್ನು ಪ್ರತಿನಿಧಿಸಿದ್ದಾರೆ. ಅವರು ರಫ್ತಿಗೆ ಸಂಬಂಧಿಸಿದ ಹಲವಾರು ಸಂಸ್ಥೆಗಳ ಮಂಡಳಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಕೆನರಾ ಬ್ಯಾಂಕ್ केनरा बैंक Canara Bank

ಸಿಂಡಿಕೇಟ್ सिंडिकेट Syndicate

ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ

ಸಂಚಾಲಕರು: ಕೆನರಾ ಬ್ಯಾಂಕ್

---

## ಎಸ್‌ಎಲ್‌ಬಿಸಿ – ಕರ್ನಾಟಕ

## ಸಭೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳ ಪಟ್ಟಿ

## 27.02.2025ರಂದು ಜರುಗಿದ 168ನೇ ಎಸ್‌ಎಲ್‌ಬಿಸಿ ಸಭೆ

| ಸರಣಿ ಸಂಖ್ಯೆ | ಹೆಸರು ಶ್ರೀಯುತರು - | ಹುದ್ದೆ | ಸಂಸ್ಥೆ |
|---|---|---|---|
| 1 | ಶ್ರೀಮತಿ ಉಮಾ ಮಹಾದೇವನ್ | ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು | ಕರ್ನಾಟಕ ಸರ್ಕಾರ |
| 2 | ಶ್ರೀ ಭವೇಂದ್ರ ಕುಮಾರ್ | ಕಾರ್ಯನಿರ್ವಾಹಕ ನಿರ್ದೇಶಕರು | ಕೆನರಾ ಬ್ಯಾಂಕ್ |
| 3 | ಡಾ. ವಿಶಾಲ್ ಆರ್ | ಸರ್ಕಾರದ ಕಾರ್ಯದರ್ಶಿ. ಹಣಕಾಸು ಇಲಾಖೆ(ಹಣಕಾಸು ಸುಧಾರಣೆಗಳು) | ಕರ್ನಾಟಕ ಸರ್ಕಾರ |
| 4 | ಪಿ ಐ ಶ್ರೀವಿದ್ಯಾ | ವ್ಯವಸ್ಥಾಪಕ ನಿರ್ದೇಶಕರು | ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ |
| 5 | ಶ್ರೀ. ಕೆ.ವಿ.ಎಸ್.ಎಸ್.ಎಲ್.ವಿ. ಪ್ರಸಾದ ರಾವ್ | ಮುಖ್ಯ ಪ್ರಧಾನ ವ್ಯವಸ್ಥಾಪಕರು | ನಬಾರ್ಡ್ |
| 6 | ಶ್ರೀ ಭಾಸ್ಕರ ಚಕ್ರವರ್ತಿ ಎಂ | ಸಂಚಾಲಕರು | ಎಸ್‌ಎಲ್‌ಬಿಸಿ-ಕರ್ನಾಟಕ |
| 7 | ಶ್ರೀ ವಿ ಹರಿಪ್ರಸಾದ್ | ಉಪ ಪ್ರಧಾನ ವ್ಯವಸ್ಥಾಪಕರು | ಆರ್‌ಬಿಐ |
| **ಸಂಚಾಲಕರು - ಕೆನರಾ ಬ್ಯಾಂಕ್** | | | |
| 8 | ಪ್ರದೀಪ್ ಕುಮಾರ್ ಹೆಚ್ | ವಿಭಾಗೀಯ ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 9 | ಅಮೋಲ್ ಆರ್ ಅಕೋಲ್ಕರ್ | ವ್ಯವಸ್ಥಾಪಕರು - ಎಸ್‌ಎಲ್‌ಬಿಸಿ | ಕೆನರಾ ಬ್ಯಾಂಕ್ |
| 10 | ವಿದ್ಯಾ | ವ್ಯವಸ್ಥಾಪಕರು - ಎಸ್‌ಎಲ್‌ಬಿಸಿ | ಕೆನರಾ ಬ್ಯಾಂಕ್ |
| 11 | ಚೇತನ್ ಕೆ ಎಸ್ | ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 12 | ವಿಕಾಸ್ ಠಾಕೂರ್ | ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 13 | ಹರ್ಷ | ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 14 | ಅಖಿಲ್ ಆರ್ | ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| **ಸದಸ್ಯ ಬ್ಯಾಂಕುಗಳು ಮತ್ತು ರಾಜ್ಯ ಸರ್ಕಾರಿ ಇಲಾಖೆಗಳು** | | | |
| 15 | ಮಹೇಶ್ ಎಂ ಪೈ | ಪ್ರಧಾನ ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 16 | ಪ್ರಫುಲ್ ಕುಮಾರ್ ಜೆನಾ | ಪ್ರಧಾನ ವ್ಯವಸ್ಥಾಪಕರು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| 17 | ವಿಕಾಸ್ ವಸಿಷ್ಠ | ಉಪ ಪ್ರಧಾನ ವ್ಯವಸ್ಥಾಪಕರು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| 18 | ಬುಬುಲ್ ಬಾಡೋರ್ಲೋಯ್ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಆರ್‌ಬಿಐ |

| | | | |
|---|---|---|---|
| 19 | ರವಿ ಪಾಠಕ್ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಬ್ಯಾಂಕ್ ಆಫ್ ಬರೋಡಾ |
| 20 | ರಾಘವೇಂದ್ರ ರಾವ್ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| 21 | ಮಹದೇವಸ್ವಾಮಿ | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| 22 | ಸವಿತಾ ಆರ್ | ವಿಭಾಗೀಯ ವ್ಯವಸ್ಥಾಪಕರು | ಕೆನರಾ ಬ್ಯಾಂಕ್ |
| 23 | ಎಸ್ ಪ್ರಶಾಂತ | ಮುಖ್ಯ ವ್ಯವಸ್ಥಾಪಕರು | ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ |
| 24 | ಸುನಿಲ್ ಕುರ್ತಕೋಟಿ | ಹಣಕಾಸು ಸಲಹೆಗಾರರು | ಕರ್ನಾಟಕ ಸರ್ಕಾರ |
| 25 | ವೆಂಕಟ ಅನಿಲ್ | ಪ್ರಾದೇಶಿಕ ಮುಖ್ಯಸ್ಥರು, ಉಪಾಧ್ಯಕ್ಷರು | ಹೆಚ್.ಡಿ.ಎಫ್.ಸಿ. ಬ್ಯಾಂಕ್ |
| 26 | ಸುಮನ್ ಗುಪ್ತಾ | ಸಹಾಯಕ ಉಪಾಧ್ಯಕ್ಷರು | ಕೋಟಕ್ ಮಹೀಂದ್ರಾ ಬ್ಯಾಂಕ್ |
| 27 | ಗಿರೀಶ್ ಪಿ ಉಪಾಧ್ಯಾಯ | ಮುಖ್ಯ ವ್ಯವಸ್ಥಾಪಕರು | ಕರ್ನಾಟಕ ಬ್ಯಾಂಕ್ |
| 28 | ವೆಂಕಟೇಶ್ ಹೆಚ್ ಟಿ | ಹಿರಿಯ ವ್ಯವಸ್ಥಾಪಕರು | ಬ್ಯಾಂಕ್ ಆಫ್ ಬರೋಡಾ |
| 29 | ಮೀನಾ ಕುಮಾರಿ | ಉಪ ಪ್ರಧಾನ ವ್ಯವಸ್ಥಾಪಕರು | ಕೆಎಸ್‌ಸಿ ಅಪೆಕ್ಸ್ ಬ್ಯಾಂಕ್ |
| 30 | ಮಂಕು ಭಟ್ಟಾಚಾರ್ಜಿ | ರಾಜ್ಯ ಸಂಯೋಜಕರು (ಸಮನ್ವಯಾಧಿಕಾರಿ) | ಐಸಿಐಸಿಐ ಬ್ಯಾಂಕ್ |
| 31 | ರಾಜೇಶ್ ಬಿ | ವ್ಯವಸ್ಥಾಪಕರು | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| 32 | ಗುರುಸಿದ್ದೇಶ್ ಜಿ ಎಸ್ | ಶಾಖಾ ವ್ಯವಸ್ಥಾಪಕರು | ಸೂರ್ಯೋದಯ ಸ್ಮಾಲ್ ಫೈನಾನ್ಸ್ ಬ್ಯಾಂಕ್ |
| 33 | ವಿಪಿನ್ ಶಿವದಾಸ್ | ಆರ್‌ಬಿಸಿಎಂ | ಐಡಿಎಫ್‌ಸಿ ಫಸ್ಟ್ ಬ್ಯಾಂಕ್ |
| 34 | ರಾಜ್‌ಕುಮಾರ್ | ಹಿರಿಯ ವ್ಯವಸ್ಥಾಪಕರು | ಇಎಸ್‌ಎಎಫ್ ಬ್ಯಾಂಕ್ |
| 35 | ರಾಜೇಂದ್ರ | ಪಿಎಚ್ | ಫಿನೋ ಪೇಮೆಂಟ್ಸ್ ಬ್ಯಾಂಕ್ |
| 36 | ಎನ್ ಪೃಥ್ವಿಕಾಂತ್ ರೆಡ್ಡಿ | ಸಹಾಯಕ ವ್ಯವಸ್ಥಾಪಕರು | ನಬಾರ್ಡ್ |
| 37 | ವಿ ಜೆ ವೆಂಕಟೇಶ್ | ಸಿಇಒ | ಕೆವಿಐಬಿ |
| 38 | ನಾರಾಯಣ್ ಕೆ | ಜಂಟಿ ನಿರ್ದೇಶಕರು | ಎಂಎಸ್‌ಎಂಇ ಇಲಾಖೆ, ಕರ್ನಾಟಕ ಸರ್ಕಾರ |
| 39 | ಮೇಘನಾ ಬಿ ವಿ | ಎಸ್‌ಡಿಇ | ಕೆಎಸ್‌ಡಿಬಿ |
| 40 | ಬಿ ಬಸವರಾಜ | ಸಹಾಯಕ ನಿರ್ದೇಶಕರು | ಕೆಎಸ್‌ಡಿಬಿ |
| 41 | ಡಾ. ಎಂ ಆರ್ ರವಿ | ಜಂಟಿ ನಿರ್ದೇಶಕರು | ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳು |
| 42 | ಎಚ್ ಬಾಲಶೇಖರ್ | ಹೆಚ್ಚುವರಿ ಆರ್‌ಸಿಎಸ್/ಕ್ರೆಡಿಟ್ | ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ |
| 43 | ಎಂ ಕೆ ಜಗದೀಶ್ | ಸಿಇಒ | ಕೆಎಸ್‌ಸಿ ಅಪೆಕ್ಸ್ ಬ್ಯಾಂಕ್ |
| 44 | ಎಲ್ಲಾ ಸದಸ್ಯ ಬ್ಯಾಂಕುಗಳು, ಎಲ್ಲಾ ರಾಜ್ಯ ಸರ್ಕಾರಿ ಇಲಾಖೆಗಳು ಮತ್ತು ಎಲ್‌ಡಿಎಂಗಳು | ವೀಡಿಯೊ ಕಾನ್ಫರೆನ್ಸ್ ಮೂಲಕ | |

ಕೆನರಾ ಬ್ಯಾಂಕ್ केनरा बैंक Canara Bank

ಸಿಂಡಿಕೇಟ್ सिंडिकेट Syndicate

**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**

**ಸಂಚಾಲಕರು: ಕೆನರಾ ಬ್ಯಾಂಕ್**

---

# ಎಸ್‌ಎಲ್‌ಬಿಸಿ ಸಭೆಯ ಚಿತ್ರನೋಟ






**ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ: ಕರ್ನಾಟಕ**

**ಸಂಚಾಲಕರು: ಕೆನರಾ ಬ್ಯಾಂಕ್**

---




**************************